17 February 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ನೆಮ್ಮದಿ ಹಾಳು ಮಾಡಿ ನೋವು ಕೊಟ್ಟವರನ್ನು ಮರೆತು ಬಿಡಬೇಕು! ಆದರೆ ಅವರು ಕಲಿಸಿದ ಪಾಠ ಮಾತ್ರ ಎಂದೂ ಮರೆಯಬಾರದು!

-ಸ್ನೇಹಾ ಆನಂದ್



ಭೂ ಕಬಳಿಕೆ ವಿರುದ್ಧ ಕ್ರಮವಹಿಸಿ: ಶಾಸಕ ಶ್ರೀವತ್ಸ ಗಡುವು — ಪುಟ ಸಂ. 2


ಶ್ರೀ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಸಂಭ್ರಮ: ಭಕ್ತ ಜನಸಾಗರ, — ಪುಟ ಸಂ. 3


ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲ: ಎನ್.ಮಹೇಶ್ — ಪುಟ ಸಂ. 4


info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 101 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸುಬ್ಬಾರೆಡ್ಡಿ ಶಾಸಕತ್ವ ಅಸಿಂಧು

### ಆಸ್ತಿ ವಿವರ, ಕ್ರಿಮಿನಲ್ ಕೇಸ್ ಮುಚ್ಚಿಟ್ಟಿದ್ದಕ್ಕೆ ಹೈಕೋರ್ಟ್ ಆದೇಶ






**ಬೆಂಗಳೂರು:** ಬಾಗೇಪಲ್ಲಿ ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿ ಅವರ ಶಾಸಕ ಸ್ಥಾನ ಅಸಿಂಧುಗೊಳಿಸಿ ಹೈಕೋರ್ಟ್ ಸೋಮವಾರ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಪೀಠ ಈ ಆದೇಶ ನೀಡಿದೆ. ಸುಬ್ಬಾರೆಡ್ಡಿ ನಾಮಪತ್ರ ಸಲ್ಲಿಕೆ ವೇಳೆ ಸಂಪೂರ್ಣ ಆಸ್ತಿ ಘೋಷಣೆ ಮಾಡಿಲ್ಲ. ಕ್ರಿಮಿನಲ್ ಕೇಸ್‌ಗಳ ಮಾಹಿತಿಯನ್ನು ಮರೆಮಾಚಿದ್ದಾರೆ ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ಮುನಿರಾಜು 2023 ಜೂನ್ 24 ರಂದು ಹೈಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಆಸ್ತಿ ಮಾಹಿತಿಯನ್ನು ಉಲ್ಲಂಘನೆ ಮಾಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಸುಬ್ಬಾರೆಡ್ಡಿ ಶಾಸಕ ಸ್ಥಾನವನ್ನು ಹೈಕೋರ್ಟ್ ಅಸಿಂಧುಗೊಳಿಸಿದೆ.

ಕೋರ್ಟ್ ಆದೇಶವನ್ನು ಒಂದು ತಿಂಗಳ ಕಾಲ ಅಮಾನತಿನಲ್ಲಿಡಲು ಸುಬ್ಬಾರೆಡ್ಡಿ ಪರ ವಕೀಲರು ಮನವಿ ಮಾಡಿದರು. ಆದರೆ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ. ಮುನಿರಾಜು ಅವರು ವಿಜಯಿ ಎಂದು ಘೋಷಿಸಲು ಮನವಿ ಮಾಡಿದ್ದರು. ಈ ಮನವಿಯನ್ನು ಸಹ ಕೋರ್ಟ್ ತಿರಸ್ಕರಿಸಿದೆ. ಚುನಾವಣಾ ಆಯೋಗಕ್ಕೆ ಮರುಚುನಾವಣೆ ಮಾಡುವ ಅಧಿಕಾರ ಇದೆ ಎಂದು ಹೈಕೋರ್ಟ್ ಆದೇಶದಲ್ಲಿ ತಿಳಿಸಿದೆ.

ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್‌ನಲ್ಲಿ ತಡೆಯಾಜ್ಞೆ ಕೋರಿ ಮೇಲ್ಮನವಿ ಸಲ್ಲಿಸಲು ಎಸ್.ಎನ್.ಸುಬ್ಬಾರೆಡ್ಡಿ ಅವರಿಗೆ ಅವಕಾಶ ಇದೆ. ಹೈಕೋರ್ಟ್ ಆದೇಶಕ್ಕೆ ಸುಪ್ರೀಂಕೋರ್ಟ್ 6 ತಿಂಗಳೊಳಗಾಗಿ ತಡೆಯಾಜ್ಞೆ ನೀಡದಿದ್ದರೆ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಮರು ಚುನಾವಣೆ ನಡೆಸುವ ಅಧಿಕಾರ ಚುನಾವಣೆ ಆಯೋಗಕ್ಕೆ ಸಿಗಲಿದೆ.

## ಡಿಕೆಶಿ ಬಂಡೆ ಅಲ್ಲ, ರೈಲು: ಬಿ.ಕೆ.ಹರಿಪ್ರಸಾದ್ ಲೇವಡಿ



**ಬೆಂಗಳೂರು:** ಡಿಸಿಎಂ ಡಿಕೆ ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು. ಅವರು ಕೇವಲ ಬಂಡೆ ಅಲ್ಲ. ಅವರು ಒಂದು ರೈಲ್ವೇ ಇಂಜಿನ್ ಇದ್ದ ಹಾಗೆ. ಅದು ಬರುವಾಗ ದೊಡ್ಡ ಸೌಂಡ್ ಆಗುತ್ತದೆ ಎಂದು ಬಿ.ಕೆ.ಹರಿಪ್ರಸಾದ್, ಲೇವಡಿ ಮಾಡಿದರು.

ಅಧಿಕಾರ ಹಂಚಿಕೆ ವಿವಾದದ ಕುರಿತು ಸೋಮವಾರ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ರೈಲು ಬರುವಾಗ ಚಾ ಪುಟ 2ಕ್ಕೆ

## 400 ಕೋಟಿ ದರೋಡೆ ಕಟ್ಟುಕಥೆ?

### * ನ್ಯಾಯಾಲಯಕ್ಕೆ ಮಹಾರಾಷ್ಟ್ರ ಎಸ್ಐಟಿ ವರದಿ

**ಬೆಳಗಾವಿ:** ಕರ್ನಾಟಕ– ಮಹಾರಾಷ್ಟ್ರ ಮತ್ತು ಗೋವಾ ಗಡಿಯಲ್ಲಿ ನಡೆದಿದ್ದ 400 ಕೋಟಿ ದರೋಡೆ ಪ್ರಕರಣಕ್ಕೆ ಸ್ಫೋಟಕ ಟ್ವಿಸ್ಟ್ ಸಿಕ್ಕಿದೆ. ಈ ಪ್ರಕರಣವೇ ಕಟ್ಟುಕಥೆ ಎಂದು ಮಹಾರಾಷ್ಟ್ರ ಎಸ್ಐಟಿ ವರದಿ ನೀಡಿದೆ.

ಬೆಳಗಾವಿ ಗಡಿಯಲ್ಲಿ ನಡೆದಿದೆ ಪುಟ 2ಕ್ಕೆ

## ನಗರಕ್ಕೂ 'ಗೃಹ ಆರೋಗ್ಯ'

### ಮನೆಬಾಗಿಲಲ್ಲಿ ಆರೋಗ್ಯ ತಪಾಸಣೆ, ಔಷಧಿ ವಿತರಣೆಗೆ ಸಿದ್ಧತೆ

**ಮೈಸೂರು:** ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗೃಹ ಆರೋಗ್ಯ ಯೋಜನೆಯನ್ನು ಮೈಸೂರು ಸೇರಿದಂತೆ ನಗರ ಪ್ರದೇಶಕ್ಕೂ ವಿಸ್ತರಿಸಲಾಗುತ್ತಿದೆ. ಸಿಬ್ಬಂದಿ ಕಾರ್ಯಕ್ರಮ ರೂಪುರೇಷೆ ಅರಿಯಬೇಕು ಎಂದು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದರು.

ನಗರದಲ್ಲಿ ಸೋಮವಾರ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಪುನರ್ ಮನನ ತರಬೇತಿ ಕಾರ್ಯಕ್ರಮದಲ್ಲಿ ನಗರ ಪ್ರದೇಶದ ಗೃಹ ಆರೋಗ್ಯ ಯೋಜನೆ ಕೈಪಿಡಿಯನ್ನು ಬಿಡುಗಡೆ ಮಾಡಿ ಮಾತನಾಡಿದರು. ಇದುವರೆಗೆ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿದ್ದ ಯೋಜನೆಯನ್ನು ನಗರ ಪ್ರದೇಶಕ್ಕೂ ವಿಸ್ತರಣೆ ಮಾಡಲಾಗುತ್ತಿದೆ. ಕ್ಷೇತ್ರ ವ್ಯಾಪ್ತಿಯಲ್ಲಿ ಸಮೀಕ್ಷಾ ಕಾರ್ಯ ಚಟುವಟಿಕೆಯನ್ನು ಪೂರ್ಣಗೊಳಿಸಬೇಕು ಎಂದು ಅವರು ಸೂಚಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ನಾಗರಾಜ್ ಡಿ.ಜಿ ಮಾತನಾಡಿ, 'ಗೃಹ ಆರೋಗ್ಯ ಯೋಜನೆ'ಯಲ್ಲಿ 30 ವರ್ಷ ಮೇಲ್ಪಟ್ಟ ನಾಗರಿಕರ ಮನೆಬಾಗಿಲಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿಗಳನ್ನು ತಲುಪಿಸುವ ಪ್ರಮುಖ ಉಪಕ್ರಮವಾಗಿದೆ. ಅಕ್ಟೋಬರ್ 2024ರಲ್ಲಿ




ಪ್ರಾರಂಭವಾದ ಈ ಯೋಜನೆಯು ಅಸಾಂಕ್ರಾಮಿಕ ರೋಗಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಮತ್ತು ಕ್ಯಾನ್ಸರ್ (ಬಾಯಿ, ಸ್ತನ, ಗರ್ಭಕಂಠ) ಮುಂಚಿತವಾಗಿ ಪತ್ತೆಹಚ್ಚಲು ಆಶಾ ಕಾರ್ಯಕರ್ತರು ಮತ್ತು ಆರೋಗ್ಯ ಸಿಬ್ಬಂದಿ ಮೂಲಕ ಮನೆ–ಮನೆ ಸಮೀಕ್ಷೆ ನಡೆಸುವುದು ಪ್ರಮುಖ ಕಾರ್ಯಚಟುವಟಿಕೆಯಾಗಿದೆ ಎಂದು ತಿಳಿಸಿದರು.

ರೋಗಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ, ಸಾವು–ನೋವುಗಳನ್ನು ತಡೆಗಟ್ಟುವುದು ಮತ್ತು ಗಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮ್ಮದ್, ತರಬೇತಿದಾರರಾಗಿ ಹೆಚ್.ಡಿ.ಕೋಟೆ ತಜ್ಞ ವೈದ್ಯ ಡಾ. ಪ್ರಜ್ವಲ್ ಭಾಗವಹಿಸಿದ್ದರು.

## ಒಬಿಸಿಗೆ ಎಂಎಲ್ಸಿ ಸ್ಥಾನ ನೀಡಲಿಲ್ಲವೇಕೆ?

### ಸಿದ್ದರಾಮಯ್ಯ, ಪುತ್ರ ಯತೀಂದ್ರ ವಿರುದ್ಧ ಸಾ.ರಾ.ಮಹೇಶ್ ವಾಗ್ದಾಳಿ



**ಮೈಸೂರು:** ವಿಧಾನ ಪರಿಷತ್ ಸದಸ್ಯತ್ವವನ್ನು ಮೈಸೂರಿನ ಹಿಂದುಳಿದ ವರ್ಗದವರಿಗೆ ನೀಡಬಹುದಾಗಿತ್ತು. ಅದನ್ನು ಬಿಟ್ಟು ನೀವೇ ಏಕೆ ಎಂಎಲ್ಸಿ ಸ್ಥಾನ ಪಡೆದುಕೊಂಡಿದ್ದೀರಿ ಎಂದು ಯತೀಂದ್ರ ಸಿದ್ದರಾಮಯ್ಯ ಅವರನ್ನು ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಒಗ್ಗಟ್ಟು, ಅಭಿವೃದ್ಧಿ ಬಗ್ಗೆ ಕೇವಲ ಮಾತನಾಡುವ ನೀವು, ಅಧಿಕಾರವನ್ನು ಮಾತ್ರ ನೀವಷ್ಟೇ ಏಕೆ ಅನುಭವಿಸಬೇಕು ಎಂದು ಯತೀಂದ್ರ ವಿರುದ್ಧ ವಾಗ್ದಾಳಿ ನಡೆಸಿದರು.

ನಿಮ್ಮ ಮನೆಯಲ್ಲೊಬ್ಬರು ಮುಖ್ಯಮಂತ್ರಿ ಆಗಿದ್ದರಿಂದ ಜಿಲ್ಲೆಯ ಹಿಂದುಳಿದ ವರ್ಗದವರೊಬ್ಬರನ್ನು ಪರಿಷತ್ ಸದಸ್ಯರನ್ನಾಗಿ ಮಾಡಬಹುದಿತ್ತು. ಆದರೆ, ಪುತ್ರನನ್ನೇ ಆ ಸ್ಥಾನದಲ್ಲಿ ಕೂರಿಸಿದ ಸಿದ್ದರಾಮಯ್ಯ ಮತ್ತು ಪುತ್ರ ಯತೀದ್ರ ಅವರಿಗೆ ಹಿಂದುಳಿದವರ ಬಗ್ಗೆ ಮಾತನಾಡುವ ಹಕ್ಕಿಲ್ಲ ಇಲ್ಲ ಎಂದು ಸಾರಾ ಟೀಕಿಸಿದರು.

ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನ ಹರಿಸಬೇಕು. ಜಿಲ್ಲೆಯಾದ್ಯಂತ ಕೆರೆ ಒತ್ತುವರಿ ನಡೆದಿದೆ. ಆದರೆ ಪ್ರತಿಷ್ಠಿತ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದನ್ನು ಜಿಲ್ಲಾಡಳಿತ ಕಂಡುಕಾಣದಂತೆ ವರ್ತಿಸುತ್ತಿದೆ ಎಂದು ಅವರು ಆರೋಪಿಸಿದರು.

17 ಸಲ ಬಜೆಟ್ ಮಂಡಿಸಿದವರು ಕಾಂಗ್ರೆಸ್ ಶಾಸಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸುತ್ತಿದ್ದಾರೆ. ಅಭಿವೃದ್ಧಿ ಕೆಲಸಗಳಿಗೆ ಅನುದಾನ ಇಲ್ಲವಾಗಿದೆ. ಬೆಲೆ ಏರಿಕೆ ತಡೆಯುವುದನ್ನು ಬಿಟ್ಟು ಶಾಸಕರ ಪ್ರವಾಸ ಆಯೋಜಿಸಿ ಜನರ ಮೇಲೆ ಹೊರೆ ಹಾಕುತ್ತಿದ್ದಾರೆ. ಎಲ್ಲ ನಿಗಮಗಳ ಅಧ್ಯಕ್ಷರಿಗೂ ಸಂಪುಟ ದರ್ಜೆ ಸ್ಥಾನಮಾನ ನೀಡಿದ್ದಾರೆ. ಮೂರು ವರ್ಷವಾದರೂ ಬಡವರಿಗೆ ಮನೆ ಕೊಟ್ಟಿಲ್ಲ. ತವರು ಜಿಲ್ಲೆಯಲ್ಲಾದರೂ ಸೂರು ವಿತರಿಸಿ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಸಾರಾ ಮಹೇಶ್ ವಾಗ್ದಾಳಿ ನಡೆಸಿದರು.

ಡಿ.ದೇವರಾಜ ಅರಸು ಎಲ್ಲರಿಗೂ ಭೂಮಿ ನೀಡಿದರು. ಆದರೆ, ಸಿದ್ದರಾಮಯ್ಯ ಅವರು ಜನರ ಮೇಲೆ ಸಾಲದ ಹೊರೆ ಹಾಕಿದ್ದಾರೆ. ರಾಜ್ಯದ ಸಾಲ 7 ಲಕ್ಷ ಕೋಟಿ ದಾಟಿದೆ. ಜನಸಾಮಾನ್ಯರ ಪುಟ 2ಕ್ಕೆ

### ಜಿಲ್ಲೆಯಲ್ಲಿ ನಾಳೆಯಿಂದ 'ಜನರೊಂದಿಗೆ ಜನತಾದಳ'

**ಮೈಸೂರು:** ಜಿಲ್ಲೆಯ ವಿವಿಧೆಡೆ ಜೆಡಿಎಸ್ ಯುವ ಘಟಕದಿಂದ ಜನರೊಂದಿಗೆ ಜನತಾದಳ ಕಾರ್ಯಕ್ರಮ ಆಯೋಜಿಸಲಾಗಿದೆ. ಹಳೇ ಮೈಸೂರು ಪ್ರದೇಶದಲ್ಲಿ ಜೆಡಿಎಸ್ ಪಕ್ಷವನ್ನು ಬಲಗೊಳಿಸಲು ಪಕ್ಷದ ಮುಖಂಡರು ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣದಲ್ಲಿ ಫೆ.18 ರಂದು ಬೆಳಗ್ಗೆ ಮೊದಲ ಕಾರ್ಯಕ್ರಮ ನಡೆಯಲಿದೆ. ನಿಖಿಲ್ ಕುಮಾರಸ್ವಾಮಿ ನೇತೃತ್ವ ವಹಿಸುವರು ಎಂದು ಜೆಡಿಎಸ್ ಕಾರ್ಯಾಧ್ಯಕ್ಷ ಪುಟ 2ಕ್ಕೆ

## ಭಾವನೆ ಹೊತ್ತು ತರುವ ಅಂಚೆ

### ಮೈಸೂರಿನಲ್ಲಿ ಅಂಚೆ ಸಾಂಸ್ಕೃತಿಕ ಸಮ್ಮೇಳನ ಉದ್ಘಾಟನೆ




**ಮೈಸೂರು:** ಭಾರತದ ಪ್ರದರ್ಶನ ಕಲೆಗಳ ವೈವಿಧ್ಯತೆ ತೆರೆದಿಡುವುದು ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮ್ಮೇಳನದ ಉದ್ದೇಶ ಎಂದು ಅಂಚೆ ಸೇವೆಗಳ ಮಹಾನಿರ್ದೇಶಕ ಜಿತೇಂದ್ರ ಗುಪ್ತಾ ತಿಳಿಸಿದರು.

ನಗರದ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 38ನೇ ಅಖಿಲ ಭಾರತೀಯ ಅಂಚೆ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಿಟೀಲು ವಾದಕರಾದ ವಿದ್ವಾನ್ ಡಾ.ಮೈಸೂರು ಎಂ. ಮಂಜುನಾಥ್ ಮಾತನಾಡಿ. ಅಂಚೆ ಕಚೇರಿಗೆ ತೆರಳುವ ಗ್ರಾಹಕರಿಗೆ ತಮ್ಮದೇ ಮನೆಗೆ ಹೋದ ಅನುಭವವಾಗುತ್ತದೆ. ಉತ್ತಮ ಸೇವೆಗೆ ಮತ್ತೊಂದು ಹೆಸರು ಅಂಚೆ ಇಲಾಖೆ. ಕೇವಲ ಪತ್ರಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ರವಾನಿಸುವುದಿಲ್ಲ. ಬದಲಾಗಿ ಭಾವನೆಗಳನ್ನು ಹೊತ್ತು ತರುತ್ತದೆ. ಸಾಮಾಜಿಕ ಮಾಧ್ಯಗಳ ನಡುವೆಯೂ ಅಂಚೆ ಇಲಾಖೆ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ ಎಂದು ತಿಳಿಸಿದರು.

ಸಮ್ಮೇಳನದ ನೆನಪಿನ ವಿಶೇಷ ಅಂಚೆ ಬಿಡುಗಡೆ ಮಾಡಲಾಯಿತು. ವಿದ್ವಾನ್ ಮೈಸೂರು ಎಂ.ನಾಗರಾಜ್, ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಪ್ರಕಾಶ್, ಅಂಚೆ ವೃತ್ತ ಸ್ಥಾನಿಕ ನಿರ್ದೇಶಕರಾದ ಸಂದೇಶ್ ಮಹದೇವಪ್ಪ, ವಿ. ತಾರಾ. ಮೈಸೂರು ಅಂಚೆ ತರಬೇತಿ ಕೇಂದ್ರದ ನಿರ್ದೇಶಕ ಡಾ. ಆಶಿಶ್ ಸಿಂಗ್ ಠಾಕೂರ್ ಭಾಗವಹಿಸಿದ್ದರು.

## ಬಾಲವೇ ನಾಯಿ ಅಲ್ಲಾಡಿಸಿದರೆ ಹೇಗೆ?: ಸಚಿವ ಎಚ್‌ಸಿಎಂ ಪ್ರಶ್ನೆ

**ಬೆಂಗಳೂರು:** ರಾಜ್ಯದಲ್ಲಿ ನಡೆಯುತ್ತಿರುವ ನಾಯಕತ್ವ ಬದಲಾವಣೆ ಚರ್ಚೆಯನ್ನು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರು ಬೀದಿನಾಯಿಗೆ ಹೋಲಿಸಿ ಮಾತನಾಡಿದರು.



ನಾಯಕತ್ವ ಬದಲಾವಣೆ ವಿಚಾರದಲ್ಲಿ ಬಾಲವೇ ನಾಯಿಯನ್ನು ಅಲ್ಲಾಡಿಸಿದರೆ ಹೇಗೆ ಎಂದು ಪ್ರಶ್ನಿಸಿದರು. ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ಎಲ್ಲಿದೆ? ಹೈಕೋರ್ಟ್ ಬೀದಿ ನಾಯಿಗಳನ್ನೆಲ್ಲ ಪದೇ ಪದೇ ಹಿಡಿದು ಒಳಗೆ ಹಾಕಿ ಎಂದು ಹೇಳುತ್ತಿದೆ. ಇಲ್ಲಿ ರಾಜಕೀಯ ನಾಯಕತ್ವ ಗಟ್ಟಿಯಾಗಿದೆ ಎಂದು ಹೇಳಿದರು. ಪುಟ 2ಕ್ಕೆ

## ಅಂತರಂಗದ ಪಕ್ಷಿ ಹಾರಿತು: 'ಸಾವು, ನೋವಿನ' ಕಾರ್ಣಿಕ?


**ದಾವಣಗೆರೆ:** ಚನ್ನಗಿರಿ ತಾಲೂಕಿನ ಕೆಂಗಾಪುರದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಉತ್ಸವದಲ್ಲಿ ರಾಮಲಿಂಗೇಶ್ವರ ಸ್ವಾಮೀಜಿ ಮುಳ್ಳುಗದ್ದುಗೆ ಏರಿ ಕಾರ್ಣಿಕ ನುಡಿದಿದ್ದಾರೆ. ಮುಳ್ಳುಗದ್ದುಗೆ ಏರಿ ಕುಣಿದ ನಂತರ, ಕಾರ್ಮೋಡ ಕವಿದಿತು, ಅಂತರಂಗದ ಪಕ್ಷಿ ಹಾರಿತು, ಕೆರೆ ಕಟ್ಟೆಗಳು ತುಂಬಿ ಹರಿದಾವು ಪರಾಕ್ ಎಂದು ಸ್ವಾಮೀಜಿ ಕಾರ್ಣಿಕ ನುಡಿದಿದ್ದಾರೆ.

ಈ ಬಾರಿ ಉತ್ತಮ ಮಳೆಯಾಗಿ ಕೆರೆ ತೊರೆಗಳು ತುಂಬಿ ತುಳುಕಲಿವೆ. ಉತ್ತಮ ಬೆಳೆ ಬರಲಿದೆ. ಪ್ರಯಾಣದಲ್ಲಿ ಸಾಕಷ್ಟು ದುರಂತ ನಡೆಯಲಿದೆ. ಜನರ ಸಾವು, ನೋವು ಸಂಭವಿಸಲಿದೆ. ಪ್ರಯಾಣದಲ್ಲಿ ನಿಧಾನ ಸೂಕ್ತ, ಇದು ಎಲ್ಲರಿಗೂ ಅನ್ವಯ. ರಾಜಕಾರಣಿಗಳು ಜನಸೇವೆಯಲ್ಲಿ ಹೆಚ್ಚು ತೊಡಗಬೇಕು. ರಾಜಕಾರಣಿಗಳು ವೇಗ ಕಡಿಮೆ ಮಾಡಿಕೊಂಡು ಜನಸೇವೆ ಮಾಡುವಂತೆ ಸ್ವಾಮೀಜಿ ಸೂಚಿಸಿದ್ದಾರೆ.

ಪ್ರತಿ ವರ್ಷ ಶಿವರಾತ್ರಿ ಜಾಗರಣೆ ನಂತರ ಈ ಪುಟ 2ಕ್ಕೆ

## ಗುಂಡಾಲ್ ಜಲಾಶಯದಲ್ಲಿ ಹುಲಿ ಕಳೇಬರ ಪತ್ತೆ

**ಚಾಮರಾಜನಗರ:** ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿ ಕೊಳ್ಳೇಗಾಲ ವನ್ಯಜೀವಿ ವಲಯದ ಗುಂಡಾಲ್ ಜಲಾಶಯದಲ್ಲಿ ಹುಲಿಯ ಕಳೇಬರ ಪತ್ತೆಯಾಗಿದೆ. ಈ ಭಾಗದಲ್ಲಿ ಪ್ರಾಣಿಗಳ ಬೇಟೆ ಪ್ರಕರಣಗಳು ಸಕ್ರಿಯವಾಗಿದೆ ಎಂದು ಅಧಿಕಾರಿಗಳು ಅನುಮಾನ ವ್ಯಕ್ತಪಡಿಸಿದ್ದಾರೆ.




ಉರುಳಿಗೆ ಸಿಲುಕಿರುವ 5ರಿಂದ 6 ವರ್ಷದ ಗಂಡು ಹುಲಿ ನರಳಾಡಿ ಜಲಾಶಯದ ಬಳಿ ಬಂದು ಮೃತಪಟ್ಟಿರುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಶಂಕಿಸಿದ್ದಾರೆ. ಇದು ಕಳ್ಳಬೇಟೆಯ ಅನುಮಾನ ಮೂಡಿಸಿದೆ. ಗುಂಡಾಲ್ ಜಲಾಶಯಕ್ಕೆ ಪ್ರವಾಸಿಗರ ಸೋಗಿನಲ್ಲಿ ಬರುವ ರಾಜ್ಯ ಹಾಗೂ ನೆರೆ ರಾಜ್ಯಗಳ ಕಳ್ಳಬೇಟೆಗಾರರು ಉರುಳುಗಳನ್ನು ಹಾಕಿ ಪ್ರಾಣಿಗಳನ್ನು ಬೇಟೆಯಾಡಿ ಚರ್ಮ, ಉಗುರು ಸಹಿತ ಪ್ರಮುಖ ಆವಯವಗಳನ್ನು ಕಿತ್ತುಕೊಳ್ಳುತ್ತಿದ್ದಾರೆ ಎಂದು ವನ್ಯಜೀವಿ ತಜ್ಞರು ದೂರುತ್ತಾರೆ.

ಜಲಾಶಯದ ಹಿನ್ನೀರು ಹಾಗೂ ಬಿಆರ್‌ಟಿ ಅರಣ್ಯದೊಳಗೆ ಅಕ್ರಮವಾಗಿ ಪ್ರವೇಶಿಸುವ ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ನಿಗಾ ಇರಿಸಬೇಕು, ಕಳ್ಳಬೇಟೆಗೆ ಬಂದಿರುವುದು ದೃಢವಾದರೆ ಕಠಿಣ ಕಾನೂನು ಕ್ರಮ ಪುಟ 2ಕ್ಕೆ

## ಲಂಚ: ಲೋಕಾಯುಕ್ತ ಬಲೆಗೆ ಬಿದ್ದ ಇಬ್ಬರು ಅಧಿಕಾರಿಗಳು

**ಶಿವಮೊಗ್ಗ:** ರಾಷ್ಟ್ರೀಯ ಹೆದ್ದಾರಿಯ ವಿಶೇಷ ಭೂ ಸ್ವಾಧೀನಾಧಿಕಾರಿ ಸಿದ್ದಲಿಂಗ ರೆಡ್ಡಿ ಮತ್ತು ಗ್ರಾಮ ಸಹಾಯಕ ರಾಜೇಶ್ ಅವರು 40,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಶಿವಮೊಗ್ಗ ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿಗೆ ಓತಿಘಟ್ಟ ಗ್ರಾಮದ ಕೇಶವಮೂರ್ತಿ ಎಂಬುವವರು ತಮ್ಮ ಎರಿಟಿಗಾ ಕಾರನ್ನು ಕಳೆದ ಎರಡು ವರ್ಷಗಳಿಂದ ಬಾಡಿಗೆಗೆ ನೀಡಿದ್ದರು. ಬಾಡಿಗೆ ಹಣದ ಚೆಕ್ ನೀಡಲು ಸಿದ್ದಲಿಂಗ ರೆಡ್ಡಿ ಅವರು ಕೇಶವಮೂರ್ತಿಗೆ 40,000 ರೂ. ಲಂಚ ನೀಡುವಂತೆ ಸೂಚಿಸಿದ್ದರು. ಈ ಬಗ್ಗೆ ಕೇಶವಮೂರ್ತಿ ಲೋಕಾಯುಕ್ತರಿಗೆ ದೂರು ನೀಡಿದ್ದರು.

ಸಿದ್ದಲಿಂಗ ರೆಡ್ಡಿ ಸೂಚನೆಯಂತೆ ಫೆ.14ರ ಸಂಜೆ ಹೊಳಲೂರು ನಾಡಕಚೇರಿಯ ಗ್ರಾಮ ಸಹಾಯಕ ರಾಜೇಶ್, ಶಿವಮೊಗ್ಗದ ನೆಹರೂ ಸ್ಟೇಡಿಯಂ ಬಳಿ 40,000 ರೂ. ಹಣ ಪಡೆಯುತ್ತಿದ್ದರು. ಪುಟ 2ಕ್ಕೆ

## ಆರ್‌ಎಸ್‌ಎಸ್ ಬಗ್ಗೆ ದ್ವೇಷ, ಹತಾಶೆ

### * ಪ್ರಿಯಾಂಕ್ ಖರ್ಗೆ ಹೇಳಿಕೆ ವಿರುದ್ಧ ಬಿ.ವೈ.ವಿಜಯೇಂದ್ರ ವಾಗ್ದಾಳಿ

**ಬೆಂಗಳೂರು:** ಆರ್‌ಎಸ್‌ಎಸ್ ಬಗ್ಗೆ ಮಾತನಾಡುವ ಮೊದಲು ನಾಗಪುರಕ್ಕೆ ಬಂದು ಆರು ತಿಂಗಳು ಆರ್‌ಎಸ್‌ಎಸ್ ಕುರಿತು ಅಧ್ಯಯನ ಮಾಡಿ ಆ ಬಳಿಕ ಮಾತನಾಡಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಸಚಿವ ಪ್ರಿಯಾಂಕ್‌ಗೆ ಆರ್‌ಎಸ್‌ಎಸ್ ವಿರುದ್ಧ ದ್ವೇಷ, ಹತಾಶೆ ಇರುವ ಕಾರಣ ಬಾಲಿಶತನದ ಹೇಳಿಕೆಗಳನ್ನು ನೀಡುತ್ತಿರುತ್ತಾರೆ ಎಂದು ಕಿಡಿಕಾರಿದರು.

ದಕ್ಷಿಣ ಕನ್ನಡ ಜಿಲ್ಲೆಯ ವಿರುದ್ಧ ಪ್ರಿಯಾಂಕ್ ಮಾತನಾಡಿದ್ದಾರೆ. ಆದರೆ, ಕಲಬುರಗಿ ಜಿಲ್ಲೆ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ತೀರಾ ಹಿಂದುಳಿಯಲು ಖರ್ಗೆ ದ್ವಯರೇ ಕಾರಣರಲ್ಲವೇ? ಕಳೆದ 50 ವರ್ಷಗಳಿಂದ ಕಲಬುರಗಿ ಮಾತ್ರವಲ್ಲ ಇಡೀ ಕಲ್ಯಾಣ ಕರ್ನಾಟಕ ಇವರ ಕುಟುಂಬದ ಹಿಡಿತದಲ್ಲಿದೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಿಯಾಂಕ್ ಖರ್ಗೆ ಸುದೀರ್ಘ



ಅಧಿಕಾರ, ರಾಜಕೀಯ ಸ್ಥಾನಮಾನ ಅನುಭವಿಸುತ್ತಲೇ ಬಂದಿದ್ದಾರೆ. ರಾಜ್ಯದ 59 ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳೆಲ್ಲವೂ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲೇ ಇವೆ. ಶಿವಮೊಗ್ಗದ ಬಗ್ಗೆಯೂ ಸವಾಲು ಹಾಕಿದ್ದಾರೆ. ಶಿವಮೊಗ್ಗ ಮತ್ತು ಕಲಬುರ್ಗಿ ಅಭಿವೃದ್ಧಿ ಚರ್ಚೆಗೂ ಸಿದ್ಧನಿದ್ದೇನೆ ಎಂದು ಸವಾಲು ಹಾಕಿದರು.

ಸಚಿವ ಪ್ರಿಯಾಂಕ್ ತಮ್ಮ ಜಿಲ್ಲೆಯ ಸಮಸ್ಯೆಗಳಿಗೆ ಗಮನಹರಿಸಲು ಸಮಯವಿಲ್ಲ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಪುಟ 2ಕ್ಕೆ

## ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ

### * ಮಂಡ್ಯ, ಮಡಿಕೇರಿ, ಹಾಸನ ಕೋರ್ಟ್ ಸೇರಿದಂತೆ ಹಲವೆಡೆ ತೀವ್ರ ತಪಾಸಣೆ







**ಬೆಂಗಳೂರು:** ಧಾರವಾಡದ ಹೈಕೋರ್ಟ್ ಪೀಠ ಸೇರಿದಂತೆ ಮಂಡ್ಯ, ಕೊಡಗು, ಹಾಸನ, ದಾವಣಗೆರೆ, ಉತ್ತರ ಕನ್ನಡ ಮತ್ತಿತರ ಜಿಲ್ಲಾ ನ್ಯಾಯಾಲಯಗಳಿಗೆ ಸೋಮವಾರ ಬೆಳಿಗ್ಗೆ ಬಾಂಬ್ ಬೆದರಿಕೆ ಕರೆ ಬಂದಿದೆ. ಪೊಲೀಸರ ತೀವ್ರ ಪರಿಶೀಲನೆ ನಂತರ ಎಲ್ಲವೂ ಹುಸಿ ಬಾಂಬ್ ಬೆದರಿಕೆ ಕರೆ ಎಂದು ತಿಳಿದ ನಂತರ ವಕೀಲರು, ಕಕ್ಷಿದಾರರ ಸೇರಿದಂತೆ ಎಲ್ಲರೂ ನಿಟ್ಟುಸಿರು ಬಿಡುವಂತಾಯಿತು.

ಮಂಡ್ಯದಲ್ಲಿ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯದ ಕಲಾಪವನ್ನು ಸ್ಥಗಿತಗೊಳಿಸಲಾಗಿತ್ತು. ನ್ಯಾಯಾಧೀಶರು, ವಕೀಲರು ಮತ್ತು ದಾವೆದಾರರನ್ನು ಆವರಣದಿಂದ ಹೊರಗೆ ಕಳುಹಿಸಲಾಯಿತು. ಬಾಂಬ್ ನಿಷ್ಕ್ರಿಯ ದಳ, ಪೊಲೀಸರೊಂದಿಗೆ ತೀವ್ರ ಶೋಧ ಕಾರ್ಯಾಚರಣೆ ನಡೆಸುತ್ತಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಡಿಕೇರಿಯ ನ್ಯಾಯಾಲಯ ಸಂಕೀರ್ಣಕ್ಕೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿತ್ತು. ಪೊಲೀಸ್ ಇಲಾಖೆ ಭದ್ರತಾ ಕ್ರಮ ಕೈಗೊಂಡಿದೆ. ಮುನ್ನೆಚ್ಚರಿಕೆಯಾಗಿ ನ್ಯಾಯಾಲಯ ಸಂಕೀರ್ಣಕ್ಕೆ ಪೊಲೀಸ್ ವಿಶೇಷ ಭದ್ರತಾ ಪಡೆ, ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳಗಳು ಧಾವಿಸಿ ಪರಿಶೀಲನೆ ನಡೆಸಿದವು. ಪರಿಶೀಲನೆ ವೇಳೆ ನ್ಯಾಯಾಲಯದ ಒಳಗಿದ್ದ ಸಿಬ್ಬಂದಿ, ವಕೀಲರು ಹಾಗೂ ಇತರೆ ಸಿಬ್ಬಂದಿಯನ್ನ ಹೊರಗೆ ಕಳುಹಿಸಲಾಯಿತು. ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ನ್ಯಾಯಾಲಯ ಸಂಕೀರ್ಣದ ಪ್ರತಿಯೊಂದು ಪುಟ 2ಕ್ಕೆ

ಮೊದಲ ಪುಟದಿಂದ

## ಬಾಂಬ್ ಬೆದರಿಕೆ

ಭಾಗವನ್ನೂ ಸೂಕ್ಷ್ಮವಾಗಿ ತಪಾಸಣೆ ನಡೆಸುತ್ತಿರುವ ಪೊಲೀಸರು ಅನುಮಾನಾಸ್ಪದ ವಸ್ತುಗಳ ಶೋಧ ನಡೆಸಲು. ಯಾವುದೇ ಬಾಂಬ್ ಪತ್ತೆ ಆಗಲಿಲ್ಲ. ಬೆದರಿಕೆ ಬಂದ ಇ-ಮೇಲ್ ಮೂಲ ಪತ್ತೆ ಹಚ್ಚಲು ತನಿಖೆ ಆರಂಭಿಸಿದ್ದಾರೆ. ಹಾಸನ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದೆ. ಹಾಸನ ನಗರ ಠಾಣೆ ಪೊಲೀಸರು ತಪಾಸಣೆ ನಡೆಸಿದರು. ಕೋರ್ಟ್ ಸಿಬ್ಬಂದಿ, ವಕೀಲರನ್ನ ಆವರಣದಿಂದ ಹೊರಗೆ ಕಳಿಹಿಸಿ ತೀವ್ರ ತಪಾಸಣೆ ನಡೆಸಲಾಯಿತು. ಪಾರ್ಕಿಂಗ್, ಕೋರ್ಟ್ ಆವರಣ, ಒಳಾಂಗಣಗಳಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ತಪಾಸಣೆ ನಡೆಸಲಾಯಿತು. ಧಾರವಾಡ ಕೋರ್ಟ್ ಆವರಣದಿಂದ ಎಲ್ಲರನ್ನು ಹೊರಗೆ ಕಳಿಸಿ ಪರಿಶೀಲನೆ ನಡೆಯಸಲಾಯಿತು. ನಂತರ ಯಾವುದೇ ಸ್ಫೋಟಕ ವಸ್ತು ಪತ್ತೆ ಆಗಲಿಲ್ಲ. ದಾವಣಗೆರೆ ಜಿಲ್ಲಾ ನ್ಯಾಯಾಲದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಜಿಲ್ಲಾ ನ್ಯಾಯಾಧೀಶರಿಗೆ ಮೇಲ್ ಬಂದಿದೆ. ಸ್ಫೋಟಕ ಇಡಲಾಗಿದೆ ಎಂದು ಬೆದರಿಕೆ ಹಾಕಲಾಗಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಕೋರ್ಟ್ ಒಳಗಿದ್ದ ಎಲ್ಲರನ್ನೂ ಹೊರಗೆ ಕಳುಹಿಸಿ ಬಾಂಬ್ ಪತ್ತೆದಳ, ಶ್ವಾನ ದಳ ಪರಿಶೀಲನೆ ನಡೆಸಲಾಯಿತು. ಕಾರವಾರ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆಯ ಇಮೇಲ್ ಸಂದೇಶ ಬಂದಿದೆ. ಈ ಹಿನ್ನೆಲೆಯಲ್ಲಿ ಬಾಂಬ್ ಪತ್ತೆ ದಳ ಪರಿಶೀಲನೆ ಕೈಗೊಂಡಿದೆ. ಅಪರಿಚಿತರಿಂದ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ತಪಾಸಣೆ ನಡೆಸಲಾಗಿದೆ. ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

## 20ರಿಂದ ಕಿರುಚಿತ್ರ ಕಾರ್ಯಕ್ರಮ



ಮೈಸೂರು: ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಫೆ. 20, 21 ಮತ್ತು 22 ರಂದು ಪರಿದೃಶ್ಯ ಅಂತರ ರಾಷ್ಟ್ರೀಯ ಕಿರು ಚಿತ್ರ ಮತ್ತು ಸಾಕ್ಷ್ಯಚಿತ್ರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗೌರವಾಧ್ಯಕ್ಷ ಡಾ. ಚಂದ್ರಶೇಖರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರಲ್ಲಿ ಜಗತ್ತಿನ 114 ದೇಶಗಳ ಸುಮಾರು 3042 ಕಿರುಚಿತ್ರ ಮತ್ತು ಸಾಕ್ಷ ?ಯಚಿತ್ರಗಳು ಪಾಲ್ಗೊಳ್ಳಲಿವೆ. ಇವು ಬಹುಭಾಷೆಯವಾಗಿವೆ. ಉದ್ಘಾಟನೆ ಫೆ. 20 ರ ಬೆಳಗ್ಗೆ 10ಕೆಕ ಡನೆಯಲಿದ್ದು, ಹಿರಿಯ ನಟ ಹಾಗೂ ರಾಜ್ಯಸಭಾ ಸದಸ್ಯರಾದ ಜಗ್ಗೇಶ್, ನಿರ್ದೇಶಕ ಪ್ರಕಾಶ್ ಬೆಳವಾಡಿ, ಲೇಖಕ ಜೋಗಿ ಗಿರೀಶ್ ರಾವ್ ಹತ್ವಾರ್, ಡಾ.ವಿ. ನಾಗೇಂದ್ರ ಪ್ರಸಾದ್, ನಟಿ ಕಾರುಣ್ಯ ರಾಮ್‌ಗೌಡ ಹಾಗೂ ಲಾಸ್ಯ ನಾಗರಾಜ್ ಇನ್ನಿತರರು ಹಾಜರಿರುವರು, ಸಮಾರೋಪ ಫೆ. 22 ರ ಸಂಜೆ 5ಕ್ಕೆ ನಡೆಯಲಿದೆ. ಸಂಸದ ಯದುವೀರ್, ನಟ ಡಾಲಿ ಧನಂಜಯ, ಡಾ. ಜಯಮಾಲ, ಜಿಯಾನಿ ಬಿನ್ಡಿಮ್ ಇನ್ನಿತರರು ಹಾಜರಿರುವರೆಂದರು. ಅತ್ಯುತ್ತಮವಾದುದಕ್ಕೆ ಸುಮಾರು 30 ವಿವಿಧ ಪ್ರಶಸ್ತಿ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಜಿ.ಆರ್. ಚೇತನ್, ಪದ್ಮಾವತಿ ಎಸ್.ಭಟ್, ಡಾ.ಶೋಭಿತ್ ರಂಗಪ್ಪ, ಜಯಶೇಖರ್, ಜೋಗಿ ಮಂಜು ಹಾಜರಿದ್ದರು.

## ಪ್ರಜಾಪ್ರಭುತ್ವ ರಕ್ಷಣೆ ಯುವ ಸಮೂಹದ ಜವಾಬ್ದಾರಿ: ಮುಖ್ಯಮಂತ್ರಿ ಚಂದ್ರು




ಮೈಸೂರು: ದೇಶದಲ್ಲಿ ಶೇ.50ರಷ್ಟು ಮಂದಿ ಇರುವ ಯುವ ಸಮೂಹದಿಂದಲೇ ಪ್ರಜಾಪ್ರಭುತ್ವ ರಕ್ಷಣೆ ಜವಾಬ್ದಾರಿಯಾಗಿದೆ ಎಂದು ನಟ ಮುಖ್ಯಮಂತ್ರಿ ಚಂದ್ರು ಹೇಳಿದರು.

ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ದಾರಿ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಿದ್ದ ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿ ಕೈಯಲ್ಲಿ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದು ದೇಶದಲ್ಲಿ ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗ ಎಲ್ಲವೂ ಹಾದಿ ತಪ್ಪಿವೆ. ಪ್ರಜಾಪ್ರಭುತ್ವದಲ್ಲಿ ಮತದಾರರೇ ಅಂತಿಮವಾಗಿದೆ. ಅದರಲ್ಲಿ ಯೂವ ಸಮೂಹವೇ ಹೆಚ್ಚಿದ್ದು, ನೀವು ಆಯ್ಕೆ ಮಾಡಬೇಕಾದರೇ ಮುನ್ನೆಚ್ಚರಿಕೆಯಿಂದ ಆಯ್ಕೆ ಮಾಡಬೇಕಿದೆ. ಅಯ್ಕೆ ಮಾಡಿ ಅನಂತರ ವ್ಯವಸ್ಥೆಯನ್ನು ಟೀಕಿಸುವ ಬದಲಿಗೆ ಆಯ್ಕೆಯಲ್ಲೇ ಉತ್ತಮರನ್ನು ಆಯ್ಕೆ ಮಾಡಬೇಕಿದೆ ಎಂದು ಹೇಳಿದರು.

ಪತ್ರಕರ್ತ ಕೆ.ನರಸಿಂಹಮೂರ್ತಿ, ಮಂಡ್ಯ ರೈತರ ಶಾಲೆ ಮುಖ್ಯಸ್ಥ ಸತ್ಯಮೂರ್ತಿ, ದಾರಿ ಫೌಂಡೇಶನ್ ಅಧ್ಯಕ್ಷ ಎಲ್.ರಂಗಯ್ಯ, ವಿಜಯನಗರ ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ. ಕೆ.ಸಿ.ಭದ್ರಗಿರಿಯಯ್ಯ, ದಾರಿ ಫೌಂಡೇಶನ್ ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್ ಮಹಾಮನೆ, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ಸಂಚಾಲಕರಾದ ಪ್ರಭಾಕರ್, ಎಂ.ಕೆ.ಅಪ್ಪಯ್ಯ, ರಾಮಾನುಜಪ್ಪ, ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಂ.ಎ.ಮಲ್ಲಿಕಾರ್ಜುನ, ಎಸ್.ಆನಂದ್‌ಕುಮಾರ್, ಪತ್ರಾಂಕಿತ ವ್ಯವಸ್ಥಾಪಕಿ ಆರಿಫ್ವಾ ಸುಲ್ತಾನಾ ಇನ್ನಿತರರು ಉಪಸ್ಥಿತರಿದ್ದರು.

# ಭೂ ಕಬಳಿಕೆ ವಿರುದ್ಧ ಕ್ರಮವಹಿಸಿ

## ಕ್ರಿಮಿನಲ್ ಕೇಸ್ ದಾಖಲಿಗೆ ಶಾಸಕ ಶ್ರೀವತ್ಸ ಗಡುವು



ಮೈಸೂರು: ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಕೆ.ಸಿ ಲೇಔಟಿನಲ್ಲಿ ಸರ್ವೆ ನಂಬರ್ 4ರಲ್ಲಿ ಸರ್ಕಾರಿ ಜಾಗವನ್ನು ಅಕ್ರಮವಾಗಿ ಅತಿಕ್ರಮಣ ಜಟಾಪಟಿ ಮುಂದುವರೆದಿದ್ದು, ಅತಿಕ್ರಮಣ ಮಾಡಿದವರ ವಿರುದ್ಧ 24 ತಾಸಿನಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಶಾಸಕ ಶ್ರೀವತ್ಸ ಆಗ್ರಹಿಸಿದರು.

ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೆಸಿ ಲೇಔಟಿ ಕುರುಬಾರಹಳ್ಳಿ ಸರ್ವೆ ನಂಬರ್ 4,36,37,47 ಮತ್ತು75 ರಲ್ಲಿ ವಿಶೇಷ ಕೃಷಿ ವಲಯವಾಗಿದ್ದ ಭೂಮಿಯನ್ನು ವಸತಿ ವಲಯವನ್ನಾಗಿ ಭೂ ಪರಿವರ್ತನೆ ಮಾಡಿದ್ದಾರೆ.ಅದರಲ್ಲಿ ರಾಯ್ ಪೀಟರ್ ಎಂಬುವವರಿಗೆ ಸೇರಿದ 3.17 ಎಕರೆ ಭೂ ಪ್ರದೇಶದ ಎಂದು ಬೋರ್ಡ್ ಅಳವಡಿಸಿ ಇದು ಖಾಸಗಿ ಆಸ್ತಿ ಎಂದು ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದರು. ಬಳಿಕ ಕೆರೆ ಇರುವ ಜಾಗ ಹಾಗಾಗಿ ಈ ಜಾಗವನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಲಾಗುವುದಿಲ್ಲ. ಶಿವರಾತ್ರಿ ಒಳಗೆ ತೆರವಿಗೆ ಆಗ್ರಹಿಸಿದ್ದೇವು. ಒತ್ತಡಕ್ಕೆ ಮಣಿದ ಸರ್ಕಾರ ಬಳಿಕ ಕಾಂಪೌಂಡ್ ತೆರವುಗೊಳಿಸುವ ಕೆಲಸ ಮಾಡಿರುವುದಕ್ಕೆ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅತ್ರಿಕ್ರಮ ಪ್ರವೇಶ ಮಾಡಬಾರದೂ ಮಾಡಿದರೆ ನ್ಯಾಯಾಲಯದ ಧಾವೆ ಹೂಡುವ ಎಚ್ಚರಿಕೆ ಸಂದೇಶದ ನಾಮಫಲಕ ಹಾಕಿದ್ದರು. ನಾಮಫಲಕದ ಮೂಲಕ ಸರ್ಕಾರಿ ಅಧಿಕಾರಿಗಳನ್ನು ಹೆದರಿಸುವ ಕೆಲಸ ಮಾಡಿದ್ದರು. ಆದರೆ, ಸರ್ಕಾರ ಅಧಿಕಾರಿಗಳಿಗೆ ಸ್ವತಂತ್ರ ನೀಡಿದರೆ ಎನೂ ಬೇಕಾದರೂ ಮಾಡಬಹುದು ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಈಗ ನಾಮಫಲಕ ಹಾಗೂ ಕಾಂಪೌಂಡ್ ಎರಡನ್ನು ಅಧಿಕಾರಿಗಳು ತೆರವು ಮಾಡಿದ್ದಾರೆ. ಜಿಲ್ಲಾಡಳಿತ, ಸರ್ಕಾರ ಕೆರೆ ಸಂರಕ್ಷಣೆ ಭಾಗವನ್ನು ತೆರೆವು ಮಾಡಿದ್ದಾರೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆಂದರು.

ಅಧಿಕಾರಿಗಳಿಗೆ ಸ್ವತಂತ್ರ ಕೊಡಬೇಕಿದೆ. ಅವರು ತಪ್ಪು ಮಾಡಿದಾಗ ಮಾತ್ರ ದಾಳಿ ಮಾಡಬೇಕೆ ವಿನಃ ನಾವೇ ಕಣ್ಮುಚ್ಚಿ ಕುಳಿತಿಕೊ ಎನ್ನಬಾರದು. ಹಾಗೆಂದ ಕಾರಣಕ್ಕೆ ಇಲ್ಲಿ ಅತಿಕ್ರಮಣ ನಡೆದಿತ್ತು ಎನ್ನಬಹುದಾಗಿದೆ. ಅಧಿಕಾರಿಗಳಿಗೆ ತೆರವುಗೊಳಿಸುವುದಷ್ಟೇ ವೀರಾವೇಷ ಆಗಬಾರದು. ಇಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕಿದೆ. 24 ತಾಸಿನಲ್ಲಿ ಇವರ ವಿರುದ್ಧ ತಹಸೀಲ್ದಾರ್ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ತೆರವು ವೇಳೆ ಇಲಾಖೆಗೆ ಆದ ನಷ್ಟವನ್ನು ಆತನಿಂದಲೇ ಭರಿಸಬೇಕೆಂದು ಆಗ್ರಹಿಸುತ್ತಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಶಿವಕುಮಾರ್, ರಾಜ್ಯ ವಕ್ತಾರ ಎಂ.ಜಿ.ಮಹೇಶ್, ನಗರ ವಕ್ತಾರರಾದ ಮೋಹನ್, ನಗರ ಪಾಲಿಕೆ ಸದಸ್ಯೆ ಛಾಯಾ, ಶಿವಕುಮಾರ್, ಕೆ.ಜೆ.ರಮೇಶ್, ಬಿಜೆಪಿ ಮುಖಂಡರಾದ ಪ್ರಸನ್ನ, ಜಯರಾಮ್, ವಿಶ್ವೇಶ್ವರಯ್ಯ, ಪ್ರಭಾಕರ್ ಶಿಂಧೆ, ಎನ್.ಪ್ರದೀಪ್ ಕುಮಾರ್, ಗೋಕುಲ್ ಗೋವರ್ಧನ್, ವಾಣೀಶ್, ಖಂಡೇಶ್, ವಿನಯ್ ಪಾಂಚಜನ್ಯ, ವಸಂತ್ ಕುಮಾರ್, ವಿ.ಮಂಜುನಾಥ್, ನವೀನ್, ಹರೀಶ್, ಸಂತೋಷ್ ಇದ್ದರು.

### ಶಿಕ್ಷೆ ಬೇರೊಬ್ಬರಿಗೆ ಎಚ್ಚರಿಕೆ ಘಂಟೆ ಆಗಲಿ

ಅಂತೆಯೇ ನಂಜನಗೂಡು ಮುಖ್ಯರಸ್ತೆಯ ಗಣಪತಿ ಆಶ್ರಮ ಪಕ್ಕದ, ಜೆಎಸ್ ಎಸ್ ಕಾಲೇಜು ನಿಲ್ದಾಣದ ಎದುರಿನ ಅತಿಕ್ರಮಣ ಜಾಗವನ್ನು ಅಧಿಕಾರಿಗಳು ತೆರವು ಮಾಡಿದ್ದಾರೆ. ಹಲವು ವರ್ಷಗಳಿಂದ ವ್ಯಕ್ತಿಯೋರ್ವ ಸೈಕಲ್, ಸ್ಕೂಟರ್ ನಿಲ್ದಾಣದ ಹೆಸರಿನಲ್ಲಿ ಲಕ್ಷಾಂತರ ರೂ. ಸಂಪಾದನೆ ಮಾಡಿಕೊಂಡಿದ್ದಾನೆ. ಆತನ ವಿರುದ್ಧವೂ ಸಹ ಕ್ರಿಮಿನಲ್ ಕೇಸ್ ದಾಖಲಿಸಬೇಕು. ಇಂತಹವರಿಗೆ ನೀಡುವ ಶಿಕ್ಷೆ ಬೇರೊಬ್ಬರಿಗೆ ಎಚ್ಚರಿಕೆ ಘಂಟೆ ಆಗಲಿದೆ. ಸದರಿ ಪ್ರಕರಣದಿಂದ ಸರ್ಕಾರದ ಇಮೇಜ್ ಹೋಗಿದೆ. ಅಧಿಕಾರಿಗಳು ಹಾಗೂ ಸರ್ಕಾರವನ್ನು ಬೈದಿದ್ದೇವೆ. ಈ ಹಿನ್ನೆಲೆಯಲ್ಲಿ ಇಂತಹ ಒತ್ತುವರಿದಾರರಿಗೆ ಸ್ಪಷ್ಟ ಸಂದೇಶ ನೀಡಲು ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದರು.

## ಕಾರ್ಖಾನೆ ಮಾದರಿ ರೈತರಿಗೂ ಪರಿಹಾರ ಕೊಡಿ



ಮೈಸೂರು: ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆ ವಿದ್ಯುತ್ ಪೂರೈಕೆ ಮಾಡದೇ ಬೆಳೆ ನಷ್ಟವಾಗಿದೆ. ಕಾರ್ಖಾನೆಗೆ ಪರಿಹಾರ ಕೊಡುವ ಮಾದರಿಯಲ್ಲೇ ರೈತರಿಗೂ ಪರಿಹಾರ ಕೊಡಬೇಕೆಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ)ಕ್ಕೆ ರೈತರು ಆಗ್ರಹಿಸಿದರು.

ಸೋಮವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆದ 2024-25ನೇ ಸಾಲಿನ ವಾರ್ಷಿಕ ಯೋಜನೆಯ ಕಾರ್ಯ ನಿರ್ವಹಣಾ ಪರಿಶೀಲನೆ ಅರ್ಜಿಯ ಸಾರ್ವಜನಿಕ ವಿಚಾರಣೆಯಲ್ಲಿ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ ರೈತರು ಸೆಸ್ಕ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹನೂರು ರೈತ ಮುಖಂಡ ಶಿವಲಿಂಗಪ್ರಸಾದ್, ಸರ್ಕಾರ ನಿರಂತರ 7ಗಂಟೆ ವಿದ್ಯುತ್ ಕೊಡುವುದಾಗಿ ಹೇಳುತ್ತದೆ. ಆದರೆ, ಕಾಮಗಾರಿಗಳ ನೆಪದಲ್ಲಿ ಅರ್ಧಗಂಟೆಯೂ ವಿದ್ಯುತ್ ಕೊಡುತ್ತಿಲ್ಲ. ಬೇಸಾಯ ಮಾಡುವುದು ಹೇಗೆ? ನೀರಿಲ್ಲದೇ ಒಣಗಿದ ಬೆಳೆಗಳ ನಷ್ಟ ಕಟ್ಟುವುದು ಯಾರು? ಎಂದು ಪ್ರಶ್ನಿಸಿದರು. ಹನೂರು ಭಾಗದ ಕಾಂಡಂಚಿನ ಪ್ರದೇಶಗಳಲ್ಲಿ ಹುಲಿ, ಚಿರತೆ ಕಾಟ, ಎಕ್ಸ್‌ಪ್ರೆಸ್ ಲೈನ್ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಕಾರ್ಖಾನೆಗಳಿಗೆ ನಷ್ಟವಾದರೆ ಪರಿಹಾರ ಕೊಡಲಾಗುತ್ತದೆ. ಅದೇ ಮಾದರಿಯಲ್ಲಿ ರೈತರಿಗೂ ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು. ಫೆ.25ರೊಳಗೆ ಕಾಮಗಾರಿ ಪೂರ್ಣಗೊಳ್ಳುತ್ತದೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲ್ ರಾಜು ತಿಳಿಸಿದರು. ಪ್ರೇಮ್‌ಟೆಕ್ ಕಂಪನಿಯ 25ಕೆವಿ ಟ್ರಾನ್ಸ್‌ಫಾರ್ಮರ್ 90ಸಾವಿರ ರೂ. ನಿಗದಿ ಮಾಡಿದ್ದಾರೆ. ಅದು ಅಳವಡಿಸಿದ ದಿನವೇ ಹಾಳಾಗುತ್ತದೆ. ಅದರ ಮೌಲ್ಯ 30 ಸಾವಿರಕ್ಕಿಂತ ಕಡಿಮೆ ಇದೆ. ತೋಟದ ಮನೆಗಳಿಗೆ ವಿಧಿಸುತ್ತಿರುವ ಡೆವಲಪಮೆಂಟ್ ದರ 6ಸಾವಿರ ರೂ. ಪಡೆಯಬಾರದು ಎಂದು ರೈತರೊಬ್ಬರು ಆಯೋಗದ ಗಮನಸೆಳೆದರು

### ಅತಿ ಹೆಚ್ಚು ಸುಳ್ಳು ಮಾಹಿತಿ ಕೊಟ್ಟ ಸಭೆ

ಅತಿ ಹೆಚ್ಚು ಸುಳ್ಳು ಮಾಹಿತಿ ಕೊಟ್ಟ ಸಭೆ. ಮಲೆ ಮಹದೇಶ್ವರ ಎಲ್ಲ ಹಾಡಿಗಳಿಗೆ ವಿದ್ಯುತ್ ಕೊಟ್ಟಿಲ್ಲ. ಅದು ಸುಳ್ಳು. ಪುಸ್ತಕದಲ್ಲಿ ಮಾಹಿತಿ ಇದೆ. ಅತಿ ಹೆಚ್ಚು ಸುಳ್ಳು ಮಾಹಿತಿ ಕೊಟ್ಟ ಸಭೆ ಇದು ಎಂದು ರೈತ ಮುಖಂಡ ರಾಜೇಂದ್ರ ಹೇಳಿದರು.


ಜನಸಂಪರ್ಕ ಸಭೆಗೆ ಗೈರು: ಚಾಮರಾಜನಗರದ ಅಧೀಕ್ಷಕ ಅಭಿಯಂತರರು ಜನಸಂಪರ್ಕ ಸಭೆಗೆ ಬರುತ್ತಿಲ್ಲ ಎಂದು ರೈತರು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ದನಿಗೂಡಿಸಿದ ಆಯೋಗದ ಸದಸ್ಯ ಎಚ್.ಕೆ. ಜಗದೀಶ್, ಈ ಬಗ್ಗೆ ಹಿಂದಿನ ಸಭೆಯಲ್ಲಿ ಸೂಚನೆ ಕೊಡಲಾಗಿದೆ. ಅಧಿಕಾರಿಗಳಿಗೆ ಸ್ಪಂದನೆ ಬಹಳ ಮುಖ್ಯ ಎಂದು ತಿಳಿಸಿದರು.

### ಹಗಲು ದರೋಡೆ

ಸರ್ಕಾರ ಮತ್ತು ಕಂಪನಿಗಳು ಗ್ರಾಹಕರಿಗೆ ಹಗಲು ದರೋಡೆ ಮಾಡುತ್ತಿವೆ. ಕೋಟ್ಯಂತರ ಅನುದಾನ ಇಷ್ಟಬಂದಂತೆ ಹಂಚಿಕೆ ಮಾಡಲಾಗಿದೆ. ಸ್ಮಾರ್ಟ್ ಮೀಟರ್ ಕೊರತೆ ಇದೆ. ಅನೇಕ ಅಕ್ರಮಗಳು ನಡೆದಿವೆ. ಅವುಗಳ ಬಗ್ಗೆ ಆಯೋಗ ಕ್ರಮವಹಿಸಬೇಕು ಎಂದು ಎಚ್.ವಿ.ಸುಬ್ಬೇಗೌಡ ದೂರಿದರು.

ಇಸ್ರೋ ನಿವೃತ್ತ ವಿಜ್ಞಾನಿ ಜಗನ್ನಾಥ್ ಸೋಲಾರ್ ಬಳಕೆಯನ್ನು ಹೆಚ್ಚಿಸಬೇಕು ಎಂದು ಸಲಹೆ ನೀಡಿದರು. ಸಭೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರಾದ ಎಚ್.ಕೆ.ಜಗದೀಶ್ ಇತರರು ಇದ್ದರು.

## ಚೆಸ್ಕಾಂನಿಂದ 528.12 ಕೋಟಿ ರೂ. ಗಳ ನಿವ್ವಳ ಆದಾಯ ಕೊರತೆ



ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ 528.12 ಕೋಟಿ ರೂ. ಗಳ ನಿವ್ವಳ ಆದಾಯ ಕೊರತೆ ಸರಿದೂಗಿಸಲು ಸೂಕ್ತ ಆದೇಶ ಹೊರಡಿ ಸುವಂತೆ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿತು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣದ ಅಧ್ಯಕ್ಷ ಪಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಆರ್ಥಿಕ ವರ್ಷ 2024-25ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ಪರಿಶೀಲನೆ ಅರ್ಜಿಯ ಬಗ್ಗೆ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ 2024-25ನೇ ಸಾಲಿನಲ್ಲಿ ಸೆಸ್ಕ್ ವತಿಯಿಂದ ನಡೆಸಲಾಗಿರುವ ಹಲವು ಪ್ರಗತಿ ಕಾರ್ಯಗಳು ಮತ್ತು ಸಾಧನೆಗಳ ಕುರಿತು ಪ್ರಸ್ತಾಪಿಸಲಾಯಿತು. ಸಭೆಯ ಆರಂಭದಲ್ಲಿ ಮಾತನಾಡಿದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು, "2024-25ರ ಆರ್ಥಿಕ ವರ್ಷದಲ್ಲಿ ಕೆಇಆರ್‌ಸಿ 84 28.82 ಮಿಲಿಯನ್ ಯೂನಿಟ್‌ಗೆ ಅನುಮೋ ದನೆ ನೀಡಿದ್ದರೆ, 84 47.42 ಮಿ.ಯೂನಿಟ್ ಬಳಕೆಯಾಗಿ ಶೇ.0.22 ವ್ಯತ್ಯಾಸವಾಗಿದ್ದು, 7591.20 ಕೋಟಿ ರೂ. ಕಂದಾಯ ಸಂಗ್ರ ಹಣೆಯ ಬದಲಿಗೆ 7173.29 ಕೋಟಿ ರೂ. ಸಂಗ್ರಹವಾಗಿದೆ. ಇದರಿಂದಾಗಿ ಶೇ.5.83ರಷ್ಟು ವ್ಯತ್ಯಾಸವಾಗಿದೆ. ವಿದ್ಯುತ್ ಮಾರಾಟ, ಆದಾಯ, ವೆಚ್ಚವನ್ನು ಪರಿಗಣಿಸಿದರೆ 528.12 ಕೋಟಿ ರೂ. ಕೊರತೆ ಆಗಲಿದ್ದು, ಇದನ್ನು ಸರಿದೂಗಿಸಲು ಅವಕಾಶ ನೀಡುವಂತೆ" ಮನವಿ ಮಾಡಿದರು.

> ಮುಖ್ಯಮಂತ್ರಿಗಳ ಕ್ಷೇತ್ರದ ಇಮ್ಮಾವು ಗ್ರಾಮದಲ್ಲಿ ಕಮ ರ್ಷಿಲ್ ಮೀಟರ್ ಅಳವಡಿಕೆಗೆ ಸೆಸ್ಕ್ ಅಧಿ ಕಾರಿಗಳು 6 ತಿಂಗಳಿಂದ ಅಲೆಸುತ್ತಿದ್ದಾರೆ. ಇನ್ನೆಷ್ಟು ದಿನಗಳು ಬೇಕು? ಈ ಸಣ್ಣ ವಿಷಯವನ್ನು ಮುಖ್ಯಮಂ ತ್ರಿಗಳ ಗಮನಕ್ಕೆ ತರಬೇಕೆ?
>
> ▶▶ಅನಿತಾ ಸದಾನಂದ್, ಇಮ್ಮಾವು

> ಸಭೆಯ ವ್ಯಾಪ್ತಿಗೆ ಬರದಿದ್ದರೂ ನಾಗರಿಕರ ಅಹ ವಾಲುಗಳು ಆಲಿಸಲಾಗಿದೆ. ರೈತರು ಹೆಚ್ಚು ಸಮಸ್ಯೆ ಗಳನ್ನು ಆಯೋಗಕ್ಕೆ ತಿಳಿಸಿದ್ದಾರೆ. ಸಮಸ್ಯೆ ಇತ್ಯ ರ್ಥಕ್ಕೆ ವಿದ್ಯುತ್ ಕಂಪನಿಗಳಿಗೆ ಸೂಚನೆ ನೀಡಲಾಗುವುದು.
>
> ▶▶ -ಪಿ.ರವಿಕುಮಾರ್ ಅಧ್ಯಕ್ಷ, ಕೆಇಆರ್‌ಸಿ

### ವಿವಿಧ ಯೋಜನೆಗಳ ಪ್ರಗತಿ

"ಕುಸುಮ್-ಸಿ ಯೋಜ ನೆಯಡಿ 950 ಮೆಗಾವ್ಯಾಟ್‌ನಷ್ಟು ಫೀಡರ್ ಸೋಲಾರ್ ಸ್ಟೇಷನ್ ವ್ಯವಸ್ಥೆ ಅಳವಡಿಸಲು ಕ್ರಮ, ಕುಸುಮ್ -ಬಿ ಯೋಜನೆಯಡಿ 6 ಸಾವಿರ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ರಿಯಾಯಿತಿ ಯಡಿ ಸೋಲಾರ್ ಪಂಪ್ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. ಪಿಎಂ ಜನ್‌ಮನ್ ಯೋಜನೆಯಡಿ 5467 ಜೇನುಕುರುಬ, ಗಿರಿಜನ, ಆದಿವಾಸಿ ಹಾಗೂ ಬುಡಕಟ್ಟು ಜನರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸಲಾಗಿದೆ. ಜತೆಗೆ ಕಳೆದ ವರ್ಷ 11 ಕೆವಿ ಮಾರ್ಗಗಳನ್ನು 66 ಕೆವಿ ವಿತರಣಾ ಕೇಂದ್ರಗಳನ್ನಾಗಿ ಮೇಲ್ದರ್ಜೇಗೇರಿಸಲಾಗಿದೆ. ಇದಲ್ಲದೇ 150ಕ್ಕೂ ಹೆಚ್ಚು ಹೊಸ ಮಾರ್ಗ ಗಳ ಅಳವಡಿಕೆ, ಪಿಎಂ ಸೂರ್ಯಘರ್ ಯೋಜನೆಯಡಿ 5337 ಗ್ರಾಹಕರಿಂದ 91.2 ಮೆಗಾವ್ಯಾಟ್‌ನಷ್ಟು ಸೋಲಾರ್ ರೂಫ್ ಟಾಪ್ ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು.

> ಗ್ರಾಹಕರಿಗೆ ಉತ್ತಮಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಸೆಸ್ಕ್ ಸದಾ ಸನ್ನದ್ಧವಾಗಿದೆ. ಇದಕ್ಕಾಗಿ ವಿದ್ಯುತ್ ಜಾಲವನ್ನು ಸದೃಢಪಡಿಸಲು ಅನುವಾಗುವಂತೆ ಅಭಿಯಾನ, ವಿದ್ಯುತ್ ಮಾರ್ಗಗಳ ನಿರ್ವಹಣೆ, ವಿತರಣಾ ಪರಿವರ್ತಕಗಳ ನಿರ್ವಹಣೆ, ಮೈಸೂರುಗೆ ಭೂಗತ ಕೇಬಲ್ ಅಳವಡಿಕೆ, ಅಪಾಯಕಾರಿ ಸ್ಥಳಗಳ ನ್ಯೂನತೆ ಸರಿಪಡಿಸುವಲ್ಲಿ ಕ್ರಮವಹಿಸಲಾಗುತ್ತಿದೆ.
>
> ▶▶ -ಕೆ.ಎಂ. ಮುನಿಗೋಪಾಲ ರಾಜು,

ಮೊದಲ ಪುಟದಿಂದ

## ನಾಳೆಯಿಂದ 'ಜನರೊಂದಿಗೆ ಜನತಾದಳ'

ಸಾ.ರಾ.ಮಹೇಶ್ ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ತಿಳಿಸಿದರು. ಫೆ.22ರಂದು ಸಂಜೆ 4ಕ್ಕೆ ಕೆ.ಆರ್.ನಗರ, 24ರಂದು ತಿ.ನರಸೀಪುರ, 25ರಂದು ಬೆಳಿಗ್ಗೆ 11ಕ್ಕೆ ಹುಣಸೂರಿನಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಎಚ್.ಡಿ.ಕೋಟೆ, ವರುಣ, ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕ್ರಮಗಳನ್ನು ಸದ್ಯದಲ್ಲಿಯೇ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಪಕ್ಷವನ್ನು ಸಂಘಟಿಸಿ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವನ್ನು ಮರಳಿ ತರುವ ಸಂಕಲ್ಪದ ಕಾರ್ಯಕ್ರಮ ಇದಾಗಿದೆ. ಜನರು ಈಗಾಗಲೇ ಕಾಂಗ್ರೆಸ್ ಸರ್ಕಾರದ ಬಗ್ಗೆ ಬೇಸತ್ತಿದ್ದಾರೆ. ಗುತ್ತಿಗೆದಾರರಿಂದಲೂ ಆಕ್ಷೇಪ ವ್ಯಕ್ತವಾಗಿದೆ ಎಂದು ತಿಳಿಸಿದರು.

ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ನಿಖಿಲ್ ಕುಮಾರಸ್ವಾಮಿ ಜನರೊಂದಿಗೆ ಜನತಾದಳ ಕಾರ್ಯಕ್ರಮದ ಮೂಲಕ ಈಗಾಗಲೇ 9 ಸಾವಿರ ಕಿ.ಮೀ ಕ್ರಮಿಸಿ ಸದಸ್ಯತ್ವ ನೋಂದಣಿ ಅಭಿಯಾನ ಯಶಸ್ವಿಗೊಳಿಸಿದ್ದಾರೆ ಎಂದು ಹೇಳಿದರು.

## ಎಂಎಲ್ಸಿ ಸ್ಥಾನ ನೀಡಲಿಲ್ಲವೇಕೆ?

ಜೀವನ ದುಬಾರಿಯಾಗಿದೆ ಎಂದು ಸಾರಾ ಮಹೇಶ್ ಟೀಕಿಸಿದರು. ನಗರಾಭಿವೃದ್ಧಿ ಪ್ರಾಧಿಕಾರದ ವಾಹನಗಳು ಚೆನ್ನಾಗಿದ್ದರೂ ಅವುಗಳನ್ನು ಹರಾಜಿನ ಮೂಲಕ ಗುಜರಿಗೆ ಹಾಕಲಾಗಿದೆ. ಪ್ರಾಧಿಕಾರದಲ್ಲಿ ಜನರ ಕೆಲಸ ನಡೆಯುತ್ತಿಲ್ಲ. ಗುಪ್ತಚರ ಇಲಾಖೆ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು.

## ಗುಂಡಾಲ್ ಜಲಾಶಯದಲ್ಲಿ ಹುಲಿ ಕಳೇಬರ ಪತ್ತೆ

ಜರುಗಿಸಬೇಕು. ಈ ಭಾಗದಲ್ಲಿ ನಿರಂತರವಾಗಿ ಗಸ್ತು ಹೆಚ್ಚಿಸಬೇಕು. ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಪ್ರಾಣಿಪ್ರಿಯರು ಒತ್ತಾಯಿಸಿದ್ದಾರೆ. ಹುಲಿ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಉರುಳಿಗೆ ಸಿಲುಕಿ ದೈತ್ಯ ಹುಲಿ ಹುಲಿ ಮೃತಪಟ್ಟಿರುವುದು ಆತಂಕಕಾರಿ ವಿಚಾರವಾಗಿದ್ದು ಪ್ರಕರಣದ ಸಮಗ್ರ ತನಿಖೆ ನಡೆಸಿ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಅಂತರಂಗದ ಪಕ್ಷಿ ಹಾರಿತು: 'ಸಾವು, ನೋವಿನ' ಕಾರ್ಣಿಕ?

ಜಾತ್ರೆ ನಡೆಯುತ್ತದೆ. ಜಾತ್ರೆ ವೇಳೆ ಅದ್ದೂರಿಯಾಗಿ ಮುಳ್ಳುಗದ್ದುಗೆ ಉತ್ಸವ ನಡೆಯುತ್ತದೆ. ಕಾರ್ಣಿಕ ನಿಜವಾಗಲಿದೆ ಎಂಬುದು ಜನರ ನಂಬಿಕೆ.

## ಆರ್‌ಎಸ್‌ಎಸ್ ಬಗ್ಗೆ ದ್ವೇಷ, ಹತಾಶೆ

ಚುನಾವಣೆಗಳನ್ನು ಎದುರಿಸಲು ಧೈರ್ಯ ಇಲ್ಲ. ಪುಗ್ಸಟೆ ಮಾತನಾಡುತ್ತಾರೆ ಎಂದು ಕುಟುಕಿದರು.

## ಲಂಚ: ಲೋಕಾಯುಕ್ತ ಬಲೆಗೆ ಬಿದ್ದ ಇಬ್ಬರು ಅಧಿಕಾರಿಗಳು

ಈ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಇಬ್ಬರನ್ನೂ ಬಂಧಿಸಿದ್ದಾರೆ.

## 400 ಕೋಟಿ ದರೋಡೆ ಕಟ್ಟುಕಥೆ?

ಎನ್ನಲಾಗಿದ್ದ 400 ಕೋಟಿ ಹಣ ಸಾಗಿಸುತ್ತಿದ್ದ 2 ಕಂಟೇನರ್ ಹೈಜಾಕ್ ಪ್ರಕರಣದ ತನಿಖೆಗೆ ಮಹಾರಾಷ್ಟ್ರ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿತ್ತು. 1 ತಿಂಗಳ ಕಾಲ ತನಿಖೆ ನಡೆಸಿದ ಎಸ್‌ಐಟಿ ಕೃತ್ಯ ನಡೆದಿದೆ ಅನ್ನೋದೇ ಸುಳ್ಳು ಎಂದು ವರದಿ ನೀಡಿದೆ.

ಖಾನಾಪುರ ತಾಲೂಕಿನ ಛೋರ್ಲಾ ಬಳಿ ಗೋವಾದಿಂದ ಮಹಾರಾಷ್ಟ್ರಕ್ಕೆ 2 ಸಾವಿರ ಮುಖಬೆಲೆಯ 400 ಕೋಟಿ ರೂ. ನಗದು ಸಾಗಿಸುತ್ತಿದ್ದ ಎರಡು ಕಂಟೇನರ್‌ಗಳನ್ನೇ ಹೈಜಾಕ್ ಮಾಡಿರುವ ಪ್ರಕರಣ ಬೆಳಕಿಗೆ ಬಂದಿತ್ತು. 2 ಕಂಟೇನರ್‌ಗಳಲ್ಲಿ ಈ ಹಣ ಸಾಗಿಸುತ್ತಿದ್ದಾಗ ಹೈಜಾಕ್ ಮಾಡಲಾಗಿದೆ ಎಂದು ಆರೋಪ ಕೇಳಿಬಂದಿತ್ತು. 2025 ರ ಅಕ್ಟೋಬರ್ 16 ರಂದು ಪ್ರಕರಣ ನಡೆದಿತ್ತು. ಆದರೆ, ತಡವಾಗಿ ಬೆಳಕಿಗೆ ಬಂದಿತ್ತು.

ದೂರುದಾರ ಸಂದೀಪ್ ಪಾಟೀಲ್ ಹೇಳಿಕೆಯಲ್ಲಿ ವ್ಯತ್ಯಾಸ ಕಂಡುಬಂದಿವೆ. ಕೃತ್ಯದ ಸ್ಥಳ, ಸಮಯ, ಪ್ರಯಾಣ ಮಾರ್ಗ, ಕರೆ ವಿವರಣೆಗಳಲ್ಲಿ ನಿಖರ ಮಾಹಿತಿ ಲಭ್ಯವಾಗಿಲ್ಲ ಎಂದು ಎಸ್‌ಐಟಿ ತಿಳಿಸಿದೆ.

## ಬಾಲವೇ ನಾಯಿ ಅಲ್ಲಾಡಿಸಿದರೆ ಹೇಗೆ?: ಸಚಿವ ಎಚ್‌ಸಿಎಂ ಪ್ರಶ್ನೆ

ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡುತ್ತಿರುವ ಶಾಸಕರನ್ನು ನಾಯಿಗಳಿಗೆ ಹೋಲಿಸುತ್ತಿದೀರಾ? ಎಂದು ಮಾಧ್ಯಮಗಳು ಮರು ಪ್ರಶ್ನೆ ಹಾಕಿದ್ದಕ್ಕೆ ಉತ್ತರಿಸಿದ ಅವರು, ನಾನು ಹೈಕೋರ್ಟ್ ಹೇಳಿದ್ದನ್ನು ಹೇಳಿದ್ದೇನೆ ಅಷ್ಟೇ. ನಾಯಕರು ನಾಯಿಗಳು ಅಂತ ನಾನು ಹೇಳಿದ್ದೀನಾ? ಹೈಕಮಾಂಡ್‌ಗೆ ನಿರ್ದೇಶನ ಕೊಡುವವರು ಯಾರು? ನಾನಾ ನೀವಾ? ಬಾಲವೇ ನಾಯಿಯನ್ನು ಅಲ್ಲಾಡಿಸಿದರೆ ಎಂದು ಮಾಧ್ಯಮಗಳನ್ನೇ ಮತ್ತೆ ಪ್ರಶ್ನಿಸಿದರು.

## ಕಾಂಗ್ರೆಸ್ ಕಾರ್ಯಕಾರಿಣಿ ಸಭೆ, ನೇಮಕಾತಿ ಪತ್ರ ವಿತರಣೆ




ಮೈಸೂರು: ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ವಿಭಾಗದ ಕಾರ್ಯಕಾರಿಣಿ ಸಭೆಯು ಪಕ್ಷದ ಕಛೇರಿಯಲ್ಲಿ ಅಲ್ಪಸಂಖ್ಯಾತ ವಿಭಾಗದ ಜಿಲ್ಲಾಧ್ಯಕ್ಷ ಮೋಸಿನ್ ಖಾನ್ ನೇತೃತ್ವದಲ್ಲಿ ವಿವಿಧ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಹಲವು ಪದಾಧಿಕಾರಿಗಳು ಸರ್ಕಾರದ ನಿಗಮ - ಮಂಡಳಿ ನೇಮಕಾತಿ ಸಂದರ್ಭದಲ್ಲಿ ಕೇವಲ ಮೈಸೂರು ನಗರ ಪ್ರದೇಶದ ಅಲ್ಪಸಂಖ್ಯಾತ ಮುಖಂಡರಿಗೆ ಮಾತ್ರ ಮನ್ನಣೆ ನೀಡಲಾಗುತ್ತಿದ್ದು, ಗ್ರಾಮಾಂತರ ಭಾಗದ ಪ್ರತಿ ವಿಧಾನಸಭಾ ಕ್ಷೇತ್ರ ಗಳಲ್ಲೂ 18 ರಿಂದ 25 ಸಾವಿರದಷ್ಟು ಅಲ್ಪಸಂಖ್ಯಾತ ಸಮುದಾಯದ ಮತದಾರರಿದ್ದು, ಗ್ರಾಮಾಂತರ ಭಾಗದ ಅಲ್ಪಸಂಖ್ಯಾತರಿಗೆ ಅವಕಾಶ ನೀಡದೆ ಕಡೆಗಣಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಇದನ್ನು ಸರಿದೂಗಿಸುವಂತೆ ಮುಖ್ಯಮಂತ್ರಿ, ಉಸ್ತುವಾರಿ ಸಚಿವರು ಹಾಗೂ ಶಾಸಕರು ಗಳ ಗಮನಕ್ಕೆ ತರುವಂತೆ ಮತ್ತು ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಸಮುದಾಯದವರ ಸ್ಪರ್ಧೆಗೆ ಹೆಚ್ಚಿನ ಅವಕಾಶ ಕೊಡಿಸುವಂತೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಬಳಿ ಬೇಡಿಕೆ ಇಟ್ಟರು.

ಇದೆ ಸಂದರ್ಭದಲ್ಲಿ ನೂತನವಾಗಿ ವಿವಿಧ ಬ್ಲಾಕ್ ಗಳಿಗೆ ಅಧ್ಯಕ್ಷ ಮತ್ತು ಪದಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶ ಪತ್ರ ವಿತರಣೆ ಮಾಡಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ ವಿಜಯ್ ಕುಮಾರ್ ಸಭೆ ಅಧ್ಯಕ್ಷತೆವಹಿಸಿದ್ದರು. ಸಭೆಯಲ್ಲಿ ಅಲ್ಪಸಂಖ್ಯಾತ ವಿಭಾಗ ರಾಜ್ಯ ಪ್ರಧಾನ ಕಾರ್ಯದರ್ಶಿ ಅನ್ಸರ್ ಅಹ್ಮದ್, ಕಾರ್ಯದರ್ಶಿ ಸುಭಾನ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡ್ತಲೆ ಮಂಜುನಾಥ್, ಕಾರ್ಯದರ್ಶಿ ಸಂತೋಷ್, ಜಿಲ್ಲಾ ಅಲ್ಪಸಂಖ್ಯಾತ ವಿಭಾಗ ಉಪಾಧ್ಯಕ್ಷರಾದ ಶೇಕ್ ಅಸ್ಲಾಂ,ನಗರ್ಲೆ ಅಲ್ತಾಫ್ ಪಾಷಾ, ಪ್ರಧಾನ ಕಾರ್ಯದರ್ಶಿ ಕಡ್ಕಕೋಳ ರಫೀಕ್ ಪಾಷಾ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಆರೀಫ್ ಪಾಷ, ಮುಂಜಾಹಿದ್ ಕೋಟೆ, ಶಫೀ ಕೋಟೆ, ಅಮೀರ್ ಸುಹೇಲ್, ಮೊಹಮ್ಮದ್ ಷರೀಫ್, ಸೈಯದ್ ಆಜ್ಮತ್ ಉಲ್ಲಾ ಸೇರಿ ಇತರರು ಹಾಜರಿದ್ದರು.

# ಶ್ರೀ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಸಂಭ್ರಮ



ಚಾಮರಾಜನಗರ, ನಾಡಿನ ಪ್ರಸಿದ್ಧ ಧಾರ್ಮಿಕ ಸ್ಥಳ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದು ಮಹಾ ಶಿವರಾತ್ರಿಯನ್ನು ಸಹಸ್ರಾರು ಭಕ್ತರು ಸಡಗರ, ಶ್ರದ್ಧೆಯಿಂದ ಆಚರಿಸುತ್ತಿದ್ದಾರೆ.

ಮಲೆ ಮಹದೇಶ್ವರ ಸ್ವಾಮಿಗೆ ಎಣ್ಣೆ ಮಜ್ಜನ, ವಿಶೇಷ ಅಭಿಷೇಕ ಸೇರಿದಂತೆ ವಿವಿಧ ಉತ್ಸವಾದಿ ಗಳನ್ನು ಬೇಡಗಂಪಣ ಅರ್ಚಕರು ನೆರವೇರಿಸಿದರು. ನಾನಾ ಭಾಗದಿಂದ ಬಂದಿದ್ದ ಭಕ್ತರು ಮಹದೇಶ್ವರನ ದರ್ಶನ ಪಡೆದು ಜೈಕಾರ ಹಾಕುತ್ತಿದ್ದರು.

ಆಕರ್ಷಕ ಅಲಂಕಾರ: ದೇವಾಲಯದ ಆವರಣವನ್ನು ವಿವಿಧ ಫಲ, ಪುಷ್ಪಗಳಿಂದ ಸಿಂಗರಿಸಲಾಗಿದೆ. ದೇವಾಲಯದ ರಸ್ತೆಗಳು, ವಸತಿ ಗೃಹಗಳು, ಪ್ರಾಧಿಕಾರದ ಕಚೇರಿ, 108 ಅಡಿ ಪ್ರತಿಮೆ ಸೇರಿ ವಿವಿಧೆಡೆ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಕ್ಷೇತ್ರಕ್ಕೆ ಬಂದ ಭಕ್ತರಿಗೆ ನಿರಂತರ ದಾಸೋಹ, ಕುಡಿಯುವ ನೀರಿನ ಸೌಕರ್ಯ, ಶೌಚಾಲಯದ ವ್ಯವಸ್ಥೆ ಮಾಡಲಾಗಿದ್ದು, ಜಾಗರಣೆಗೆ ಅಗತ್ಯ ಕ್ರಮವನ್ನು ಜಿಲ್ಲಾಡಳಿತ ಕೈಗೊಂಡಿದೆ. ಶ್ರೀಮಠದ ವತಿಯಿಂದ ಡಿಸಿಎಂ ಪತ್ನಿ ಉಷಾ ಶಿವಕುಮಾರ್ ಅವರಿಗೆ ಫಲ, ತಾಂಬೂಲ ನೀಡಿ ಸನ್ಮಾನ

### ದರ್ಶನ ಪಡೆದ ಡಿಸಿಎಂ ಡಿಕೆಶಿ ಪತ್ನಿ

ಡಿಸಿಎಂ ಡಿ.ಕೆ.ಶಿವಕುಮಾರ್ ಪತ್ನಿ ಉಷಾ ಶಿವಕುಮಾರ್ ಭೇಟಿ ನೀಡಿ ಮಹದೇಶ್ವರನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಮೊದಲು ಮಲೆ ಮಹದೇಶ್ವರನಿಗೆ ವಿಶೇಷ ಪೂಜೆ, ಅರ್ಚನೆ ಮಾಡಿಸಿದ ಬಳಿಕ ಪ್ರದಕ್ಷಿಣೆ ಬಂದು ನಮಸ್ಕರಿಸಿದರು. ಬಳಿಕ, ಸಾಲೂರು ಮಠಕ್ಕೆ ತೆರಳಿ ಗದ್ದುಗೆ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿದರು. ಸಾಲೂರು ಶ್ರೀಗಳು ಉಷಾ ಅವರಿಗೆ ಆಶೀರ್ವಚನ ನೀಡಿ, ಶ್ರೀ ಮಠದ ವತಿಯಿಂದ ಫಲ, ತಾಂಬೂಲ ನೀಡಿ ಸನ್ಮಾನಿಸಿದರು.

### ಲಾಡು ಮಾರಾಟ

ಮಹದೇಶ್ವರನ ಲಾಡು ಪ್ರಸಾದ ಮಾರಾಟವೂ ಭರ್ಜರಿಯಾಗಿದೆ. ಕಳೆದ ಮೂರು ದಿನಗಳಿಂದ 3 ಲಕ್ಷಕ್ಕೂ ಅಧಿಕ ಲಾಡು ಪ್ರಸಾದ ಮಾರಾಟವಾಗಿದೆ ಎಂದು ಪ್ರಾಧಿಕಾರದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

### ಮರಳೇಶ್ವರನಿಗೆ ಒಂದೂವರೆ ಸಾವಿರ ಲೀಟರ್ ಕ್ಷೀರಾಭಿಷೇಕ

ಕೊಳ್ಳೇಗಾಲದ ಪ್ರಮುಖ ಹರನ ದೇವಾಲಯವಾದ ಮರಳೇಶ್ವರ ಸ್ವಾಮಿಗೆ ಮಹಾ ಶಿವರಾತ್ರಿ ಪ್ರಯುಕ್ತ 5 ಸಾವಿರ ಭಕ್ತರು ಒಂದೂವರೆ ಸಾವಿರ ಲೀಟರ್ ಹಾಲಿನಲ್ಲಿ ಅಭಿಷೇಕ ನೆರವೇರಿಸಿದ್ದಾರೆ. ಚಾಮರಾಜೇಶ್ವರನಿಗೆ ಕಾಶಿ ಗಂಗೆಯ ಅಭಿಷೇಕ: ಚಾಮರಾಜನಗರದ ಶ್ರೀ ಚಾಮರಾಜೇಶ್ವರನಿಗೆ ಕಾಶಿ ಗಂಗಾ ಜಲದಿಂದ ಅಭಿಷೇಕ ನೆರವೇರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಸ್ಥಾನದಲ್ಲಿರುವ ಶ್ರೀ ಸಹಸ್ರ ಲಿಂಗೇಶ್ವರನಿಗೆ ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕ ನೆರವೇರಿಸಿ ಸುಗಂಧ ದ್ರವ್ಯದಿಂದ ಅಲಂಕಾರ ಮಾಡಲಾಗಿತ್ತು.

## ಶಿವ ನಾಮಸ್ಮರಣೆಯಲ್ಲಿ ಮಿಂದೆದ್ದ ಮೈಸೂರು

### ಶಿವದೇವಾಲಯಗಳಲ್ಲಿ ಭಕ್ತ ಜನಸಾಗರ, ಇಡೀ ರಾತ್ರಿ ಹಲೆವೆಡೆ ಭಜನೆ





ಮೈಸೂರು: ನಗರದ ಇತಿಹಾಸ ಪ್ರಸಿದ್ಧ ದೇವಾಲಯಗಳಿಂದ ಹೊಸ ದೇವಾಲಯಗಳ ವರೆಗೂ ಭಕ್ತ ಸಾಗರ ಹಗಲಿರುಳು ತೆರಳಿ ಪೂಜಿಸುವ ಮೂಲಕ ಶಿವನಾಮ ಸ್ಮರಣೆಯಲ್ಲಿ ಮಿಂದೆದ್ದರು. ಅದರಲ್ಲೂ ವಿಶೇಷವಾಗಿ ಅರಮನೆ ತ್ರಿನೇಶ್ವರಸ್ವಾಮಿ ದೇವಾಲಯ ಹಾಗೂ ರಾಮಾನುಜ ರಸ್ತೆಗೆ ನೂರೊಂದು ಲಿಂಗ ದೇವಾಲಯದಲ್ಲಿ ಅತಿಹೆಚ್ಚು ಮಂದಿ ಭಾಗವಹಿಸಿ ಗಮನ ಸೆಳೆದರು.

#### ವರ್ಷಕ್ಕೊಮ್ಮೆ ದರ್ಶನ

ರಾಮಾನುಜ ರಸ್ತೆಯಲ್ಲಿನ ಗುರುಕುಲದಲ್ಲಿ ರುವ ನೂರೊಂದು ಶಿವಲಿಂಗಗಳನ್ನು ವರ್ಷಕ್ಕೊಮ್ಮೆ ಮಾತ್ರ ತೆರೆದು ನಿನ್ನೆಯೇ ಶುಚಿಗೊಳಿಸಿ, ಇಂದು ಬೆಳ್ಳಗ್ಗೆ ಹೋಮ, ಅರ್ಚನೆ, ಅಭಿಷೇಕ ಹಾಗೂ ಹೂ ಅಲಂಕಾರದೊಂದಿಗೆ ಪೂಜಿಸಲಾಯಿತು. ಸಂಜೆಯಾಗುತ್ತಿದ್ದಂತೆ ಸಾವಿರಾರು ಮಂದಿ ದರ್ಶನಕ್ಕೆ ಆಗಮಿಸಿದ್ದರು. ಇದರೊಟ್ಟಿಗೆ ಮುಂಭಾಗದಲ್ಲಿರುವ ಕಾಮೇಶ್ವರ, ಕೆ.ಜಿ.ಕೊಪ್ಪಲು ಮಲೆ ಮಹದೇಶ್ವರ ದೇವಾಲಯ, ಪಡುವಾರಹಳ್ಳಿಯಲ್ಲಿರುವ ಚಂದ್ರಮೌಳೇಶ್ವರ, ಚಾಮುಂಡಿ ಬೆಟ್ಟದ ಮಹಾಬಲೇಶ್ವರಸ್ವಾಮಿ ದೇಗುಲದಲ್ಲೂ ಶಿವರಾತ್ರಿ ಸಂಭ್ರಮ ನಡೆಯಿತು. ಜಯಲಕ್ಷ್ಮೀಪುರಂನ ಕಾಳಿದಾಸ ರಸ್ತೆಯ ಚಂದ್ರ ಕಲಾ ಆಸ್ಪತ್ರೆ ಸಮೀಪ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯವು ಶಿವರಾತ್ರಿ ಪ್ರಯುಕ್ತ 12 ಜ್ಯೋತಿರ್ಲಿಂಗ ದರ್ಶನ ಗಮನ ಸೆಳೆಯಿತು.

ಚಾಮರಾಜಪುರಂನ ಗೀತಾ ರಸ್ತೆಯಲ್ಲಿನ ಪ್ರಸನ್ನ ವಿಶ್ವೇಶ್ವರ ಸ್ವಾಮಿ, ಖಿಲ್ಲೆ ಮೊಹಲ್ಲಾದ ಭೈರವೇಶ್ವರಸ್ವಾಮಿ, ಅಶೋಕ ರಸ್ತೆಯ ಮುಕ್ಕಣೇಶ್ವರ ಸ್ವಾಮಿ, ದಿವಾನ್ಸ್ ರಸ್ತೆಯ ಅಮೃತೇಶ್ವರ ದೇವಸ್ಥಾನ, ಬೋಗಾದಿಯ ನಾಗೇಶ್ವರ ಭೋಗೇಶ್ವರಸ್ವಾಮಿ, ಕುಂಬಾರಕೊಪ್ಪಲು, ಸಿದ್ದಪ್ಪ ಚೌಕ, ನಕೇರಿ, ಬನ್ನೂರು ರಸ್ತೆ, ಲಷ್ಕರ್ ಮೊಹಲ್ಲಾದ ಕೇರಿ ಮೊದಲಾದ ದೇವಾಲಯಗಳತ್ತಲೂ ಜನಸಾಗರ ಹರಿದು ಬಂದಿತು.

#### ಚಿನ್ನದ ಕೊಳಗದಲ್ಲಿ ಕಂಗೊಳಿಸಿದ ತ್ರಿನೇಶ್ವರಸ್ವಾಮಿ

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪ್ರಮುಖವಾಗಿ ಪುರಾಣ ಪ್ರಸಿದ್ಧ ತ್ರಿನೇತ್ರೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಶಿವಲಿಂಗಕ್ಕೆ ಚಿನ್ನದ ಕೊಳಗವನ್ನು ಧರಿಸಿದ್ದನ್ನು ಭಕ್ತರು ಕಣ್ತುಂಬಿಕೊಂಡರು.

ಚಾಮುಂಡಿ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಿ.ರೂಪ ನೇತೃತ್ವದಲ್ಲಿ 11ಕೆ.ಜಿ ಇರುವ ಶುದ್ಧ ಚಿನ್ನದ ಕೊಳಗವನ್ನು ನಿನ್ನೆಯೇ ದೇವಾಲಯದ ಅರ್ಚಕರಿಗೆ ಹಸ್ತಾಂತರಿಸಿದ್ದರಿಂದ ಇಂದು ಮುಂಜಾನೆ 4ರಿಂದಲೇ ದೇವಾಲಯ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ಸೋಮವಾರ ಬೆ.11 ಗಂಟೆವರೆಗೂ ದರ್ಶನಕ್ಕೆ ಅವಕಾಶ ನೀಡಲಾಗಿದೆ. 1953ರಲ್ಲಿ ಜಯ ಚಾಮರಾಜ ಒಡೆಯರ್ ಗೆ ಗಂಡು ಸಂತಾನ ಪ್ರಾಪ್ತಿಯಾದ ಹಿನ್ನೆಲೆ ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡಿನ ನಂಜುಂಡೇಶ್ವರ ಸ್ವಾಮಿ ದೇವಸ್ಥಾನ ಮತ್ತು ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನಗಳಿಗೆ 1954ರಲ್ಲಿ ಚಿನ್ನದ ಕೊಳಗದ ವಿಗ್ರಹಗಳನ್ನು ದೇಣಿಗೆಯಾಗಿ ನೀಡಿದ್ದು ದೇವಾಲಯದ ವಿಶೇಷ. ಪ್ರಧಾನ ಅರ್ಚಕ ಶ್ರೀಹರಿ, ಸ್ಥಾನಿಕರಾದ ವೆಂಕಟೇಶ್ ಸೇರಿ ಇತರರು ಮುಂತಾದವರಿದ್ದರು.

## ಬೇಡರ ಕಣಪ್ಪ ಜಯಂತಿ ಆಚರಣೆ



ಮೈಸೂರು: ಶಿವರಾತ್ರಿ ಹಬ್ಬದ ಅಂಗವಾಗಿ ಶಿವಭಕ್ತ ಬೇಡರ ಕಣ್ಣಪ್ಪ ಜಯಂತಿಯನ್ನು ಮಂಡಿ ಮೊಹಲ್ಲಾದ ಪಟ್ಟೇಗಾರ್ ಬೀದಿಯಲ್ಲಿರುವ ಗರಡಿ ಮನೆಯ ಬಳಿ ಜರುಗಿತು.

ಮಾಜಿ ಶಾಸಕ ಹಾಗೂ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಜಗತ್ತಿನ ಮೊದಲ ನೇತ್ರಧಾನಿ ಅಂದರೆ ಅದು ಬೇಡರ ಕಣ್ಣಪ್ಪ ಭಕ್ತಿಯ ಪರಾಕಾಷ್ಠೆಯ ಪೌರಾಣಿಕ ಹಿನ್ನೆಲೆಯ ಬೇಡರ ಕಣ್ಣಪ್ಪ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಅಲ್ಲಿನ ಶಿವಲಿಂಗವನ್ನು ಕಂಡು ಶಿವನ ಭಕ್ತನಾದನು. ಅಸಂಪ್ರದಾಯಿಕವಾಗಿ ಬಾಯಿಯ ನೀರು, ಮಾಂಸವನ್ನು ನಿತ್ಯವೂ ಶಿವನಿಗೆ ಅರ್ಪಿಸುತ್ತಿದ್ದನು. ಶಿವನ ಲಿಂಗದಿಂದ ರಕ್ತ ಸುರಿಯುತ್ತಿರುವುದನ್ನು ಕಂಡು, ಕಣ್ಣಪ್ಪ ತನ್ನ ಒಂದು ಕಣ್ಣನ್ನು ಕಿತ್ತು ಲಿಂಗಕ್ಕೆ ಇರಿಸಿದನು. ಮತ್ತೊಂದು ಕಣ್ಣಿನಿಂದಲೂ ರಕ್ತ ಬರುವಾಗ, ತನ್ನ ಉಳಿದ ಕಣ್ಣನ್ನೂ ಕಿತ್ತು ಹಾಕಲು ಮುಂದಾದ ಅಪ್ರತಿಮ ತ್ಯಾಗ ಮತ್ತು ಮುಗ್ಧ ಭಕ್ತಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗಿ ಕಣ್ಣಪ್ಪನ ಕಣ್ಣುಗಳನ್ನು ಪುನಃ ಸ್ಥಾಪಿಸಿ ಅವನಿಗೆ 'ಕಣ್ಣಪ್ಪ ಎಂಬ ಹೆಸರನ್ನು ನೀಡಿ ಮೋಕ್ಷ ನೀಡಿದನೆಂದು ಸ್ಮರಿಸಿದರು. ನಗರ ಎಸ್.ಟಿ.ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಆರ್.ರಂಗಸ್ವಾಮಿ, ಎಂ.ಚಿಕ್ಕವೆಂಕಟು, ವಾರ್ಡ್ ಅಧ್ಯಕ್ಷ ಕೇಬಲ್ ವಿಜಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಆರ್.ಸೋಮಣ್ಣ, ಎನ್.ಯೋಗಾನಂದ್, ಕೆ.ಗಿರೀಶ್, ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಕೃಷ್ಣ ನಾಯಕ, ಎಸ್.ತ್ಯಾಗರಾಜ್, ಬಾಲರಾಜ್, ಯುವ ಮೋರ್ಚಾ ಅಧ್ಯಕ್ಷ ಅರ್ಜುನ್ ಕುಮಾರ್, ಜೆಸಿಬಿ.ರವಿ, ವಿಠಲ್, ಸದಾಶಿವ, ಸೂರಜ್, ನಗರ ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಆರ್ ಎಂಪಿ ಸತೀಶ್, ನಿಖಿಲ್, ಕೇಬಲ್ ರಾಜು, ಚಿನ್ನು, ಮಂಜುನಾಥ್, ಪುನೀತ್, ರಾಜಣ್ಣ, ಯಶ್ವಂತ್, ಪತಂಗೆ, ಶುಭಂ, ಅಮಿತ್, ರಾಘವೇಂದ್ರ ಮತ್ತಿತರಿದ್ದರು.

## ಡಿಕೆಶಿ ಪತ್ನಿಯಿಂದ ಮಲೆ ಮಹದೇಶ್ವರ ಶತನಾಮಾವಳಿ ಲೋಕಾರ್ಪಣೆ




ಮೈಸೂರು: ಜ್ಯೋತಿಷಿ ವಿದ್ವಾನ್ ಮೂಗೂರು ಮಧುದೀಕ್ಷಿತ್ ಅವರ ನೇತೃತ್ವದಲ್ಲಿ ನಿರ್ಮಿಸಿರುವ ಶ್ರೀ ಮಲೆ ಮಹದೇಶ್ವರ ಅಷ್ಟೋತ್ತರ ಶತನಾಮಾವಳಿ ವಿಡಿಯೋವನ್ನು ಸಾಲೂರು ಮಠದಲ್ಲಿ ಶಿವರಾತ್ರಿಯಂದು ಬಿಡುಗಡೆ ಮಾಡಲಾಯಿತು.

ಶ್ರೀ ಮಾಯಕಾರ ಮ್ಯೂಸಿಕ್ ಹಾಗೂ ಶ್ರೀ ಮಾಯಕಾರ ಪ್ರೊಡಕ್ಷನ್ಸ್ ಸಂಸ್ಥೆಯಿಂದ ನಿರ್ಮಾಣವಾಗಿರುವ ಶತನಾಮಾವಳಿಯನ್ನು ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಶಿವರಾಜಪ್ಪ ರಚಿಸಿದ್ದು, ವಿನಯ್ ಶಂಕರ್ ಅವರ ಸಂಗೀತ ಸಂಯೋಜನೆ ಮತ್ತು ಗಣೇಶ್ ಕಾರಂತ್ ಗಾಯನದಲ್ಲಿ ಮೂಡಿಬಂದಿದೆ.

ಶ್ರೀ ಮಲೆ ಮಹದೇಶ್ವರ ಅಷ್ಟೋತ್ತರ ಶತನಾಮಾವಳಿ ಪೋಸ್ಟರ್ ಹಾಗೂ ವಿಡಿಯೋವನ್ನು ಮಹಾಶಿವರಾತ್ರಿಯಂದು ಶ್ರೀಕ್ಷೇತ್ರ ಮಹದೇಶ್ವರ ಬೆಟ್ಟದ ಸಾಲೂರು ಮಠದಲ್ಲಿ ಸಾಲೂರು ಮಠದ ಪೀಠಾಧ್ಯಕ್ಷ ಡಾ.ಶ್ರೀ.ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ನಿ ಉಷಾ ಶಿವಕುಮಾರ್ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಮಾಯಕಾರ ಪ್ರೊಡಕ್ಷನ್ಸ್ ಸಂಸ್ಥೆಯ ಮುಖ್ಯಸ್ಥ ವಿದ್ವಾನ್ ಮೂಗೂರು ಮಧುದೀಕ್ಷಿತ್, ಅಷ್ಟೋತ್ತರ ರಚಿಸಿರುವ ಪ್ರೊ.ಎಸ್.ಶಿವರಾಜಪ್ಪ, ಡಿ.ವೈ.ಎಸ್.ಪಿ. ಧರ್ಮೇಂದ್ರ, ಹರೀಶ್ ಹಾಗೂ ಮಹೇಂದ್ರ ಶೈವ ಇತರರು ಉಪಸ್ಥಿತರಿದ್ದರು.

## ಹೆಣ್ಣು ಚಿರತೆ ಸೆರೆ, ಇನ್ನೊಂದೆಡೆ ಮನೆಗೆ ನುಗ್ಗಿದ ಜಿಂಕೆ ರಕ್ಷಣೆ



ಗುಂಡ್ಲುಪೇಟೆ :–ತಾಲೂಕಿನ ಪಡುಗೂರು ಗ್ರಾಮದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಭೋನಿಗೆ ಹೆಣ್ಣುಚಿರತೆಯೊಂದು ಸರೆಯಾಗಿರುವ ಘಟನೆ ಭಾನುವಾರ ತಡರಾತ್ರಿ ನಡೆದಿದೆ.

ಪಡುಗೂರು ಗ್ರಾಮದ ರಾಘವಾನ್ ಎಂಬುವವರ ಜಮೀನಿನಲ್ಲಿ ಕಳೆದೊಂದು ವಾರದ ಹಿಂದೆ ಅರಣ್ಯ ಇಲಾಖೆ ಇರಿಸಿದ್ದ ಭೋನಿಗೆ ಸುಮಾರು 3–4 ವರ್ಷದ ಹೆಣ್ಣು ಚಿರತೆ ಭಾನುವಾರ ತಡರಾತ್ರಿ ಬಿದ್ದಿದೆ ಎನ್ನಲಾಗುತ್ತಿದೆ ಸೋಮವಾರ ಬೆಳಗಿನ ಜಾವ ಚಿರತೆ ಘರ್ಜನೆ ಕೇಳಿ ಬೆಳಕಿಗೆ ಬಂದಿದೆ ಭೋನಿಗೆ ಚಿರತೆ ಬಿದ್ದಿರುವ ಮಾಹಿತಿ ತಿಳಿದ ಗುಂಡ್ಲುಪೇಟೆ ಬಫರ್ ಜೋನ ವಲಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬೇಟೆ ನೀಡಿ ಪರಿಶೀಲನೆ ನಡೆಸಿದ್ದಾರೆ ಕೆಲ ತಿಂಗಳಿಂದಲೂ ಪಡಗೂರು ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿಚಿರತೆ ಹಾವಳಿ ಹೆಚ್ಚಿದು ಜಾನುವಾರು –ಮೇಕೆಗಳ ಮೇಲೆ ನಡೆಸಿ ಕೂಂದು ಹಾಕಿ ರೈತರಲ್ಲಿ ಭಯ ಉಂಟು ಮಾಡಿತ್ತು ಇತ್ತೀಚೆಗೆ ನಾಯಿಯಾಂದರ ಮೇಲೆ ದಾಳಿ ನಡೆಸಿ ಎಳೆದೋಯ್ದುಕೊಂದು ಹಾಕಿತ್ತು ಈ ವೇಳೆ ರೈತರ ಒತ್ತಾಯದಿಂದ ಇರಿಸಿದ್ದ ಬೋನಿಗೆ ಚಿರತೆ ಬಿದ್ದಿರುವುದು ರೈತರು ನಿಟ್ಟಿಸಿರು ಬಿಡುವಂತಾಗಿದೆ. ಮುಂದಿನ ದಿನಗಳಲ್ಲಿ ಚಿರತೆ ಮತ್ತು ಹುಲಿಗಳು ನಾಡಿಗೆ ಬರದಂತೆ ತಡೆಯಲು ಅರಣ್ಯ ಅಧಿಕಾರಿಗಳು ಎಚ್ಚರವಹಿಸಬೇಕೆಂದು ರೈತ ಮುಖಂಡ ಪಡಗೂರು ಶಿವಕುಮಾರ್ ಒತ್ತಾಯಿಸಿದ್ದಾರೆ

### ಮನೆಗೆ ನುಗ್ಗಿದ ಜಿಂಕೆ ರಕ್ಷಣೆ

ಆಹಾರದಾಸೆಗೆ ನಾಡಿನತ್ತ ಬಂದು ಬಳಿಕ ನಾಯಿ ಇಲ್ಲವೇ ವನ್ಯಜೀವಿ ದಾಳಿಯಿಂದ ತಪ್ಪಿಸಿಕೊಳ್ಳಲು ಮನೆಗೆ ನುಗ್ಗಿದ ಜಿಂಕೆಯನ್ನು ರಕ್ಷಿಸಿದ ಘಟನೆ ಗುಂಡ್ಲುಪೇಟೆ ತಾಲೂಕಿನ ಕುರುಬರಹುಂಡಿ ಗ್ರಾಮದಲ್ಲಿ ನಡೆದಿದೆ. ಕುರುಬರಹುಂಡಿ ಗ್ರಾಮದ ಶರಣಪ್ಪ ಎಂಬವರ ಮನೆಗೆ ನುಗ್ಗಿದ ಜಿಂಕೆಯು ಕೊನೆಗೂ ಬಚಾವಾಗಿದೆ. ಜಿಂಕೆ ಕಂಡು ಗಾಬರಿಗೊಳಗಾದ ಮನೆಮಂದಿ ಬಳಿಕ ಅದನ್ನು ಆರೈಕೆ ಮಾಡಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಿಬ್ಬಂದಿ ಭೇಟಿ ನೀಡಿ ಜಿಂಕೆಯನ್ನು ರಕ್ಷಿಸಿ ಕರೆದೊಯ್ದು, ಜಿಂಕೆಯನ್ನು ಮತ್ತೆ ಸುರಕ್ಷಿತವಾಗಿ ಕಾಡಿಗೆ ಬಿಡಲಿದ್ದಾರೆ.

## ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ



ಕೊಳ್ಳೇಗಾಲ. ತಾಲ್ಲೂಕಿನ ಶಿವನಸಮುದ್ರ ದೇವಸ್ಥಾನದ ಬಳಿ ಸುಮಾರು 3 ಕಿ.ಮಿ ಉದ್ದದ 1 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಅವರು ಗುದ್ದಲಿ ಪೂಜೆ ನಡೆಸಿದರು.

ದರ್ಗಾದಿಂದ ಸತ್ತೇಗಾಲ ಹ್ಯಾಂಡ್ ಪೋಸ್ಟ್ ವರೆಗೆ ಹದಗೆಟ್ಟಿರುವ ರಸ್ತೆಗೆ ಕಾಮಗಾರಿಗಾಗಿ ಚಾಲನೆ ನೀಡಿ ಮಾತನಾಡಿದ ಇವರು, ಎನ್.ಹೆಚ್ ರಸ್ತೆಯ ಉಳಿತಾಯ ಹಣದಲ್ಲಿ 75 ಲಕ್ಷ ಹಾಗೂ ವಿಶೇಷ ಅನುದಾನದಿಂದ 20 ಲಕ್ಷ ನೀಡಿ ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲು ಇಂದು ಚಾಲನೆ ನೀಡಲಾಗಿದೆ. ಸುಮಾರು ವರ್ಷಗಳಿಂದ ಇಲ್ಲಿಗೆ ಬರುವ ಪ್ರವಾಸಿಗರ ಬೇಡಿಕೆ ಯಾಗಿದ್ದ ಈ ರಸ್ತೆಯನ್ನು ಅಭಿವೃದ್ಧಿ ಪಡಿ ಸಿ ಮುಂದಿನ ದಿನಗಳಲ್ಲಿ ಇಲ್ಲಿ ಇರುವ ಜಲಪಾತವನ್ನು ಅಭಿವೃದ್ಧಿ ಪಡಿಸಿ ಹೆಚ್ಚು ಪ್ರವಾಸಿಗರು ಆಕರ್ಷಿಸಲು ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮೈಯಗೊಳ್ಳಲಾಗುವುದು ಎಂದು ತಿಳಿಸಿದರು. ಸತ್ತೇಗಾಲ ಗ್ರಾ.ಪಂ ಮಾಜಿ ಅಧ್ಯಕ್ಷ ಮಲ್ಲೇಶ್, ಮಾಜಿ ಸದಸ್ಯರು ಚೆನ್ನಿಪುರ ದೊಡ್ಡಿ ರಾಜು, ಜಮೀರ್ ಪಾಷ, ಪಿಎಸಿಸಿಎಸ್ ಬ್ಯಾಂಕ್ ಅಧ್ಯಕ್ಷ ನಂಜುಂಡ, ಮುಖಂಡರು ಹ್ಯಾಂಡ್ ಪೋಸ್ಟ್ ಮಹದೇವ, ವಿಜಯಕುಮಾರ್, ಶಾಂತರಾಜು, ಮಂಜೇಶ್ ಗೌಡ, ರವಳಪ್ಪ, ಫಾಜೀಲ್ ಪಾಷ, ಯೂನುಸ್, ಇಮ್ರಾನ್ ಟಿಪ್ಪು, ಎನ್.ಹೆಚ್ ಇಂಜಿನಿಯರ್ ಲೋಕೇಶ್, ರಾಹುಲ್ ಹಾಗೂ ಇತರರು ಇದ್ದರು.

## ದತ್ತ ಪೀಠದಲ್ಲಿ ಶಿವರಾತ್ರಿ ಸಂಭ್ರಮ



ಮೈಸೂರು: ಅವಧೂತ ದತ್ತ ಪೀಠದ ಇತಿಹಾಸದಲ್ಲಿ 60ನೇ ವರ್ಷದ ಶಿವರಾತ್ರಿ ಮಹೋತ್ಸವವಾಗಿದ್ದು, ಆಶ್ರಮದಲ್ಲಿ ಸಡಗರ ಮನೆಮಾಡಿದೆ ಎಂದು ಅವಧೂತ ದತ್ತ ಪೀಠದ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಶಿವರಾತ್ರಿ ಮಹೋತ್ಸವದ ಅಂಗವಾಗಿ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿರುವ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ವಿಶೇಷ ಅಭಿಷೇಕ ಮಂಗಳಾರತಿ ಸಲ್ಲಿಸಿ ಸ್ವಾಮೀಜಿಯವರು ಮಾಧ್ಯಮದವರೊಂದಿಗೆ ಮಾತನಾಡಿದರು. ಶಿವರಾತ್ರಿಯ ಅಂಗವಾಗಿ 24 ಗಂಟೆಗಳ ಕಾಲ ನಿರಂತರ ಶಿವ ಸ್ಮರಣೆ, ಜಾಗರಣೆ, ಸಂಗೀತ ಮತ್ತು ಭಜನೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ತಮಿಳುನಾಡಿನಿಂದ ಆಗಮಿಸಿರುವ ವಿಶೇಷ ಕಲಾವಿದರು ಪಂಚಭೂತಗಳಿಗೆ ಸಂಬಂಧಿಸಿದಂತೆ 11 ಬಗೆಯ ವಿಶೇಷ ಅಲಂಕಾರಗಳನ್ನು ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು. ಭಕ್ತರ ಅನುಕೂಲಕ್ಕಾಗಿ ಒಳಗೆ ಮತ್ತು ಹೊರಗೆ ಎಂದು ಎರಡು ಕಡೆ ಶಿವಲಿಂಗ ದರ್ಶನ ಮತ್ತು ಅಭಿಷೇಕಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ.ಸಾಮೂಹಿಕ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮದ ಬಗ್ಗೆ ಹರ್ಷ ವ್ಯಕ್ತಪಡಿಸಿದ ಶ್ರೀಗಳು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿ ಹೊರಹೊಮ್ಮಿದೆ ಎಂದರು.

## ಪೋಲೀಸ್ ದೌರ್ಜನ್ಯ ಖಂಡಿಸಿ ಧರಣಿ

ಮೈಸೂರು: ನಗರದ ರಾಜೇಂದ್ರ ನಗರ ಕೆಸರೆ ಕುರಿಮಂಡಿಯ ಪರಿಶಿಷ್ಟ ಸಮುದಾಯದವರ ಮೇಲೆ ನರಸಿಂಹರಾಜ ಠಾಣೆ ಪೊಲೀಸರು ದೌರ್ಜನ್ಯ ಎಸಗಿದ್ದು, ಇವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಇದನ್ನು ಖಂಡಿಸಿ ಫೆ.18ರಂದು ಬೆಳಗ್ಗೆ 10ಕ್ಕೆ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಕುರಿಮಂಡಿ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಪ್ರತಿಭಟನಾ ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಭೀಮ್ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ. ಮಂಜುನಾಥ್ ತಿಳಿಸಿದರು.

ಫೆ. 6 ರಂದು ಪ್ರದೇಶದಲ್ಲಿ ಜಾತಿ ನಿಂದನೆ ಹಾಗೂ ಹಲ್ಲೆಯಲ್ಲಿ ಪೊಲೀಸರ ಭಾಗಿಯಾಗಿದ್ದಾರೆ. ಜೊತೆಗೆ ಸುಳ್ಳು ಪ್ರಕರಣವನ್ನೂ ದಾಖಲಿಸಿದ್ದಾರೆಂದು ದೂರಿದರು. ಜೊತೆಗೆ, ಕೂಡಲೇ ಸುಳ್ಳು ಪ್ರಕರಣ ವಾಪಸ್ ಪಡೆಯಬೇಕು, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು, ಜಾತಿ ನಿಂದನೆ ದೂರು ನೀಡಿದರೂ ಎರಡು ದಿನ ವಿಳಂಬ ಮಾಡಿದ ಸಬ್ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ಅವರನ್ನು ವಜಾಗೊಳಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು. ನೊಂದ ಕುಟುಂಬಸ್ಥರಾದ ಮಣಿಕಂಠ, ರೀಟಾ, ಡಿಎಸ್‌ಎಸ್ ಮುಖಂಡ ಶಿವರಾಜ್, ಅಶೋಕಪುರಂ ಮುಖಂಡ ಪುಟ್ಟರಾಜು ಇದ್ದರು.




### 11 ಕೋಟಿ ರೂ. ವೆಚ್ಚದಲ್ಲಿ ಯಡಿಯೂರು, ಕಥಾನಾಯಕನ, ಎಣ್ಣೆಹೊಳೆ, ಹರದಹಳ್ಳಿ ಕೆರೆಗಳ ಅಭಿವೃದ್ಧಿಗೆ ಚಾಲನೆ

## ಕೆರೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು: ಶಾಸಕ ಪುಟ್ಟರಂಗಶೆಟ್ಟಿ

ಚಾಮರಾಜನಗರ, ಸಣ್ಣ ನೀರಾವರಿ ಇಲಾಖೆ ಹಾಗೂ ಕಾವೇರಿ ನಿಗಮದ ವ್ಯಾಪ್ತಿಗೆ ಬರುವ ಕೆರೆಗಳನ್ನು ಅಭಿವೃದ್ಧಿ ಪಡಿಸಿ, ಅಂತರ್ಜಲ ವೃದ್ಧಿ, ಜನ ಜಾನುವಾರುಗಳಿಗೆ ಕುಡಿಯುವ ನೀರು ಕಲ್ಪಿಸಲು ಕೆರೆಗಳಿಗೆ ಕಾಯಕಲ್ಪ ನೀಡಲು ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು ಆದ ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಯಡಿಯೂರು ಕೆರೆ, ಕಥಾನಾಯಕನ ಕೆರೆ, ಎಣ್ಣೆಹೊಳೆ ಕೆರೆ ಹಾಗೂ ಹರದಹಳ್ಳಿ ಕೆರೆಗಳನ್ನು 11 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಬಹಳಷ್ಟು ಕೆರೆಗಳು ಹೂಳು ತುಂಬಿ. ನೀರು ಬರುವ ಕಾಲುವೆಗಳು ಮುಚ್ಚಿ ಹೋಗಿರುವುದು ಹಾಗೂ ತೂಬು ತಿಥಿಲಗೊಂಡು ಕೆರೆ ಏರಿಗಳು ಸಹ ಕುಸಿಯುವ ಹಂತದಲ್ಲಿವೆ. ಇಂಥ ಕೆರೆಗಳನ್ನು ಅಭಿವೃದ್ಧಿ ಪಡಿಸಲು ನಮ್ಮ ಸರ್ಕಾರಕ್ಕೆ ಪ್ರಸ್ತಾವಣೆ ಸಲ್ಲಿಸಿದ್ದೇವೆ. ಈಗ ಮೊದಲ ಹಂತದಲ್ಲಿ ನಾಲ್ಕು ಕೆರೆಗಳಿಗೆ 11 ಕೋಟಿ ರೂ. ಬಿಡುಗಡೆಯಾಗಿದೆ. ಈ ಕೆರೆಗಳಲ್ಲಿ ಹೂಳು ತೆಗೆಸುವುದು, ಕಲ್ವರ್ಟ್ ನಿರ್ಮಾಣ, ತೂಬು ದುರಸ್ತಿ, ಮಳೆ ನೀರು ಹರಿದು ಬರುವ ನಾಲೆಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದ್ದು, ಅದರಂತೆ ಕಾಮಗಾರಿಗಳನ್ನು ನಿರ್ವಹಣೆ ಮಾಡುವಂತೆ ಇಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಶಾಸಕರು ಸೂಚನೆ ನೀಡಿದರು.



ಗ್ರಾಮಸ್ಥರು ಸಹ ಕೆರೆಗಳ ಅಭಿವೃದ್ಧಿಗೆ ಹೆಚ್ಚಿನ ಸಹಕಾರ ನೀಡಬೇಕು. ಕೆರೆಗಳು ಮಳೆಗಾಲದಲ್ಲಿ ಸಂದರ್ಭದಲ್ಲಿ ತುಂಬಿದಷ್ಟು ಕುಡಿಯುವ ನೀರು ಸಮರ್ಪಕವಾಗಿ ದೊರೆಯುತ್ತವೆ. ಕೆರೆಗಳು ತುಂಬಿದಷ್ಟು ಊರು ಸಂಮೃದ್ದವಾಗುತ್ತದೆ. ಹೀಗಾಗಿ ನಮ್ಮ ಪುರುವಿಕರು ಊರಿಗೊಂದು ಕೆರೆಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇದನ್ನು ನಾವು, ನೀವು ಎಲ್ಲರು ಸೇರಿ ಸಂರಕ್ಷಣೆ ಮಾಡಿಕೊಂಡು ಹೋಗಬೇಕಾಗಿದೆ. ಹೀಗಾಗಿ ಗ್ರಾಮಸ್ಥರು ಕೆರೆಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಕಲ್ಪಿಸಿಕೊಡಬೇಕು ಎಂದು ಪುಟ್ಟರಂಗಶೆಟ್ಟಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಸೋಮೇಶ್ವರ್, ಮಾಜಿ ಗ್ರಾ.ಪಂ ಅಧ್ಯಕ್ಷರಾದ ಮಂಗಲ ಶಿವಣ್ಣ, ಪ್ರಕಾಶ್, ಮಂಜುನಾಥ್, ತಾ.ಪಂ ಮಾಜಿ ಸದಸ್ಯ ಎಚ್.ಎಂ.ಮಹದೇವಶೆಟ್ಟಿ, ಮುಖಂಡರಾದ ಮಹೇಶ್ ಕುದರ್, ಹಲ್ಲೇಪುರ ಕುಮಾರ್‌ಸ್ವಾಮಿ, ಮಹದೇವಸ್ವಾಮಿ,ಮಂಜು, ಮಹೇಶ್, ಬಿ. ಮಲ್ಲೇಶ್, ಬಿ. ಲಿಂಗರಾಜು, ಜೆ. ಮರಿಸ್ವಾಮಿ, ಶಿವಕುಮಾರ್, ಕೆ.ವಿ. ವೆಂಕಟೇಶ್, ಜಯಸ್ವಾಮಿ, ಬಂಗಾರಶೆಟ್ಟಿ, ಅಮಚವಾಡಿ ರಾಜು, ಮಹೇಶ್, ಶಿವಣ್ಣ, ಮಂಜು, ರಾಮು, ಸಣ್ಣ ನೀರಾವರಿ ಇಲಾಖೆಯ ಎಇಇ ಸಿ.ಎಂ. ಅಭಿಲಾಶ್, ಎಇ ಮಂಜುಳಾ, ಗುತ್ತಿಗೆದಾರರ ಭಾಸ್ಕರ್, ಸೇರಿದಂತೆ ಗ್ರಾಮಸ್ಥರು ಹಾಗೂ ಮುಖಂಡರುಸ ಹಾಜರಿದ್ದರು.

## 18ರಂದು ವಿನಿಮಯ ಕಾರ್ಯಕ್ರಮ

ಮೈಸೂರು: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ವತಿಯಿಂದ ಫೆ.18 ರಿಂದ 25 ರವರೆಗೆ ಜಪಾನ್– ಭಾರತ ಶೈಕ್ಷಣಿಕ ವಿನಿಮಯ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಫೆ. 18 ರ ಬೆಳಗ್ಗೆ 10ಕ್ಕೆ ಕ್ಯಾಂಪಸ್ ಆವರಣದಲ್ಲಿನ ಐಆರ್‌ಐ ಭವನದಲ್ಲಿ ಉದ್ಘಾಟನೆ




ನಡೆಯಲಿದೆ ಎಂದು ಪ್ರಾಚಾರ್ಯ ಡಾ.ಸಿ. ನಟರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಡಾ.ಕೆ.ಎಸ್. ರಂಗಪ್ಪ, ಡಾ.ಸಿ.ಜಿ. ಬೆಟ್‌ಸೂರ್‌ಮಠ್, ಡಾ.ಬಿ. ಸುರೇಶ್, ಪ್ರೊ. ತೆರೊ ಸೊನೆ, ಡಾ.ಎ.ಎನ್. ಸಂತೋಷ್‌ಕುಮಾರ್, ಪ್ರೊ.ಎನ್.ಕೆ. ಲೋಕ ನಾಥ್ ಇನ್ನಿತರರು ವೇದಿಕೆಯಲ್ಲಿರುವರು ಎಂದು ತಿಳಿಸಿದರು. 8 ದಿನಗಳ ಈ ಕಾರ್ಯಕ್ರಮದಲ್ಲಿ ಒಟ್ಟು 35 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಇವರು ಆಹಾರ ವ್ಯವಸ್ಥೆ, ಪರಿಸರ ಸುಸ್ಥಿರತೆ, ಕೃಷಿ ಮತ್ತು ಮಾನವ ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚರ್ಚೆ, ಪ್ರಯೋಗಾಲಯ ಪರಿಚಯ, ಕ್ಷೇತ್ರ ಭೇಟಿ, ಸಂಯುಕ್ತ ಸಮ್ಮೇಳನಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.ಡಾ. ಕಾರ್ತಿಕ, ಪ್ರೊ. ಮಲ್ಲು ಇದ್ದರು.

## ಒಪ್ಪಂದದ ಪತ್ರ ಸುಟ್ಟು ರೈತರ ಆಕ್ರೋಶ



ಮೈಸೂರು: ಸಂಯುಕ್ತ ಕಿಸಾನ್ ಮೋರ್ಚಾ ಎನ್‌ಪಿಯ ರಾಷ್ಟ್ರೀಯ ಕರೆ ಮೇರೆಗೆ ರೈತರು ತೋಳಿಗೆ ಕಪ್ಪುಪಟ್ಟಿ ಕಟ್ಟಿ ಭಾರತ ಅಮೆರಿಕ ಮುಕ್ತ ವ್ಯಾಪಾರ ಒಪ್ಪಂದ ಕರಡು ಪ್ರತಿ ಸುಟ್ಟು ತಮ್ಮ ಆಕ್ರೋಶವನ್ನು ಹೊರಹಾಕಿದರು.

ನಗರದ ಕುವೆಂಪು ಉದ್ಯಾನವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಜಮಾವಣೆಗೊಂಡ ರೈತರು ತೋಳಿಗೆ ಕಪ್ಪು ಬಟ್ಟೆ ಕಟ್ಟಿ ಕೇಂದ್ರ ಬಿಜೆಪಿ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಬಳಿಕ ಕುರುಬೂರು ಶಾಂತಕು ಮಾರ್ ಮಾತನಾಡಿ, ಕೇಂದ್ರ ಸರ್ಕಾರ ಇತ್ತೀಚೆಗೆ ಅಮೆರಿಕ ಜೊತೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡುವ ಮೂಲಕ ಭಾರತ ದೇಶದ ರೈತರ ಮರಣ ಶಾಸನ ಬರೆದಿದ್ದಾರೆ. ಕೃಷಿ ಉತ್ಪನ್ನಗಳು ಹೈನುಗಾರಿಕೆ ಉತ್ಪನ್ನಗಳು ಅಮೆರಿಕದಿಂದ ಭಾರತದ ದೇಶಕ್ಕೆ ಆಮದಾಗಲು ಯಾವುದೇ ಸುಂಕವಿಲ್ಲದೆ ವಿನಾಯಿತಿ ನೀಡಿರುವುದು ದೇಶದ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಇಲ್ಲದಂತಾಗಿ ಉತ್ಪನ್ನಗಳಿಗೆ ಬೆಲೆ ಇಲ್ಲದಂತಾಗುತ್ತದೆ. ಇದರಿಂದ ರೈತರು ಸಾಲಗಾರರಾಗುತ್ತಾರೆ ರೈತರ ಆತ್ಮಹತ್ಯೆಗಳು ಹೆಚ್ಚುತ್ತವೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಒಪ್ಪಂದದಿಂದ ಹೊರಗೆ ಬರಬೇಕು ಇಲ್ಲದಿದ್ದರೆ ದೇಶದ ರೈತರ ತೀವ್ರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಸಂಸದರು ಕೇಂದ್ರ ಮಂತ್ರಿಗಳಿಗೆ ಗೇರಾವ್ ಮಾಡಬೇ ಕಾಗುತ್ತದೆ ಎಂದು ಎಚ್ಚರಿಸುತ್ತಿದ್ದೇವೆಂದರು. ತಾಲ್ಲೂಕು ಅಧ್ಯಕ್ಷ ಲಕ್ಷ್ಮಿಪುರ ವೆಂಕಟೇಶ್, ಜಿಲ್ಲಾ ಸಂಘಟನೆ ಕಾರ್ಯದರ್ಶಿ ವರಕೂಡು ನಾಗೇಶ್, ಜಿಲ್ಲಾ ಉಪಾ ಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ದೊಡ್ಡಕಾಟೂರು ಮಹ ದೇವಸ್ವಾಮಿ, ಕಾಟೂರು ಶಿವಣ್ಣ, ವಾಜಮಂಗಲ ಮಹ ದೇವು, ಗಿರೀಶ್, ಮಹೇಶ್, ಪಿ.ನಾಗೇಂದ್ರ, ಪ್ರಭಾಕರ್, ಶಿವಣ್ಣ, ಚಿಕ್ಕಳ್ಳಿ ನಾಗರಾಜು, ಪಾಳ್ಯಸ್ವಾಮಿ, ಚಿನ್ನ ನಾಯಕ, ಕಮಲಮ್ಮ ಸೇರಿ ಇನ್ನೂ ಅನೇಕರು ಇದ್ದರು.


# ಗೃಹ ಇಲಾಖೆ ಹಳ್ಳ ಹಿಡಿದಿದೆ

## ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಂಪೂರ್ಣ ವಿಫಲ: ಮಾಜಿ ಸಚಿವ ಎನ್.ಮಹೇಶ್

ಚಾಮರಾಜನಗರ, ರಾಜ್ಯ ಕಾಂಗ್ರೆಸ್ ಸರ್ಕಾರದ ಸಾವಿರ ದಿನದ ಸಾಧನೆ ಶೂನ್ಯವಾಗಿದ್ದು, ಹುಚ್ಚು ಮದುವೆಯಲ್ಲಿ ಉಂಡವನೇ ಜಾಣ ಎಂಬಾತಾಗಿದೆ ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸಾವಿರ ದಿನಗಳನ್ನು ಪೂರೈಸಿದ್ದು, ಸಾವಿರಾರು ದಿನಗಳ ಆಡಳಿತದಲ್ಲಿ ಸಾವಿರಾರು ಸಮಸ್ಯೆಗಳನ್ನು ಸರ್ಕಾರ ಮಹಾ ಜನತೆಯ ತಲೆಯಮೇಲೆ ಹಾಕಿದೆ. ಅದರೆ ಮುಖ್ಯಮಂತ್ರಿ ಗಳು ತಮ್ಮ ಫೇಸ್‌ಬುಕ್ ಪೇಜ್ ನಲ್ಲಿ ಸಾವಿರ ದಿನಗಳಲ್ಲಿ 1.37 ಸಾವಿರ ಕುಟುಂಬಗಳಿಗೆ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ 1 ಲಕ್ಷದ 13 ಸಾವಿರ ಕೋಟಿ ಹಣವನ್ನು ಜನರಿಗೆ ತಲುಪಿದ್ದೇವೆ ಅದರ ಪರಿಣಾಮದಿಂದ ತಲಾದಾಯ ಜಾಸ್ತಿಯಾಗಿ ದ್ದು, ನಮ್ಮ ರಾಜ್ಯ ನಂಬರ್‌ಒನ್ ಸ್ಥಾನದಲ್ಲಿದೆ. ಅಲ್ಲದೆ ಒಂದು ಲಕ್ಷ ಕೋಟಿ ಅಭಿವೃದ್ಧಿ ಯೋಜನೆಗಳಿಗೆ ಬಳಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಪತ್ನಿ ಗೆ 2 ಸಾವಿರ ಕೊಟ್ಟು ಪತಿ ಜೇಬಿನಿಂದ, ಕುಟುಂಬದ ಕಡೆಯಿಂದ 10 ಸಾವಿರ ರೂ. ಸಂಗ್ರಹಿಸುವ ಮೂಲಕ ಕೆಟ್ಟ ಆರ್ಥಿಕ ವ್ಯವಸ್ಥೆಯನ್ನು ರಾಜ್ಯದ ಜನರ ಮೇಲೆ ಹೇರಿದ್ದಾರೆ ಎಂದರು.

ಆಸ್ಪತ್ರೆಯಲ್ಲಿ ಚೀಟಿ ಪಡೆಯುವ ಶುಲ್ಕದಿಂದ ಹಿಡಿದು ಆರ್ ಟಿಸಿ ವರೆಗೆ ದರ ದುಪ್ಪಟ್ಟು ಮಾಡಿದ್ದಾರೆ. ಬಡವರು ಕುಡಿಯುವ ಮದ್ಯದ ದರವನ್ನು ಶೇ.20 ರಷ್ಟು ಹೆಚ್ಚು ಮಾಡಿ ಹಣ ವಸೂಲಿ ಮಾಡುವ ಮೂಲಕ ಗ್ಯಾರಂಟಿ ಯೋಜನೆಗಳ ವೆಚ್ಚವನ್ನು ಸರಿದೂಗಿಸುವ ಕೆಲಸವನ್ನು ಮಾಡಿದ್ದಾರೆ. ಇದು ರಾಜ್ಯಸರ್ಕಾರದ ಸಾವಿರ



### ಕಾನೂನು ಸುವ್ಯವಸ್ಥೆ ಹಳ್ಳಹಿಡಿದಿದೆ

ನಾಗರೀಕ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣವೇ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಆದರೆ ರಾಜ್ಯ ಸರ್ಕಾರ ಹಗರಣ ಸರಮಾಲೆ ಇದ್ದು, ಮೈಸೂರು, ಬೆಂಗಳೂರಿನಲ್ಲಿ ಡ್ರಗ್ಸ್ ಮಾಫೀಯಾವನ್ನು ಮಹಾರಾಷ್ಟ್ರ ಪೊಲೀಸರು ಪತ್ತೆಹಚ್ಚಿದ್ದಾರೆ. ಕರ್ನಾಟಕ ಗೃಹ ಇಲಾಖೆ ವೀಕ್ ಆಗಿದ್ದು ಹಳ್ಳಹಿಡಿದಿದೆ. ಆಗಾಗಿ ಕೇಂದ್ರ ತನಿಖಾ ದಳ, ಪಕ್ಕದ ರಾಜ್ಯದ ಪೊಲೀಸರು ಕರ್ನಾಟಕ ದ ಅವ್ಯವಹಾರಗಳನ್ನು ಪತ್ತೆಹಚ್ಚಿದ್ದಾರೆ ಎಂದರು. ಮೂಡಾ ಹಗರಣದಲ್ಲಿ ಮುಖ್ಯಮಂತ್ರಿ ಅವರೇ ಸಿಕ್ಕಿಕೊಂಡಿದ್ದರು. ವಿರೋಧ ಪಕ್ಷದವರು ಪ್ರತಿಭಟನೆ ಮಾಡಿದ ಮೇಲೆ 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ.

ದಿನಗಳ ಆಡಳಿತದ ಅಭಿವೃದ್ದಿನಾ ಎಂದು ಮಹೇಶ್ ಖಾರವಾಗಿ ಪ್ರಶ್ನಿಸಿದರು.

ಮೂಡ ಹಗರಣ ಪ್ರಕರಣ .30.500 ಕೋಟಿ ಹಗರಣ ನಡೆದಿದೆ. ಅದು ಮುಖ್ಯಮಂತ್ರಿ ಸಿಕ್ಕಿಕೊಳ್ಳುತ್ತಾರೆ. ಎಸ್‌ಸಿಎಸ್ ಟಿಯ 40 ಸಾವಿರ ಕೋಟಿ ರೂ ಗ್ಯಾರಂಟಿ ಯೋಜನೆಗಳಿಗೆ ಬಳಸಿ, ದಲಿತರಿಗೆ ಅನ್ಯಾಯ ಮಾಡಿದ್ದಾರೆ. ವಾಲ್ಮೀಕಿ ನಿಗಮದಲ್ಲಿ 178 ಕೋಟಿಯನ್ನು ಆಂದ್ರಪ್ರದೇಶ, ತೆಲಂಗಾಣ ಚುನಾವಣೆಗೆ ವೆಚ್ಚ ಮಾಡಿದ್ದಾರೆ ಭೋವಿ ಅಭಿವೃದ್ಧಿ ನಿಗಮದಲ್ಲಿ 11 ಕೋಟಿ ರೂ ಅವ್ಯವಹಾರ ಮಾಡಿದ್ದಾರೆ ದಲಿತರ ಮೇಲಿನ ದೌರ್ಜನ್ಯ ಜಾಸ್ತಿಯಾಗಿದ್ದು2422 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಯುವನಿಧಿ ಕೊಟ್ಟಿಲ್ಲ , ನಿರುದ್ಯೋಗ ಸಮಸ್ಯೆ ನಿವಾರಿಸಿಲ್ಲ ಇದು ಸಾವಿರ ದಿನದ ಆಡಳಿತ ಅಭಿವೃದ್ಧಿನಾ ? ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು. ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಜಿ.ಪಂ.ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹಾದೇವಸ್ವಾಮಿ ಹಾಜರಿದ್ದರು.

## ನಮ್ಮಲ್ಲಿ ಯಾವುದೇ ಬಣಗಳಿಲ್ಲ: ಶಾಸಕ ಎಆರ್‌ಕೆ

ಚಾಮರಾಜನಗರ, ನಮ್ಮಲ್ಲಿ ಯಾವುದೇ ಬಣಗಳಿಲ್ಲ ಅದೆಲ್ಲಾ ಮಾಧ್ಯಮಗಳ ಸೃಷ್ಟಿ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ನಗರದಲ್ಲಿ ಮಧ್ಯಮದವರೊಂದಿಗೆ ಪ್ರತಿಕ್ರಿಯಿಸಿದ ಅವರು ಶಾಸಕರಿಗೆ ಟೂರ್ ಹೊಸದೇನಲ್ಲ. ಈ ಹಿಂದೆ ಜೆ.ಎಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗಲೂ ಹೋಗಿ



ಬಂದಿದ್ದೇವೆ. ಅದೇ ರೀತಿ ಹೀಗಲೂ ಹೋಗುತ್ತಿದ್ದೇವೆ ಇದ ರಲ್ಲಿ ರಾಜಕೀಯ ಹುಡುಕುವುದು ಏನಿದೆ ಎಂದು ಹೇಳಿದರು.

ಅಧಿವೇಶನ ಮುಕ್ತಾಯಕ್ಕೆ ಎರಡು ದಿನಗಳಿರುವಾಗ ವಿದೇಶ ಪ್ರವಾಸ ಹೋಗಿ ಬರುವ ಬಗ್ಗೆ ಚರ್ಚೆಯಾಯಿತು. ಇದು ಯಾರದೇ ಗುಂಪಿನ ಪ್ರವಾಸವಲ್ಲ. ವಯಕ್ತಿಕವಾಗಿ ಹೋಗುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಈಗಂತೂ ವಿದೇಶಕ್ಕೆ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಅದರಲ್ಲೂ ಯಂಗ್ ಸ್ಟರ್ಸ್ ಶಾಸಕರು ಆಗಾಗ್ಗ ಪ್ರವಾಸ ಮಾಡುತ್ತಿರುತ್ತಾರೆ. ಆದ್ದರಿಂದ ವಿದೇಶ ಪ್ರವಾಸಕ್ಕೆ ಹೋಗಿ ಬರುವುದು ಸಾಮಾನ್ಯ ಪ್ರಕ್ರಿಯೆಯಾಗಿದ್ದು ಬೇರೆ ರೀತಿಯ ವ್ಯಾಖ್ಯಾನ್ಯ ಕಲ್ಪಿಸುವುದು ಬೇಡ ಎಂದು ಹೇಳಿದರು.

ಉಪಮಯಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ವರದಿಯನ್ನು ಸಲ್ಲಿಸುವುದಕ್ಕೆ ದೆಹಲಿಗೆ ಹೋಗುತ್ತಾರೆ ಅದರಲ್ಲಿ ತಪ್ಪೇನಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ನಮ್ಮಲ್ಲಿ ರಾಜಕೀಯ ಗುಂಪುಗಾರಿಕೆ ನಡೆದಿದೆಯಾ ಅಥವಾ ನಾಯಕರ ನಡುವೆ ವಾಕ್ಸಮರ ನಡೆದಿದೆಯಾ ಯಾವುದೂ ಇಲ್ಲ ಎಂದ ಮೇಲೆ ಬಣಗಳ ಮಾತು ಎಲ್ಲಿಂದ ಬರುತ್ತೆ ಎಂದು ಹೇಳಿದರು. ನಮ್ಮ ಪಕ್ಷವನ್ನು ದುರ್ಬಲಗೊಳಿಸಲು ಬೇರೆ ಪಕ್ಷದವರು ಈ ಸಂದರ್ಭದಲ್ಲಿ ಕೈ ಕಾಯಿಸಿಕೊಳ್ಳಲು ಕಾಯುತ್ತಿದ್ದಾರೆ ಎಂದು ತಿಳಿಸಿದರು.

## ಸೇವಾಟ್ರಸ್ಟ್ ಸಮಾಜಮುಖಿಯಾಗಿರಲಿ

ಚಾಮರಾಜನಗರ, ನಗರದ 10 ನೇ ವಾರ್ಡ್ ವ್ಯಾಪ್ತಿಯ ಕರಿ ನಂಜನ ಪುರದಲ್ಲಿ ದೇವರಗುಡ್ಡರ ಮಂಟೇಸ್ವಾಮಿ ದೇವಾಲಯ ಸೇವಾಟ್ರಸ್ಟ್ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಸಿ. ಪುಟ್ಟರಂಗಶೆಟ್ಟಿ ಬಳಿಕ ಮಾತನಾಡಿ, ಸಂಘ ಸಂಸ್ಥೆಗಳು ಸ್ಥಾಪಿಸುವ ಸೇವಾಟ್ರಸ್ಟ್‌ಗಳು ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಬೇಕು. ಹಾಗಾದಾಗ ಅವು ಜನಪ್ರಿಯತೆಯ ಹಾದಿಯಲ್ಲಿ ಸಾಗುತ್ತವೆ ಎಂದರು ಚಾಮರಾಜನಗರ ಸಮೀಪದ ಹರದನಹಳ್ಳಿ ಗ್ರಾಮದ ಪುರಾತನ ದಿವ್ಯಲಿಂಗೇಶ್ವರ ದೇವಾಲಯದ ರಾಜಗೋಪುರ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ 3.60 ಕೋಟಿ ರೂ. ಬಿಡುಗಡೆ ಮಾಡಿದೆ. ಅದರಂತೆ

ದೇವರಗುಡ್ಡರ ಮಂಟೇಸ್ವಾಮಿ ದೇವಾ




ಲಯ ಸೇವಾಟ್ರಸ್ಟ್‌ಗೆ 20 ಲಕ್ಷ ರೂ. ಮಂಜೂರು ಮಾಡಿಸಿಕೊಡುವುದಾಗಿ ಭರವಸೆ ನೀಡಿದರು. ವಾರ್ಡಿನಲ್ಲಿ ಎಲ್ಲೆಲ್ಲಿ ಒಳಚರಂಡಿ ಕಾಮಗಾರಿ ಮುಕ್ತಾಯಗೊಂಡಿವೆಯೋ. ಅಲ್ಲಿ ರಸ್ತೆ ಚರಂಡಿ ನಿರ್ಮಿಸಲು ಕ್ರಮವಹಿಸಲಾಗುವುದು ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುವುದು ಅಭಿವೃದ್ದಿಯೇ ನನ್ನ ಆದ್ಯತ 'ಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ನಾಮನಿರ್ದೇಶಿತ ಸದಸ್ಯ ಸ್ವಾಮಿ, ಮಾಜಿ ನಗರ ಸಭಾ ಸದಸ್ಯ ಮನೋಜ್ ಪಟೇಲ್, ದೇವರಗುಡ್ಡರ ಮಂಟೇಸ್ವಾಮಿ ದೇವಸ್ಥಾನದ ಸೇವಾಟ್ರಸ್ಟ್ ಗೌರವಾಧ್ಯಕ್ಷ ಕುಮಾರ್, ಸೇವಾಟ್ರಸ್ಟ್‌ನ ಅಧ್ಯಕ್ಷ ನಾಗರಾಜು. ಉಪಾಧ್ಯಕ್ಷ ಪ್ರಸನ್ನ ಕಾರ್ಯದರ್ಶಿ ಚಿನ್ನಸ್ವಾಮಿ, ಗೌಡಿಕೆ ಕುಮಾರಸ್ವಾಮಿ, ಲಿಂಗಣ್ಣ, ಪ್ರಭುಸ್ವಾಮಿ. ನಿವಾಸಿಗಳು ಹಾಜರಿದ್ದರು.

## ಪರಿಹಾರ ನೀಡದಿದ್ದರೆ ಹೋರಾಟ



ಮೈಸೂರು: ಮೈಸೂರು ವಿಮಾನ ನಿಲ್ದಾಣ ಉನ್ನತೀಕರಣಕ್ಕಾಗಿ ಭೂಮಿ ವಶ ಪಡಿಸಿ ಕೊಂಡ ಅಶ್ವಿನಿ ಲೇಔಟ್ ಬಡಾವಣೆ ಸಂತ್ರಸ್ತ ರಿಗೆ ಕೆಐಎಡಿಬಿ ಈ ಮೊದಲು ತಾನು ಒಪ್ಪಿ ಕೊಂಡಂತೆ ಪರಿಹಾರ ನೀಡದಿದ್ದರೆ ಕಾನೂನು ಹೋರಾಟ ನಡೆಸುವುದಾಗಿ ಬಡಾವಣೆಯ ಸಂತ್ರಸ್ತರು ಜಂಟಿ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಈ ಕುರಿತು ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿದ ಸುಂದರ್, ತಾಲೂಕಿನ ವರುಣಾ ಹೋಬಳಿ ಮರಸೆ ಗ್ರಾಮದ ಸರ್ವೆ ನಂಬರ್‌ನಲ್ಲಿ ತಮ್ಮ ಸುಮಾರು 142 ಮಂದಿಯ ನಿವೇಶನ ಇವೆ. ಇವನ್ನು ವಿಮಾನ ನಿಲ್ದಾಣ ಅಭಿವೃದ್ಧಿ ಹಾಗೂ ರನ್ ವೇ ವಿಸ್ತರಣೆಗಾಗಿ ಕೆಐಎಡಿಬಿ ಈ ಹಿಂದೆ ವಶಕ್ಕೆ ಪಡೆದಿದೆ. ಈ ವೇಳೆ ಪ್ರತಿ ಚದುರ ಅಡಿಗೆ 2500 ರೂ., ನೀಡುವುದಾಗಿ ಸಂಧಾನ ಸಭೆಯಲ್ಲಿ ಅದು ಒಪ್ಪಿತ್ತು. ಆದರೆ ಇದುವರೆಗು ನೀಡಿಲ್ಲ. ಈಗ ಕೇಳಿದಲ್ಲಿ ಆ ನಿವೇಶನ ಇರುವ ಬಡಾವಣೆಯಲ್ಲಿ ರಸ್ತೆ, ಚರಂಡಿ, ಉದ್ಯಾನವನ ಇಲ್ಲ ಎಂಬ ಸಬೂಬು ಹೇಳುತ್ತಿದೆ ಎಂದು ದೂರಿದರು.

ತಮ್ಮ ನಿವೇಶನ ಅಥವಾ ಆಸ್ತಿ ಇರುವ ಪ್ರದೇಶ ಮರಸೆ ಗ್ರಾಮ ಠಾಣಾ ಪಕ್ಕದಲ್ಲಿ ಹಾಗೂ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂ ತಿದೆ. ಈಗ ಇಲ್ಲಿ ದುಬಾರಿ ಬೆಲೆ ನೀಡಿದರೂ ನಿವೇಶನ ದೊರೆಯುತ್ತಿಲ್ಲ. ಆದ್ದರಿಂದ ಕೂಡಲೇ ಕೆಐಎಡಿಬಿ ಸೂಕ್ತ ಪರಿಹಾರ ನೀಡ ಬೇಕು, ಈ ಕುರಿತು ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಎಲ್ಲರ ಗಮನಕ್ಕೂ ತರಲಾಗಿದೆ. ಕೂಡಲೇ ಪರಿಹಾರ ನೀಡಲು ಮುಂದಾಗದಿ ದ್ದಲ್ಲಿ ತೀವ್ರ ಕಾನೂನು ಹೋರಾಟ ನಡೆಸುವ ಎಚ್ಚರಿಕೆ ನೀಡಿದರು. ಸಂತ್ರಸ್ತರಾದ ಚಂದ್ರು, ವೆಂಕಟೇಶ್, ರಾಮಮೂರ್ತಿ, ಸುರೇಶ್, ಕೆ. ಎಸ್. ರಮಾಮಣಿ ಮೊದಲಾದವರು ಇದ್ದರು.

## ಗಮನ ಸೆಳೆದ 30ಕಿ.ಮೀ ಸ್ಕೇಟಿಂಗ್ ಮ್ಯಾರಥಾನ್

ಚಾಮರಾಜನಗರ, ಕ್ರೀಡಾ ದಿನಾಚರಣೆ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ನಡೆದ ಚಾಮರಾಜನಗರ – ಕೊಳ್ಳೇಗಾಲ 30 ಕಿ.ಮೀ ಸ್ಕೇಟಿಂಗ್ ಮ್ಯಾರಥಾನ್ ಗಮನ ಸೆಳೆಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಆರಂಭವಾದ ಸ್ಕೇಟಿಂಗ್ ಮ್ಯಾರಥಾನ್‌ಗೆ ಉದ್ಯಮಿ ಶ್ರೀನಿಧಿಕುದರ್, ಕ್ರೀಡಾಪಟು ವಿ.ಶ್ರೀನಿವಾಸಪ್ರ ಸಾದ್ ಇತರರು ಹಸಿರುನಿಶಾನೆ ತೋರುವ ಮೂಲಕ ಚಾಲನೆ ನೀಡಿ ಶುಭ ಕೋರಿದರು. ಚಾಲನೆ ನೀಡಿದ ಉದ್ಯಮಿ ಶ್ರೀನಿಧಿಕುದರ್ ಮಾತನಾಡಿ, ಕ್ರೀಡಾ ದಿನಾಚರಣೆ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮರಾಜನಗರ ಜಿಲ್ಲಾ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಚಾಮರಾಜನಗರ–ಕೊಳ್ಳೇಗಾಲ 30 ಕಿ.ಮೀ ಸ್ಕೇಟಿಂಗ್ ಮ್ಯಾರಥಾನ್ ಅಯೋಜಿಸಿರುವುದು ತುಂಭಾ ಖುಷಿಯಾಗಿದೆ. ಸರ್ಕಾರ ಮಾಡಬೇಕಾದ ಕೆಲಸವನ್ನು ಫುರ್ಖಾನ್ ತಂಡದವರು ಸ್ಕೇಟಿಂಗ್ ಮ್ಯಾರಥಾನ್ ಮೂಲಕ ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಮೂಡಿಸುತ್ತಿರುವುದು ನಿಜಕ್ಕೂ ಒಳ್ಳೆಯ ಬೆಳವಣಿಗೆಯಾಗಿದೆ.




ಸ್ಕೇಟಿಂಗ್ ದೈಹಿಕ, ಮಾನಸಿಕ ಆರೋಗ್ಯಕ್ಕೆ ಅತ್ಯುತ್ತಮವಾಗಿದೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಏಕಾಗ್ರತ ಹೆಚ್ಚಿಸುತ್ತದೆ. ಎಂದು ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಶುಭ ಕೋರಿದರು. ಕ್ರೀಡಾಪಟು ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ಯುವಜನಾಂಗವನ್ನು ದುಶ್ಚಟಗಳಿಂದ ದೂರವಿರಬೇಕು. ಅವರನ್ನು ಆರೋಗ್ಯಕರವಾಗಿ ನೋಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಗಳು ಮಾದಕದ್ರವ್ಯಗಳನ್ನು ಬುಡಸಮೇತ ನಾಶ ಮಾಡುವ ಕೆಲಸವನ್ನು ಮಾಡಬೇಕು. ಅಂತಹ ಕೆಲಸ ಕೆಲಸವನ್ನು ಚಾಮರಾಜನಗರ ಜಿಲ್ಲಾ ಸ್ಕೇಟಿಂಗ್ ಅಸೋಸಿ ಯೇಷನ್ ಮಾಡುತ್ತಿರುವುದು ಒಳ್ಳೆಯ ಕೆಲಸ ಆಗಿದೆ. ಜಿಲ್ಲೆಯ ಕ್ರೀಡೆ ಬೆಳವಣಿಗೆಗೆ ಜಿಲ್ಲೆಯ ಜನಪ್ರತಿನಿಧಿಗಳು ಪ್ರೋತ್ಸಾಹ ಅಗತ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಸ್ಕೇಟಿಂಗ್ ಅಸೋಸಿಯೇಷನ್ ಕಾರ್ಯದರ್ಶಿ ಫುರ್ಖಾನ್ ಪಾಷ, ಕರಾಟೆ ಗ್ಯಾಂಡ್ ಮಾಸ್ಟರ್ ನಾಗರಾಜಜಟ್ಟಿ, ಅಧ್ಯಕ್ಷ ರೆಹಾನ್, ಅಜೀಂ, ಯೂಟ್ಯೂಬ್ ಪ್ರಮೋಟರ್ ನಿತಿ, ಹಸಿರುಪಡೆ ಸತೀಶ್, ಪಿಡಿಓ ರಮೇಶ್, ಹಾಗೂ ಸ್ಕೇಟಿಂಗ್ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

### .ಶ್ರೀಸಹಸ್ರ ಲಿಂಗೇಶ್ವರಸ್ವಾಮಿ ಸುಗಂಧ ದ್ರವ್ಯದಿಂದ ಅಲಂಕಾರ

## ಚಾ.ನಗರ ಜಿಲ್ಲಾದ್ಯಂತ ಶಿವರಾತ್ರಿ ಸಂಭ್ರಮ

ಚಾಮರಾಜನಗರ, ಜಿಲ್ಲಾದ್ಯಂತ ಮಹಾ ಶಿವರಾತ್ರಿ ಸಂಭ್ರಮ ಅದ್ದೂರಿಯಾಗಿದ್ದು ಶಿವ ದೇವಸ್ಥಾನಗಳಲ್ಲಿ ಭಕ್ತರ ಸಾಗರವೇ ಕಂಡು ಬರುತ್ತಿದೆ. ಬೆಳಗ್ಗೆಯಿಂದ ಶಿವನ ದೇವಸ್ಥಾನಗಳಲ್ಲಿ ಅಭಿಷೇಕ, ರುದ್ರಾಭಿಷೇಕದೊಂದಿಗೆ ವಿಶೇಷ ಪೂಜಾ ಕಾರ್ಯಗಳು ನೆರವೇರುತ್ತಿವೆ. ಶಿವನಾಮ ಸ್ಮರಣೆಯೊಂದಿಗೆ ಜಿಲ್ಲೆಯ ಪ್ರಮುಖ ಶಿವನ ದೇವಸ್ಥಾನಗಳು ಕೂಡ ಜನರಿಂದ ತುಂಬಿ ಹೋಗಿವೆ. ಜಿಲ್ಲೆಯ ಮಲ್ಲೆಮಹದೇಶ್ವರ ಬೆಟ್ಟ, ನಗರದ ಚಾಮರಾಜೇಶ್ವರ ದೇವಸ್ಥಾನ ಸೇರಿದಂತೆ ಇತರ ಕಡೆಗಳಲ್ಲಿ ಬೆಳಗ್ಗೆಯಿಂದ ಜನ ಸರತಿ ಸಾಲಿನಲ್ಲಿ ನಿಂತು ಶಿವನ ಆರಾಧನೆಯಲ್ಲಿ ತೊಡಗಿದ್ದಾರೆ.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನವನ್ನು ಹಸಿರುತೋರಣಗಳಿಂದ ಅಲಂಕರಿಸಲಾಗಿದ್ದು, ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಸಿದ್ದತೆ ಮಾಡಿಕೊಳ್ಳಲಾಗಿದೆ. ಬೆಳಿಗ್ಗೆಯಿಂದಲ್ಲೇ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಪರಶಿವನ ದರ್ಶನ ಪಡೆಯುತ್ತಿದ್ದಾರೆ. ದೇವಸ್ಥಾನದಲ್ಲಿ ಶ್ರೀಸಹಸ್ರ ಲಿಂಗೇಶ್ವರಸ್ವಾಮಿ




ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕ ನೆರವೇರಿಸಿ ಸುಗಂಧ ದ್ರವ್ಯದಿಂದ ಅಲಂಕಾರ ಮಾಡಲಾಗಿದ್ದು ಗಮನ ಸೆಳೆಯುತ್ತಿದೆ. ಭಕ್ತರು ದರ್ಶನ ಪಡೆದು ಪುನೀತರಾದರು. ದೇವಸ್ಥಾನ ಆರ್ಚಕ ರಾಮಕೃಷ್ಣ ಭಾರದ್ವಾಜ್ ಮಾತನಾಡಿ, ಪ್ರತಿವರ್ಷ ಮಹಾಶಿವರಾತ್ರಿಯಲ್ಲಿ ಶ್ರೀಸಹಸ್ರ ಲಿಂಗೇಶ್ವರಸ್ವಾಮಿಗೆ ಬೆಣ್ಣೆ ಅಲಂಕಾರ ಮಾಡಲಾಗುತ್ತಿತ್ತು ಈ ಬಾರಿಯಲ್ಲಿ ಸ್ವಾಮಿಗೆ ಬೆಳಿಗ್ಗೆ ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕವಾಗಿ ಸುಗಂಧದ್ರವ್ಯದಿಂದ ಅಲಂಕಾರ ಮಾಡಲಾಗಿದೆ.ಇದು ವಿಶೇಷವಾದ ಅಲಂಕಾರವಾಗಿದೆ ಎಂದು ಹೇಳಿದರು.


ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗುಂಡ್ಲುಪೇಟೆ ತಾಲ್ಲೂಕು ಪಂಚಾಯತ್ ಕಾರ್ಯಾಲಯ**

ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಪಿನ್–571 111,

Email: eotpgund@gmail.com Ph: 08229-200322

ಸಂಖ್ಯೆ: ತಾ.ಪಂ.ಗುಂ/ಕಾ.ನಿ.ಅ/ಟೆಂಡರ್/01/2025–26 ದಿನಾಂಕ: 13.02.2026

**ಇ–ಟೆಂಡರ್ ಪ್ರಕಟಣೆ**

(ಇ–ಪ್ರೊಕ್ಯೂರ್‌ಮೆಂಟ್)

ಗುಂಡ್ಲುಪೇಟೆ ತಾಲ್ಲೂಕು ಪಂಚಾಯಿತಿ 2025–26ನೇ ಸಾಲಿನ ಅನಿರ್ಬಂಧಿತ ಅನುದಾನದ ಕ್ರಿಯಾ ಯೋಜನೆಯಡಿ ಗುಂಡ್ಲುಪೇಟೆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ಪೀಠೋಪಕರಣಗಳು ಹಾಗೂ ಗಣಕಯಂತ್ರವನ್ನು ಖರೀದಿ ಮಾಡಿ ವಿತರಿಸಲು ಉದ್ದೇಶಿಸಿದ್ದು, ಈ ಕಾರ್ಯಕ್ಕಾಗಿ ಟೆಂಡರ್ ಬುಲೆಟ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಪ್ರಕರಣ 6ರ ಮೇರೆಗೆ ಹೊರಡಿಸಲಾಗಿದೆ. ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದ್ದು, ಪಿಠೋಪಕರಣಗಳನ್ನು ನೊಂದಾಯಿತಗೊಂಡ ಆಸಕ್ತ ಸಂಸ್ಥೆ/ಏಜೆನ್ಸಿಯವರು ಟೆಂಡರ್‌ನಲ್ಲಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಭಾಗವಹಿಸಬಹುದಾಗಿದೆ. ಟೆಂಡರ್ ವೇಳಾ ಪಟ್ಟಿ ಈ ಕೆಳಗಿನಂತಿದೆ.

| | | |
|---|---|---|
| 1) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: | ದಿ: 23.02.2026 ಸಂಜೆ 4.00 ಘಂಟೆ. |
| 2) | ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: | ದಿ: 24.02.2026 ಸಂಜೆ 4.00 ಘಂಟೆ. |
| 3) | ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: | ದಿ: 25.02.2026 ಮಧ್ಯಾಹ್ನ 11.30 |
| 4) | ಒಟ್ಟು ಟೆಂಡರ್ ಮೌಲ್ಯ | ಅಂದಾಜು ರೂ 10.00 ಲಕ್ಷ |
| 5) | ಟೆಂಡರ್ ಇ.ಎಂ.ಡಿ ಮೊತ್ತ | ರೂ.25,000/– |

ಟೆಂಡರ್ ಫಾರಂ, ಟೆಂಡರ್ ದಾಸ್ತಾವೇಜು (ಟೆಂಡರ್ ಡಾಕ್ಯೂಮೆಂಟ್) ಗಾಗಿ ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ ಪೋನ್: 9480858105

**ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ.**



ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗುಂಡ್ಲುಪೇಟೆ ತಾಲ್ಲೂಕು ಪಂಚಾಯತ್ ಕಾರ್ಯಾಲಯ**

ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಪಿನ್–571 111,

Email: eotpgund@gmail.com Ph: 08229-200322

ಸಂಖ್ಯೆ: ತಾ.ಪಂ.ಗುಂ/ಕಾ.ನಿ.ಅ/ಟೆಂಡರ್/02/2025–26 ದಿನಾಂಕ: 13.02.2026

**ಇ–ಟೆಂಡರ್ ಪ್ರಕಟಣೆ**

(ಇ–ಪ್ರೊಕ್ಯೂರ್‌ಮೆಂಟ್)

ಗುಂಡ್ಲುಪೇಟೆ ತಾಲ್ಲೂಕು ಪಂಚಾಯಿತಿ 2025–26ನೇ ಸಾಲಿನ 2025–26ನೇ ಸಾಲಿನ ಲಿಕ್ ಡಾಕ್ಯೂಮೆಂಟ್ ಯೋಜನೆಯಡಿ ಕಛೇರಿಗೆ ಅವಶ್ಯವಿರುವ ಗಣಕಯಂತ್ರ, ಪ್ರಿಂಟರ್ ಮತ್ತು ಪ್ರೋಜೆಕ್ಟರ್, ವೆಬ್ ಕ್ಯಾಮರಾಗಳನ್ನು ಖರೀದಿ ಮಾಡಲು, ಈ ಕಾರ್ಯಕ್ಕಾಗಿ ಟೆಂಡರ್ ಬುಲೆಟ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಪ್ರಕರಣ 6 ರ ಮೇರೆಗೆ ಹೊರಡಿಸಲಾಗಿದೆ. ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದ್ದು, ಪಿಠೋಪಕರಣಗಳನ್ನು ನೊಂದಾಯಿತಗೊಂಡ ಆಸಕ್ತ ಸಂಸ್ಥೆ/ಏಜೆನ್ಸಿಯವರು ಟೆಂಡರ್‌ನಲ್ಲಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಭಾಗವಹಿಸಬಹುದಾಗಿದೆ. ಟೆಂಡರ್ ವೇಳಾ ಪಟ್ಟಿ ಕೆಳಗಿನಂತಿದೆ.

| | | |
|---|---|---|
| 1 | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ದಿ: 23.02.2026 ಸಂಜೆ 4.00 ಘಂಟೆ. |
| 2 | ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ | ದಿ: 24.02.2026 ಸಂಜೆ 4.00 ಘಂಟೆ. |
| 3 | ಆರ್ಥಿಕ ಬಿಡ್ ನ್ನು ತೆರೆಯುವ ದಿನಾಂಕ | ದಿ: 25.02.2026 ಮಧ್ಯಾಹ್ನ 11.30 |
| 4 | ಒಟ್ಟು ಟೆಂಡರ್ ಮೌಲ್ಯ | ಅಂದಾಜು ರೂ 4.00 ಲಕ್ಷ |
| 5 | ಟೆಂಡರ್ ಇ.ಎಂ.ಡಿ ಮೊತ್ತ | ರೂ.10,000/– |

ಟೆಂಡರ್ ಫಾರಂ, ಟೆಂಡರ್ ದಾಸ್ತಾವೇಜು (ಟೆಂಡರ್ ಡಾಕ್ಯಮೆಂಟ್) ಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ ಪೋನ್: 9480858105

**ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ.**

# ಸಂಕ್ಷಿಪ್ತ ಸುದ್ದಿ

## ಅರಿವು ಸಪ್ತಾಹ ಕಾರ್ಯಕ್ರಮ

**ಮೈಸೂರು:** ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ಮೈಸೂರು ತಾಲ್ಲೂಕು ಕುವೆಂಪುನಗರ ಕಾ ಮತ್ತು ಪಾ ಉಪವಿಭಾಗ ಮತ್ತು ರಾಮಕೃಷ್ಣನಗರ ಕಾ ಮತ್ತು ಪಾ ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಇಲಾಖೆಗೆ ಸಂಬಂಧಿತ ಸೌಲಭ್ಯ ಮತ್ತು ಸಮಸ್ಯೆಗಳ ಬಗ್ಗೆ ಹಾಗೂ ವಿದ್ಯುತ್ ಸುರಕ್ಷಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ 'ಅರಿವು ಸಪ್ತಾಹ ಕಾರ್ಯಕ್ರಮವನ್ನು' ಹಮ್ಮಿಕೊಳ್ಳಲಾಗಿದೆ ಕಾರ್ಯಕ್ರಮವನ್ನು ಫೆ.17 ರಂದು ವಿವೇಕಾನಂದ ಶಾಖೆಗೆ ಸಂಬಂಧಿಸಿದಂತೆ ಬೆಳಿಗ್ಗೆ 11–00 ಗಂಟೆಗೆ ರಾಮಕೃಷ್ಣನಗರ ಕಾ ಮತ್ತು ಪಾ ಉಪವಿಭಾಗ ಕಛೇರಿಯಲ್ಲಿ, ಜಯಪುರ ಮತ್ತು ಹಾರೋಹಳ್ಳಿ ಶಾಖೆಗೆ ಸಂಬಂಧಿಸಿದಂತೆ ಮಧ್ಯಾಹ್ನ 03:00 ಗಂಟೆಗೆ ಚಾವಿಸನಿನಿ ಜಯಪುರ ಕಾ ಮತ್ತು ಪಾ ಶಾಖಾ ಕಛೇರಿಯಲ್ಲಿ ಸರಸ್ವತಿಪುಂ, ಅರವಿಂದ ನಿವೇದಿತಾ ಶಾಖೆಗೆ ಸಂಬಂಧಿಸಿದಂತೆ ಮಧ್ಯಾಹ್ನ 03–00 ಗಂಟೆ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿರುವ ಕುವೆಂಪು ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಲಾಗಿರುತ್ತದೆ.

ಆಯಾ ಭಾಗದ ವಿದ್ಯುತ್ ಗ್ರಾಹಕರು ಸದರಿ ಕಾರ್ಯಕ್ರಮಕ್ಕೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಬಗೆಹರಿಸಿಕೊಳ್ಳುವಂತೆ ಚಾವಿಸನಿನಿ, ವಿ.ವಿ ಮೊಹಲ್ಲಾ ಕಾ ಮತ್ತು ಪಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 18ರಂದು ಜಲಸಾಹಸ ಕ್ರೀಡೆಗಳ ಉದ್ಘಾಟನೆ

**ರಾಮನಗರ:** ಜಿಲ್ಲಾ ಪ್ರವಾಸೋದ್ಯಮ ಇಲಾಖೆ ವತಿಯಿಂದ ರಾಮನಗರ ತಾಲ್ಲೂಕಿನ ಬಿಡದಿಯ ನಲ್ಲಿಗುಡ್ಡ ಕೆರೆಯಲ್ಲಿ ಜಲಸಾಹಸ ಕ್ರೀಡೆಗಳ ಉದ್ಘಾಟನೆಯನ್ನು ಫೆ.18ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಬಿಡದಿಯ ನಲ್ಲಿಗುಡ್ಡೆ ಕೆರೆಯಲ್ಲಿ ಆಯೋಜಿಸಲಾಗಿದೆ.

ರಾಜ್ಯದ ಉಪಮುಖ್ಯಮಂತ್ರಿಗಳು, ಭಾರಿ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರ ಅಭಿವೃದ್ಧಿ ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವರಾದ ಡಿ.ಕೆ. ಶಿವಕುಮಾರ್ ಅವರ ಘನ ಉಪಸ್ಥಿತಿಯಲ್ಲಿ ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ಸಚಿವರು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ. ಪಾಟೀಲ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರು ಮತ್ತು ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಸಿ. ಬಾಲಕೃಷ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ.ಕೆ. ಸುಧಾಕರ್, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್, ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಎ. ಇಕ್ಬಾಲ್ ಹುಸೇನ್, ನೆಲಮಂಗಲ ವಿಧಾನಸಭಾ ಕ್ಷೇತ್ರದ ಶಾಸಕರಾದ ಎನ್. ಶ್ರೀನಿವಾಸ್, ವಿಧಾನ ಪರಿಷತ್ ಶಾಸಕರಾದ ಪುಟ್ಟಣ್ಣ, ಎಸ್. ರವಿ, ಸುಧಾಮ್ ದಾಸ್, ರಾಮೋಜಿ ಗೌಡ, ರಾಜ್ಯ ಗ್ಯಾರಂಟಿ ಯೋಜನೆ ಅನಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ. ರೇವಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು, ಬಿ.ಎಂ.ಐ.ಸಿ.ಪಿ.ಎ ಅಧ್ಯಕ್ಷರಾದ ರಘುನಂದನ್ ರಾಮಣ್ಣ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷರಾದ ಎಸ್. ಗಂಗಾಧರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಿ.ಎನ್. ನಟರಾಜು ಗಾಣಕಲ್, ಬಿಡದಿ ಪುರಸಭೆ ಅಧ್ಯಕ್ಷರಾದ ಭಾನುಪ್ರಿಯಾ ಎಚ್.ಆರ್., ರಾಮನಗರ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ವಿ.ಎಚ್. ರಾಜು, ಬಿಡದಿ ಪುರಸಭೆ ಉಪಾಧ್ಯಕ್ಷರಾದ ಆಯಿಷಾ ಅವರು ಅತಿಥಿಗಳಾಗಿ ಭಾಗವಹಿಸುವರು.

# ದೌರ್ಜನ್ಯ– ಅಸ್ಪೃಶ್ಯತೆಯಿಂದ ಜಿಲ್ಲೆಯನ್ನು ಮುಕ್ತಗೊಳಿಸಿ: ಡಾ. ಮೂರ್ತಿ ಎಲ್.

**ಮಂಡ್ಯ:** ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣಗಳ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಬೇಕು ಮತ್ತು ದೌರ್ಜನ್ಯ ಪ್ರಕರಣಗಳು ಮತ್ತು ಅಸ್ಪೃಶ್ಯತೆ ಆಚರಣೆಯ ಸಾಮಾಜಿಕ ಧೋರಣೆಯನ್ನು ತೊಲಗಿಸಬೇಕು ಎಂದು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಅಧ್ಯಕ್ಷ ಡಾ. ಮೂರ್ತಿ .ಎಲ್ ರವರು ಹೇಳಿದರು.



ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಅಧೀಕ್ಷಕರೊಂದಿಗೆ ಸಭೆಯಲ್ಲಿ ಮಾತನಾಡಿ ಜಿಲ್ಲೆಯಲ್ಲಿ 46 ರಿಂದ 47 ದೌರ್ಜನ್ಯ ಪ್ರಕರಣಗಳು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದಲ್ಲಿ ದಾಖಲಾಗಿವೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕಾನೂನು ನಾತ್ಮಕ ದೌರ್ಜನ್ಯ ಪ್ರಕರಣಗಳ ಗಂಭೀರ ತೊಡಕುಗಳನ್ನು ಬಗೆಹರಿಸಬೇಕು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕುಂದು ಕೊರತೆಗಳು ಮತ್ತು ನಗರಸಭೆಯ ಗಂಭೀರ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲಿ ಪರಿಶೀಲಿಸಬೇಕು. ಎಂದು ಹೇಳಿದರು.

ರಾಜ್ಯದಲ್ಲಿ 10 ಜಿಲ್ಲೆಗಳ ಪ್ರವಾಸ ಮಾಡಿ ಅಧಿಕಾರಿಗಳ ಜೊತೆ ಸಭೆ ನಡೆಸಿ ದೌರ್ಜನ್ಯ ಪ್ರಕರಣಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮವಹಿಸುವಂತೆ ಸೂಚಿಸಿದ್ದಾರೆ.

ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದನೆ ಬಹಳ ಮುಖ್ಯ.ಜಿಲ್ಲೆಯು ಸರ್ವತೋಮುಖ ಅಭಿವೃದ್ಧಿಗೆ ಅಧಿಕಾರಿಗಳು ಶ್ರದ್ದೆ ವಹಿಸಿ ಕೆಲಸ ಮಾಡಬೇಕು ಎಂದು ಹೇಳಿದರು.

ಅರಣ್ಯ ಪ್ರದೇಶದಲ್ಲಿ ವಾಸಿಸಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಸಮಸ್ಯೆಗಳನ್ನು ಪರಿಹರಿಸಬೇಕು

ಜಿಲ್ಲೆಯಲ್ಲಿ ಜಮೀನು ವಿಚಾರವಾಗಿ ದಾರಿ,ಸ್ಮಶಾನ, ಸರ್ವೆ ದುರಸ್ತಿ,ಪ್ರಕರಣಗಳನ್ನು ಶೀಘ್ರವಾಗಿ ಪರಿಶೀಲಿಸಬೇಕು ಎಂದು ಹೇಳಿದರು.

ಮಾರ್ಚ್ 7 ರಂದು ಜಿಲ್ಲಾಡಳಿತ ವತಿಯಿಂದ "ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳು ಮತ್ತು ಅಸ್ಪೃಶ್ಯತಾ ನಿವಾರಣಾ ಕಾಯ್ದೆ "ಯ ಅರಿವು ಕಾರ್ಯಾಗಾರವನ್ನು ನಗರದ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಸಮಾಜದ ಎಲ್ಲಾ ವರ್ಗದವರು ಮತ್ತು ಮುಖಂಡರುಗಳು ಕಾರ್ಯಾಗಾರವನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಸ್ಪೃಶ್ಯತೆ ಆಚರಣೆಯು ಸಮಾಜಕ್ಕೆ ಕಳಂಕವಾಗಿದೆ. ಎಲ್ಲಾ ಮುಖಂಡರುಗಳು ಮತ್ತು ಸಾರ್ವಜನಿಕರು ಅಸ್ಪೃಶ್ಯತೆ ನಿವಾರಣಾ ಹೋಗಲಾಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಲ್ಲರೂ ಕಾರ್ಯಕ್ರಮದ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

**ಅಹವಾಲು ಸ್ವೀಕಾರ:** ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಅಧೀಕ್ಷಕರೊಂದಿಗೆ ಸಭೆಯಲ್ಲಿ ಸಾರ್ವಜನಿಕರು ಮತ್ತು ಸಂಘ ಸಂಘಟನೆಗಳ ಅಹವಾಲು ಸ್ವೀಕರಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಾದ ಶ್ರೀನಿವಾಸ್, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಕಾವ್ಯ, ಪೊಲೀಸ್ ಅಧಿಕ್ಷಕರು ಗಂಗಾಧರ್ ಸ್ವಾಮಿ, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಉಪಾಧ್ಯಕ್ಷರು ವಿಜಯಲಕ್ಷ್ಮಿ, ಮೂಡ ಅಧ್ಯಕ್ಷರು ಬಿ. ಪಿ. ಪ್ರಕಾಶ್ ರವರು ಉಪಸ್ಥಿತರಿದ್ದರು.

# ಫೆ. 21 ಮತ್ತು 22 ರಂದು ಬೂದನೂರು ಉತ್ಸವ : ಪಿ. ರವಿಕುಮಾರ್

## ಸರ್ಕಾರಿ ಶಾಲೆಯ 10 ವಿದ್ಯಾರ್ಥಿಗಳು ಮತ್ತು 5 ಜನ ಪ್ರಗತಿಪರ ರೈತರಿಗೆ ಹೆಲಿ ಟೂರಿಸಂನ ಹೆಲಿಪ್ಯಾಡ್ ನಲ್ಲಿ ಉಚಿತ ಪ್ರಯಾಣ

**ಮಂಡ್ಯ:** ಫೆ.20 ರಂದು ಹೆಲಿ ಟೂರಿಸಂ ಅನ್ನು ಆಯೋಜಿಸಲಾಗಿದೆ. ಸರ್ಕಾರಿ ಶಾಲಾ ಕಾಲೇಜಿನ 10 ವಿದ್ಯಾರ್ಥಿಗಳಿಗೆ ಮತ್ತು 5 ಪ್ರಗತಿಪರ ರೈತರಿಗೆ ಹೆಲಿ ಟೂರಿಸಂನ ಹೆಲಿಪ್ಯಾಡ್ ನಲ್ಲಿ ಉಚಿತ ಪ್ರಯಾಣವನ್ನು ಮಾಡಲಾಗಿದೆ ಎಂದು ಮಂಡ್ಯ ಜಿಲ್ಲಾ ಶಾಸಕರಾದ ಪಿ. ರವಿಕುಮಾರ್ ಅವರು ಹೇಳಿದರು.

ಬೂದನೂರುನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಬೂದನೂರು ಒಂದು ಐತಿಹಾಸಿಕ ಕ್ಷೇತ್ರವಾಗಿದ್ದು 15ನೇ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ಹಳೆಯ ಬೂದನೂರುನಲ್ಲಿ ವಾಸ್ತುಶಿಲ್ಪಗಳು ಕುರುಹುಗಳುಮತ್ತು ಹಲವು ಶಾಸನಗಳು ದೊರಕಿವೆ ಎಂದು ತಿಳಿಸಿದರು.

ಬುದುನೂರಿನಲ್ಲಿ ದಕ್ಷಿಣ ಭಾರತದ ಎರಡನೇ ದೇವಸ್ಥಾನವಾಗಿ ಅನಂತಪದ್ಮನಾಭ ದೇವಸ್ಥಾನ ಪ್ರಸಿದ್ಧಿಯನ್ನು ಪಡೆದಿದ್ದು ಕಾಶಿ ವಿಶ್ವನಾಥ ದೇವಸ್ಥಾನವು ಪ್ರಸಿದ್ಧಿಯನ್ನು ಪಡೆದಿದೆ ಎಂದು ಹೇಳಿದರು. ಫೆ.21 ರಂದು ಬೂದನೂರಿನ ಉತ್ಸವವನ್ನು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚೆಲುವರಾಯಸ್ವಾಮಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.




ಜಿಲ್ಲೆಯಲ್ಲಿ ಬೂದನೂರು ಉತ್ಸವವನ್ನು 2ನೇ ಬಾರಿ ಮಾಡುತ್ತಿದ್ದು 21 ಮತ್ತು 22 ರಂದು ಉತ್ಸವ ಮಾಡಿದ್ದು ಕಾರ್ಯಕ್ರಮವನ್ನು ಪೂರಕವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಫೆಬ್ರವರಿ 17ರಂದು ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆ ಏರ್ಪಡಿಸಿದ್ದು ಆಕಾಂಕ್ಷಿಗಳು ಭಾಗವಹಿಸಬಹುದು ಸ್ಪರ್ಧೆಯಲ್ಲಿ ವಿಜಯಶಾಲಿಯಾದವರಿಗೆ ವಿಶೇಷ ಬಹುಮಾನಗಳನ್ನು ವಿತರಿಸಬೇಕು ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಸಮಧಾನಾಕರ ಬಹುಮಾನವನ್ನು ವಿತರಿಸುವಂತೆ ಸೂಚಿಸಿದರು.

ಫೆಬ್ರವರಿ 18 ಮತ್ತು 19ರಂದು ಕಸಬಾ ಹೋಬಳಿಯ 30 ಗ್ರಾಮಗಳಿಗೆ ಎಲ್ಲಾ ಮಹಿಳೆಯರಿಗೂ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ "ಮನೆಗೊಂದು ರಂಗೋಲಿ ಮನೆಗೊಂದು ಗ್ಯಾರಂಟಿ" ಎನ್ನುವ ನಿಟ್ಟಿನಲ್ಲಿ ಭಾಗವಹಿಸಿದ ಎಲ್ಲರಿಗೂ ಬಹುಮಾನ ವಿತರಿಸಬೇಕು ಎಂದು ತಿಳಿಸಿದರು ಫೆಬ್ರವರಿ 18ರಂದು ಕ್ರೀಡಾ ಇಲಾಖೆ ವತಿಯಿಂದ ಹಗ್ಗ ಜಗ್ಗಾಟ, ಲೆಮನ್ & ಸ್ಪೂನ್, ಕಬಡ್ಡಿ ಖೋ ಖೋ ವಿವಿಧ ರೀತಿಯ 10 ಕ್ರೀಡೆಗಳನ್ನು ವಿಶ್ವಮಾನವ ಶಾಲೆಯಲ್ಲಿ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಫೆಬ್ರವರಿ 20 ರಂದು ಹೊಸ ಬೂದನೂರಿನ ದೇವಸ್ಥಾನದ ಆವರಣದಲ್ಲಿ ಆಹಾರಮೇಳ ಮತ್ತು ಸಂಜೆ ಅಗ್ನಿಶಾಮಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಮತ್ತು

ಬೂದನೂರು ಉತ್ಸವವನ್ನು ಹಳೆ ಬೂದನೂರುನಿಂದ ಮೆರವಣಿಗೆ ಮಾಡಲಾಗುತ್ತದೆ ಎಲ್ಲಾ ಗ್ರಾಮದ ಗ್ರಾಮಸ್ಥರು ಉತ್ಸವಕ್ಕೆ ಮೆರುಗು ತರುವಂತೆ ಕಾರ್ಯನಿವಹಿಸಬೇಕು ಎಂದು ತಿಳಿಸಿದರು.

ಫೆ.21 ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಗುರುಕಿರಣ್ ರವರ ತಂಡದಿಂದ ಮತ್ತು ಫೆ. 22 ರಂದು ಸಮಾರೋಪ ಕಾರ್ಯಕ್ರಮವನ್ನು ಆಯೋಜಿಸಿದ್ದು ಸಂಜೆ ರಾಜೇಶ್ ಕೃಷ್ಣನ್ ರವರ ತಂಡ ಮತ್ತು ಅಲೋಕ್ ಆರ್. ರವರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು

ಜಿಲ್ಲಾ ಬೂದನೂರು ಉತ್ಸವವು ಪ್ರವಾಸಿಗರ ಗಮನ ಸೆಳೆಯುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಮಾಡಲಾಗಿದ್ದು ಸಾರ್ವಜನಿಕರು ಜಾಲತಾಣಗಳಲ್ಲಿ ಹೆಚ್ಚು ಪ್ರಚಾರ ಮಾಡಬೇಕು. ದೇಶ –ವಿದೇಶ ಪ್ರವಾಸಿಗರಿಗೆ ಬೂದನೂರು ದೇವಸ್ಥಾನದ ಇತಿಹಾಸ ಮತ್ತು ಮೆರುಗನ್ನು ಪಸರಿಸವಂತೆ ಪ್ರಚಾರ ಮಾಡಬೇಕು ಎಂದು ಹೇಳಿದರು. ಜಿಲ್ಲೆಗೆ 25 ಕೋಟಿ ಹಣ ಬಿಡುಗಡೆ ಮಾಡಿ ಜಿಲ್ಲಾ ಚಿತ್ರಣವನ್ನು ಬದಲಾಯಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಗಳನ್ನು ಮಾಡಲಾಗುತ್ತದೆ ಮಂಡ್ಯ ಜಿಲ್ಲೆಯ ಬೂದನೂರು ಗ್ರಾಮಕ್ಕೆ 10 ಕೋಟಿ ಹಣ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು

ಬೂದನೂರು ಉತ್ಸವದ ಕಾರ್ಯಕ್ರಮವನ್ನು ಅದ್ದೂರಿಯಾಗಿ ಮಾಡಬೇಕು ಹಳ್ಳಿಯಲ್ಲಿ ದೊಡ್ಡ ಮಟ್ಟದಲ್ಲಿ ಉತ್ಸವವನ್ನು ಮಾಡುತ್ತಿರುವಿದು ಜಿಲ್ಲೆಗೆ ಹೆಗ್ಗಳಿಕೆ ಪಾತ್ರವಾಗಿದೆ ಎಂದು ಅಭಿಪ್ರಾಯ ಪಟ್ಟರು

ಸಭೆಯಲ್ಲಿ ಆರಕ್ಷಕ ಅಧೀಕ್ಷಕರಾದ ತಿಮ್ಮಯ್ಯ ಮತ್ತು ಶಿವಮೂರ್ತಿ ರವರು ಉಪಸ್ಥಿತರಿದ್ದರು.

# ಸಂತ ಸೇವಾಲಾಲ್ ಶ್ರೇಷ್ಠ ಪರಂಪರೆಯನ್ನು ರಚಿಸಿದ್ದಾರೆ: ಹೆಚ್. ಎಸ್ ಮಲ್ಲೇಶ್ ಗೌಡ

**ಹಾಸನ :** ಪರಂಪರೆಯಲ್ಲಿ ಶಬ್ದಗಳು ಬದಲಾಗಬಹುದು, ಆದರೆ ಆಶ್ರಯ, ಸತ್ಯ ಎಂದಿಗೂ ಕೂಡ ಬದಲಾಗುವುದಿಲ್ಲ, ಅಂತಹ ಶ್ರೇಷ್ಠ ಪರಂಪರೆಯನ್ನು ಸಂತ ಸೇವಾಲಾಲ್ ಅವರು ರಚಿಸಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹೆಚ್. ಎಸ್ ಮಲ್ಲೇಶ್ ಗೌಡ ತಿಳಿಸಿದ್ದಾರೆ.

ಹಾಸನಾಂಬ ಕಲಾಕ್ಷೇತ್ರದಲ್ಲಿ ಇಂದು ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತ ಸೇವಾಲಾಲ್ ಜಯಂತಿಯನ್ನು ಉದ್ಘಾಟಸಿ ಮಾತನಾಡಿದರು.



ಸಮಾಜಕ್ಕೆ ಮಾದರಿಯಾಗುವಂತಹ ಚೌಕಟ್ಟಿನ ಒಳಗೆ ಸಂತ ಸೇವಾಲಾಲ್ ಅವರು ಬದುಕನ್ನು ನಡೆಸುತ್ತಾ ಜಗತ್ತಿಗೆ ಶ್ರೇಷ್ಠ ವ್ಯಕ್ತಿಯಾಗಿ ಕಂಡುಬಂದರು ಎಂದು ಹೇಳಿದರು.

ಸೇವಾಲಾಲ್ ಅವರ ಬಗ್ಗೆ ಲಿಖಿತವಾಗಿ ಯಾವುದೇ ಮಾಹಿತಿ ಇಲ್ಲದಿದ್ದರು ಮೌಖಿಕ ಪರಪರೆ ದೊಡ್ಡ ದಾಖಲೆ ಜಗತ್ತಿನಲ್ಲಿದೆ, ಸಂತ ಸೇವಾಲಾಲ್ ಅವರು ಸಮಾಜವನ್ನು ತಿದ್ದಲು ಸನ್ಯಾಸತ್ವವೇ ಸರಿಯೆಂದು ವಿವಾಹವನ್ನು ತೊರೆದು ಸಮಾಜದ ಒಳಿತಿಗಾಗಿ ಸನ್ಯಾಸಿ ಪಟ್ಟವನ್ನು ಸ್ವೀಕರಿಸಿದರು ಎಂದರು.

ಕನ್ನಡ ನಾಡು ನೆಲವು ಜಗತ್ತಿನ ಅಚ್ಚರಿಗಳಲ್ಲಿ ಒಂದು, ನಮ್ಮ ವೃತ್ತಿಯೇ,ನಮ್ಮ ಧರ್ಮ ಆ ಶ್ರದ್ದೆಯೇ ಜಗತ್ತಿಗೆ ಕೊಡುಗೆ ಆಗಿರುತ್ತದೆ, ಜಗತ್ತಿನಲ್ಲಿ ಎಲ್ಲರೂ ಪ್ರಕೃತಿ ಆರಾಧಕರು ತದನಂತರ ಪ್ರತಿ ಕೃತಿ ಆರಾಧಕರು, ಪ್ರಕೃತಿಯಲ್ಲಿ ಕಾಣುವಂತಹ ಪ್ರತಿಯೊಂದು ದೈವದ ಸ್ವರೂಪ, ಪ್ರಕೃತಿಯೇ ಮನುಷ್ಯನ ಸೃಷ್ಟಿಯ ಮೂಲವಾಗಿರುತ್ತದೆ ಎಂದರು.

ಜನಪದ ಇತಿಹಾಸವು ಜಗತ್ತಿನಲ್ಲಿ ನೇರವಾದ ಇತಿಹಾಸ, ಜನಪದ ಹಾಡುಗಳ ಮೂಲಕ ಇರುವಂತಹ ಸತ್ಯಗಳನ್ನು ಜಗತ್ತಿಗೆ ಅರಿವು ಮೂಡಿಸುವ ಮೂಲಕ ಶರಣರ ಶ್ರೇಷ್ಠತೆಯನ್ನು ಕಾಣಬಹುದು ಎಂದರು.

ಜಿಲ್ಲಾ ಬಂಜಾರ ಸಂಘದ ಉಪಾಧ್ಯಕ್ಷ ಧರ್ಮಪ್ಪ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು ಸಮಾಜದಲ್ಲಿ ಎಂದಿಗೂ ಕೂಡ ಮಾನವರ ನಡುವೆ ಜಾತಿ, ವರ್ಗಗಳ ಭೇದ ಇಲ್ಲದೆ ಎಲ್ಲರೂ ಒಂದೇ ಎಂಬ ಭಾವನೆ ನಮ್ಮಲ್ಲಿ ಇದರೆ ಮಾತ್ರ ಶರಣರ ಸಾಹಿತ್ಯವನ್ನು ಜೀವನದಲ್ಲಿ ಅಳವಡಿಸಿಕೊಳಲು ಸಾಧ್ಯ ಎಂದರು.

ಬಂಜಾರ ಸಮಾಜದ ಆರಾಧ್ಯ ದೇವ ಸಂತ ಸೇವಾಲಾಲ್ ರವರು, ಅವರ ಆದ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಕೃತಿಯನ್ನು ನಾವು ಉಳಿಸಿದರೆ ಪ್ರಕೃತಿ ನಮ್ಮನು ಉಳಿಸುತ್ತದೆ, ಪ್ರಕೃತಿಯ ಸೃಷ್ಟಿಯೇ ಮಾನವ ಆದ್ದರಿಂದ ಗಿಡ ಮರಗಳನ್ನು ಬೆಳೆಸುತ್ತಾ ಪ್ರಕೃತಿಯನ್ನು ಸಮೃದ್ಧಿಸಿದರೆ ಪ್ರಕೃತಿಯು ಎಲ್ಲರ ಜೀವ ರಕ್ಷಣೆ ಮಾಡುತ್ತದೆ ಎಂದು ಹೇಳಿದರು.

ಸಂತ ಸೇವಾಲಾಲ್ ಅನೇಕ ಪ್ರವಚನಗಳನ್ನು ಮೂಲಕ ಮನುಷ್ಯ ತಾನು ಭೂಮಿಗೆ ಬಂದ ಕಾರಣ ತಿಳಿದುಕೊಂಡು, ನಿರ್ಮಲ ನಡೆನುಡಿಗಳನ್ನು ಅನುಸರಿಸಬೇಕು, ಮಾನವ ಬದುಕಿನ ಬಗ್ಗೆ ನಿತ್ಯಾ ಯೋಚಿಸಬೇಕು ಹಸಿವು, ಮೋಹ, ಮಾಮಕಾರವನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಹೆಚ್. ಪಿ ತಾರಾನಾಥ್, ಕನ್ನಡ ಪರಿಷತ್ತು ಕಾರ್ಯದರ್ಶಿ ಬೊಮ್ಮೇಗೌಡ ಹಾಗೂ ಸಮುದಾಯದ ಮುಖಂಡರುಗಳು ಉಪಸ್ಥಿತಿರಿದ್ದರು.

# ಸ್ನೇಹ ಬಂಧನ ಎಜುಕೇಷನ್ ಟ್ರಸ್ಟ್ ನಿಂದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ

## ಶಿಕ್ಷಕರು ಶಾಲಾ ಹಂತದಲ್ಲಿ ಮಕ್ಕಳಿಗೆ ದಂಡಿಸಿ ಸರಿ ಮಾರ್ಗದಲ್ಲಿ ನಡೆಸಿ




**ಚಂದೂಪುರ ಶಾಂತಿನಿಕೇತನ ಪಬ್ಲಿಕ್ ಶಾಲೆಯಲ್ಲಿ ಸ್ನೇಹ ಬಂಧನ ಎಜುಕೇಷನ್ ಟ್ರಸ್ಟ್ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ. ನಿಶ್ಚಲನಂದನಾಥ ಸ್ವಾಮೀಜಿ ಉದ್ಘಾಟಿಸಿದರು.**

**ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲನಂದನಾಥ ಸ್ವಾಮೀಜಿ ಅಭಿಪ್ರಾಯ**

**ಕೆ.ಎಂ.ದೊಡ್ಡಿ:** ಶಿಕ್ಷಕರು ಶಾಲಾ ಹಂತದಲ್ಲಿ ಮಕ್ಕಳಿಗೆ ದಂಡಿಸಿ ಸರಿ ಮಾರ್ಗದಲ್ಲಿ ನಡೆಸದಿದ್ದರೆ ಅಂತವರನ್ನು ಮುಂದಿನ ದಿನಗಳಲ್ಲಿ ಕಾನೂನು ದಂಡಿಸುತ್ತದೆ ಎಂದ ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ. ನಿಶ್ಚಲನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸಮೀಪದ ಚಂದೂಪುರ ಶಾಂತಿನಿಕೇತನ ಪಬ್ಲಿಕ್ ಶಾಲೆಯಲ್ಲಿ ಸ್ನೇಹ ಬಂಧನ ಎಜುಕೇಷನ್ ಟ್ರಸ್ಟ್ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಮಕ್ಕಳನ್ನು ಶಿಕ್ಷಕರು ದಂಡಿಸಿದರೇ ಮಹಾ ಅಪರಾದ ಎಂದು ಪೋಷಕರು ಬಿಂಬಿಸುತ್ತಾರೆ ಇಂತಹ ವಿತಂಡವಾದವನ್ನು ಬಿಟ್ಟು ಮಕ್ಕಳ ಪ್ರಗತಿಗೆ ಪೋಷಕರು ಸಹಕರಿಸಿದರೇ ಮುಂದಿನ ದಿನಗಳಲ್ಲಿ ಅವರನ್ನು ಯಾರು ದಂಡಿಸುವ ಅಗತ್ಯವಿಲ್ಲ ಎಂದರು.

ಹಿಂದಿನ ಕಾಲದಲ್ಲಿ ಮಕ್ಕಳನ್ನು ಶಿಕ್ಷಕರು ದಂಡಿಸುತಿದ್ದರು ಅಂತಹ ಮಕ್ಕಳು ದೊಡ್ಡವರದ ಬಳಿಕ ಸನ್ಮಾರ್ಗದಲ್ಲಿ ನಡೆಯುತಿದ್ದರು ಆದರೆ ಇಂದಿನ ಕಾಲದಲ್ಲಿ ತದ್ವಿರುದ್ದ ವಾಗಿದ್ದು ಶಿಕ್ಷಕರು ದಂಡಿಸಿದರೇ ಪೋಷಕರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಪ್ರೌಢ ಶಿಕ್ಷಣದ ಬಳಿಕ ಅವರ ನಡವಳಿಕೆ ಬದಲಾಗಿ ಅಪರಾದ ಪ್ರಕರಣಗಳಲ್ಲಿ ಭಾಗಿಯಾಗುವ ಮೂಲಕ ಕಾನೂನಿನ ದಂಡನೆಗೆ ಒಳಗಾಗಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಿಕ್ಷಕರು ತಳಮಟ್ಟದಲ್ಲಿ ಮಕ್ಕಳನ್ನು ದಂಡಿಸಿ ಅವರನ್ನು ಉತ್ತಮ ಶಿಕ್ಷಣ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಬೆಳಸಬೇಕು ಇದಕ್ಕೆ ಪೋಷಕರು ಸಹ ಪ್ರೋತ್ಸಹಿಸಬೇಕು. ಶಿಕ್ಷಕರು ಮತ್ತು ಪೋಷಕರು ಸಹ ಭಾಗಿತ್ವದಲ್ಲಿ ಮಕ್ಕಳ ಪ್ರಗತಿಯ ಬಗ್ಗೆ ಪ್ರತಿ ಹಂತದಲ್ಲೂ ಅವಲೋಕಿಸಬೇಕು ಎಂದು ಕಿವಿ ಮಾತು ಹೇಳಿದರು.

ಶಿಕ್ಷಕರು ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಿ ಅವರ ತಪ್ಪುಗಳನ್ನು ತಿದ್ದಿತಿಡಿ ಅವರನ್ನು ಸರಿಯಾದ ಮಾರ್ಗದಲ್ಲಿ ಶಿಕ್ಷಣ ನೀಡಿದೆ ಹೋದರೆ ಶಿಕ್ಷಣಕ್ಕೆ ಅರ್ಥ ಇಲ್ಲದಂತಾಗುತ್ತಾದೆ ಈ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯೋನ್ಮುಖರಾಗ ಬೇಕು ಎಂದರು

ಇತ್ತೀಚಿನ ದಿನಗಳಲ್ಲಿ ಮಕ್ಕಳು ಅತಿಯಾದ ಮೊಬೈಲ್ ಬಳಕೆಯಿಂದಾಗಿ ಮಕ್ಕಳು ದಿಕ್ಕು ತಪ್ಪುತ್ತಿದ್ದಾರೆ ಅತಿಯಾದ ಮೊಬೈಲ್ ಬಳಕೆ ಅಪಾಯದ ಸಂಕೇತ ಅದೊಂದು ದುಶ್ಚಟವಾಗಿ ಪರಿಣಮಿಸಿದ್ದು ಪೋಷಕರು ಹಾಗೂ ಶಿಕ್ಷಕರು ಮಕ್ಕಳ ಬಳಿ ಹೆಚ್ಚು ಮೊಬೈಲ್ ಬಳಕೆಯನ್ನು ತಪ್ಪಸಬೇಕು ಎಂದರು.

ಮಕ್ಕಳಿಗೆ ತಾಯಿಯೇ ಮೊದಲ ಗುರು ತಾಯಿಯಾದವಳು ಮಕ್ಕಳಿಗೆ ಉತ್ತಮವಾದ ಸಂಸ್ಕಾರ ,ಶಿಕ್ಷಣ ಹಾಗೂ ಕೌಶಲ್ಯಗಳನ್ನು ಕಲಿಸಿ ಅವರನ್ನು ಉತ್ತಮ ಪ್ರಜೆಯನ್ನಾಗಿ ರೂಪಿಸಿ ಸೃಜನಶೀಲತೆಯ ಕಡೆಗೆ ಕೊಂಡೊಯ್ಯಬೇಕು. ಮಕ್ಕಳು ದೇಶದ ಅಸ್ತಿಯಾಗಬೇಕೆ ಹೊರತು ಮಾರಕವಾಗಬಾರದು ಈ ನಿಟ್ಟಿನಲ್ಲಿ ಉತ್ತಮ ಗುಣಮಟ್ಟದ ನೈತಿಕ ಶಿಕ್ಷಣವನ್ನು ನೀಡಿ ಅವರನ್ನು ಸತ್ಪಜೆಯಾಗಿ ರೂಪಿಸಬೇಕು ಎಂದು ತಿಳಿಸಿದರು.

ಬಹುಮಾನ ವಿತರಿಸಿ ಮಾತನಾಡಿದ ಪೊಲೀಸ್ ಇನ್ಸ್‌ಪೆಕ್ಟರ್ ಜಿ. ಅನಿಲ್‌ಕುಮಾರ್ ಮಾತನಾಡಿ, ಮಕ್ಕಳು ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ಅವರಿಗೆ ತಳಪಾಯದಲ್ಲಿ ಉತ್ತಮ ಶಿಕ್ಷಣ ಕೊಡಿಸಬೇಕು ಇಲ್ಲವಾದಲ್ಲಿ ಅಂತಹ ಮಕ್ಕಳು ಅಪರಾಧ ಪ್ರಕರಣದಲ್ಲಿ ಭಾಗಿಯಾಗುತ್ತಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಯಾವ ಮಗುವು ಸಹ ದಡ್ಡವಿಲ್ಲ ಹಾಗೂ ಅಂಕಗಳಿಸಿದ ಮಾತ್ರಕ್ಕೆ ಅವನು ತುಂಬಾ ಜಾಣ ಅನ್ನೊದನ್ನು ಮೊದಲು ತೆಗೆದು ಹಾಕಿ. ಎಲ್ಲ ಮಕ್ಕಳಲ್ಲಿ ತನ್ನದೇಯಾದ ಪ್ರತಿಭೆ ಇರುತ್ತದೆ. ಶಿಕ್ಷಕರು ಮತ್ತು ತಂದೆ–ತಾಯಂದಿರು ಮಕ್ಕಳ ಉತ್ತಮ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದರು.

ಈ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಬೆಂಗಳೂರಿನ ಕರ್ನಾಟಕ ರಾಜ್ಯ ಮುಖ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ, ಸಂವಿಧಾನ ತಜ್ಞ ಡಾ.ಸುಧಾಕರ್ ಹೊಸಳ್ಳಿ ಉದ್ಘಾಟಿಸಿದರು. ಸ್ನೇಹ ಬಂಧನ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಹಾಗಲಹಳ್ಳಿ ವಿಶ್ವನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಎಚ್.ಸಿ. ಉಮೇಶ್, ಟ್ರಸ್ಟಿಗಳಾದ ಆಶಾರಾಣಿ ವಿಶ್ವನಾಥ್, ನಾಗರತ್ನ ಉಮೇಶ್, ಗಿಚ್ಚಿ ಗಿಲಿಗಿಲಿ ಖ್ಯಾತಿಯ ನಿಂಗರಾಜು, ಜೆಕೆ , ಶಾಲಾ ಮುಖ್ಯ ಶಿಕ್ಷಕ ಎಚ್.ಡಿ. ದೇವೇಗೌಡ ಸೇರಿದಂತೆ ಮತ್ತಿತರಿದ್ದರು.

# ರಾಮ ತಾರಕ ಮಂತ್ರದ ಮಹತ್ವ




**ರಾಮ ರಾಮೇತಿ ರಾಮೇತಿ ರಮೇ**
**ರಾಮೇ ಮನೋರಮೆ।**
**ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ॥**



**ಗಿರಿಜಾ.ಎಸ್. ದೇಶಪಾಂಡೆ**

ವಿಷ್ಣು ಸಹಸ್ರನಾಮದ ಪೀಠಿಕೆಯಲ್ಲಿ ಭಗವಾನ್ ಶಂಕರನು ತನ್ನ ಪತ್ನಿ ಜಗನ್ಮಾತೆಯಾದ ಪಾರ್ವತಿಗೆ ರಾಮನಾಮದ ಮಹಿಮೆಯನ್ನು ಈ ರೀತಿ ಹೇಳಿದ್ದಾನೆ.ಇದು ಮಾನವನ ಎಲ್ಲ ಕಷ್ಟಗಳನ್ನು ನಿವಾರಿಸುವ ಶಕ್ತಿಶಾಲಿ ಮಂತ್ರವಾಗಿದೆ. ರಾಮತಾರಕ ಮಂತ್ರವು ಹಿಂದೂಧರ್ಮದಲ್ಲಿ ಒಂದು ಶಕ್ತಿಶಾಲಿ ಜನಪ್ರೀಯವಾದ ಮಂತ್ರವಾಗಿದೆ.ಇದು ಅತ್ಯಂತ ಪೂಜ್ಯನೀಯ ದೇವತೆಗಳಲ್ಲಿ ಒಬ್ಬರಾದ ಶ್ರೀರಾಮನ ಮೇಲೆ ಕೇಂದ್ರೀಕೃತವಾಗಿದೆ.ಈ ಮಂತ್ರ ಅತ್ಯಂತ ಪವಿತ್ರ ಮತ್ತು ಬಲಶಾಲಿ ಎಂದು ಪರಿಗಣಿಸಲಾಗಿದೆ.

ನಕಾರಾತ್ಮಕ ಶಕ್ತಿಯನ್ನು ನಾಶಮಾಡಿ ನೀತಿಯನ್ನು ಉತ್ತೇಜಿಸುತ್ತದೆ.ಆಂತರಿಕ ಶಾಂತಿಯ ಪ್ರಜ್ಞೆಯನ್ನು ಬೆಳೆಸುತ್ತದೆ.

**ಪ್ರಯೋಜನಗಳು**

ರಾಮತಾರಕ ಮಂತ್ರ ಪಠಿಸುವದರಿಂದ ಶಾಂತಿ ದೊರೆಯುತ್ತದೆ.ಜೀವನದಲ್ಲಿ ಬರುವ ಅಡೆತಡೆಗಳು ನಿವಾರಣೆಯಾಗುತ್ತವೆ.ಆಂತರಿಕ ಶಕ್ತಿ ಮಾನಸಿಕ ಸ್ಪಷ್ಟತೆ ಪಡೆಯಲು ಸಹಾಯ ಮಾಡುತ್ತದೆ.ಭಕ್ತರನ್ನು ಅಪಾಯದಿಂದ ರಕ್ಷಿಸುತ್ತದೆ.ಮನಸ್ಸನ್ನು ಶುದ್ಧೀಕರಿಸುತ್ತದೆ.ಮನಸ್ಸಿಗೆ ಶಾಂತಿ,ಏಕಾಗ್ರತೆ ಹೆಚ್ಚಳ ,ಒತ್ತಡ ಕಡಿಮೆ,ಅಧ್ಯಾತ್ಮಿಕ ಯೋಗಕ್ಷೇಮದ ಭಾವನೆ ಬೆಳೆಯುತ್ತದೆ.ಭಗವಾನ್ ರಾಮನ ಒಂದು ಹೆಸರು ವಿಷ್ಣುವಿನ ಸಾವಿರನಾಮಗಳಿಗೆ ಸಮಾನವಾಗಿರುತ್ತದೆ.

ಕಲಿಯುಗದಲ್ಲಿ ರಾಮನ ನಾಮಸ್ಮರಣೆಯೊಂದೇ ಎಲ್ಲದಕ್ಕೂ ಆಧಾರವೆಂದು ರಾಮಚರಿತ ಮಾನಸದಲ್ಲಿ ಉಲ್ಲೇಖಿಸಲಾಗಿದೆ."ಶ್ರೀ ರಾಮ ಜಯರಾಮ ಜಯಜಯರಾಮ" ಮಂತ್ರವನ್ನು ನಿರಂತರವಾಗಿ ಜಪಿಸುವದರಿಂದ ಈ ಮಂತ್ರವು ವಿಜಯದ ಆಶೀರ್ವಾದ ನೀಡುತ್ತದೆ.ಈ ಮಂತ್ರವು ಶತ್ರುಗಳನ್ನು ನಿಗ್ರಹಿಸಿ ನಕಾರಾತ್ಮಕ ಶಕ್ತಿಯನ್ನು ನಾಶ ಪಡಿಸುತ್ತದೆ.

**"ಓಂ ದಶರಥಾಯ ವಿದ್ಮಹೇ**
**ಸೀತಾ ವಲ್ಲಭಯ ಧೀಮಹಿ**
**ತನ್ನೋ ರಾಮ ಪ್ರಚೋದಯಾತ್ ॥**

ಇದು ರಾಮನ ಗಾಯಿತ್ರಿ ಮಂತ್ರವಾಗಿದ್ದು ಯಾವುದೇ ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವಾಗ ಈ ಮಂತ್ರವನ್ನು ಭಕ್ತಿಯಿಂದ ಜಪಿಸುವದರಿಂದ ಎಲ್ಲ ಸಮಸ್ಯೆಗಳು ದೂರವಾಗುತ್ತವೆ.ಈ ಮಂತ್ರವು ಪ್ರತಿಕೂಲ ಸಂಧರ್ಭಗಳನ್ನು ಜಯಿಸಲು ಶಕ್ತಿ ನೀಡುತ್ತದೆ.

# ದೃಢ ಶರಣ ಶ್ರೀಮಂತ ಮಣಿ...
# ಶರಣ ಘಟ್ಟಿವಾಳಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

12 ನೇ ಶತಮಾನದ ವಚನಕಾರರಲ್ಲಿ ಒಬ್ಬರಾದ ಘಟ್ಟಿವಾಳಯ್ಯನವರು ಮದ್ದಳೆ ಬಾರಿಸುತ್ತ ನೃತ್ಯ ಮಾಡುವ ಕಾಯಕವನ್ನು ಮಾಡುತ್ತಿದ್ದರು. ಶಿವಾನುಭವವನ್ನು ಸಾರುವ ನರ್ತನವನ್ನು ಮಾಡುತ್ತಾ ನಿಜದ ಅರ್ಥದಲ್ಲಿ ಜಂಗಮನಾಗಿ ಇವರು ಕಾರ್ಯ ನಿರ್ವಹಿಸುತ್ತಿದ್ದರು. ಕಲ್ಯಾಣದ ಶರಣರಲ್ಲಿಯೇ ಇವರು ಗುರು,ಲಿಂಗ,ಜಂಗಮದಲ್ಲಿ ಭಕ್ತಿಯನ್ನು ಹೊಂದಿದ್ದು ಕಾಯಕವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಇದರ ಜೊತೆಗೆ ಗಂಧವನ್ನು ತೇಯುವ ಕಾಯಕವನ್ನು ಕೂಡ ಇವರು ಮಾಡುತ್ತಿದ್ದರು.

ಅಂದಿನ ಶರಣರ ನಡುವೆ ಘಟ್ಟಿವಾಳಯ್ಯನವರು ತಮ್ಮ ಅಚಲನಿಷ್ಠೆಯಿಂದ ಗಮನಾರ್ಹ ಸ್ಥಾನವನ್ನು ಪಡೆದುಕೊಂಡಿದ್ದು ಅಲ್ಲಮಪ್ರಭುಗಳು ಅವರನ್ನು ಹೀಗೆ ಪ್ರಶಂಶಿಸಿದ್ದಾರೆ

ಅಂಗದ ಮೇಲಣ ಲಿಂಗಕ್ಕಿಂತ ಅಂಗದೊಳಗಣ ಲಿಂಗವ ಹಿಂಗದಂತಿರಬೇಕು ಘಟ್ಟಿವಾಳಯ್ಯನಂತೆ

ಎಂದೂ, ಕೂಡಲಸಂಗ ನಿನ್ನ ಶರಣ ಘಟ್ಟಿವಾಳಯ್ಯನಲ್ಲದೆ ನೆರೆ ಅರಿವವರಾರೋ ಎಂದು ಮೋಳಿಗೆಯ ಮಾರಯ್ಯ, ಲೆಕ್ಕವಿಲ್ಲದ ಆಸೆ ಮನದೊಳಗೆ ಹೊಕ್ಕು ತಿರುಗಾಡುತ್ತಿಹ ಚಿಕ್ಕ ಮಕ್ಕಳಿಗೆ ಎಲ್ಲಿಯದು ನಿರ್ವಾಣ ಘಟ್ಟಿವಾಳಂಗಲ್ಲದೆ ಎಂದು

ಘಟ್ಟಿವಾಳಯ್ಯನವರ ಅಚಲತೆಯನ್ನು ಕುರಿತು ಅದೃಶ್ಯ ಕವಿಯು ಈತನನ್ನು ದೃಢ ಶರಣ ಶ್ರೀಮಂತ ಮಣಿ ಎಂದು ಹಾಡಿ ಹೊಗಳಿದ್ದಾರೆ.

ಒಂದು ಬಾರಿ ಡಾಂಭಿಕ ಭಕ್ತರು ಮಹಾ ಮನೆಗೆ ದಾಸೋಹಕ್ಕೆ ಹೋಗುವುದನ್ನು ಕಂಡ 'ಬಸವಣ್ಣನ ಮನೆಯ ಮುಸುರೆ ಗಡಿಗೆಗೆ ಇವರೇ ಮಕ್ಷಿಕಗಳು' ಎನ್ನಲು ಅವರು ಕೋಪದಿಂದ ಇವನ ಇಷ್ಟಲಿಂಗವನ್ನು ಕಿತ್ತುಕೊಂಡರು. ಆತನು ಅದನ್ನು ಕೊಡುವಂತೆ ಬೇಡಲು ಅವರು ಕುಹಕದಿಂದ ತಮ್ಮ ಮುಂದಿದ್ದ ಕಲ್ಲುಗುಂಡೊಂದನ್ನು ತೋರಿ ಅದೋ ಅಲ್ಲಿದೆ ನಿನ್ನ ಇಷ್ಟಲಿಂಗ ಎಂದು ಹಾಸ್ಯ ಮಾಡಿದರು. ಆತನು ಅದನ್ನೇ ಇಷ್ಟಲಿಂಗವೆಂದು ಕೊರಳಲ್ಲಿ ಕಟ್ಟಿಕೊಂಡು ಬಸವಣ್ಣನ ಮಹಾಮನೆಯ ಹೆಬ್ಬಾಗಿಲಿನಲ್ಲಿ ಕುಳಿತುಬಿಟ್ಟನು. ಸುದ್ದಿ ತಿಳಿದ ಬಸವಣ್ಣನು ಪ್ರಭುದೇವ, ಚನ್ನಬಸವಣ್ಣ ಮೊದಲಾದವರೊಂದಿಗೆ ಅಲ್ಲಿಗೆ ಬಂದು ಆ ಜಂಗಮರಿಗೆ ಆತನ ಇಷ್ಟಲಿಂಗವನ್ನು ನೀಡುವಂತೆ ಹೇಳಿದನು.

ಆಗ ಅವರು 'ಘಟ್ಟಿವಾಳಯ್ಯ... ನಿಮಗೆ ಗುರು ಕೊಟ್ಟ ಲಿಂಗ ಮತ್ತು ಬೆಟ್ಟದ ಈ ಗುಂಡು ಹೀಗೆ ಎರಡು ಲಿಂಗಗಳೇ ನಿಮಗೆ ಇಬ್ಬರು ಗಂಡರೇ ' ಎಂದು ವ್ಯಂಗ್ಯವಾಡಿದರು. ಆಗ ಘಟ್ಟಿವಾಳಯ್ಯ ಇಷ್ಟಲಿಂಗದೊಳಗೆ ಕಲ್ಲುಗುಂಡನ್ನು ಸೇರಿಸಿಕೊಳ್ಳುತ್ತಾನೆ. ಇದನ್ನು ಕಂಡ ಅಲ್ಲಮ ಮೊದಲಾದವರು ಘಟ್ಟಿವಾಳಯ್ಯನದು ನಿಜವಾದ ನಡೆಯೆಂದು ಆತನನ್ನು ಸ್ತುತಿಸಿದರು. ಅಲ್ಲಮ, ಬಸವ, ಸಿದ್ಧರಾಮ, ಆದಯ್ಯ ಮೊದಲಾದ ಶರಣರು ಘಟ್ಟಿವಾಳಯ್ಯನ ಗಟ್ಟಿತನವನ್ನು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ.

ಸಿದ್ಧರಾಮನು ಧೀರನಾದಡೆ ಘಟ್ಟಿವಾಳಯ್ಯನಂತಾಗಬೇಕಯ್ಯ ಎಂದಿದ್ದಾನೆ. ಬಸವಣ್ಣನವರು ಕಾಯಕವಂಚಕನಲ್ಲ, ಜೀವ ವಂಚಕನಲ್ಲ, ನಿರಂತರ ಅಸಹಜ ನೋಡಯ್ಯಾ ಶಂಕೆಯಿಲ್ಲದ ಮಹಾಮಹಿಮನು ಕೂಡಲ ಸಂಗನ ಶರಣನುಪಮಾತೀತ ನೋಡಯ್ಯಾ ಎಂದು ಹೊಗಳಿದರೆ, ಆಶನಕ್ಕಂಜಿ ವೇಷವನೆ ಹೊತ್ತು ದೇಶವ ತೊಳಲುವ ಹಿರಿಯರ ಗಂಡ, ಕಾಲದಗಂಡ, ಕರ್ಮದಗಂಡ, ಲಿಂಗವಿಡಿದು ಸಾವ ಹಿರಿಯರ ಗಂಡ, ಗುಹೇಶ್ವರ ಎಂದು ಅಲ್ಲಮರು ಹೊಗಳಿದ್ದಾರೆ. .

**ಇರಿವ ಕೈದಿಂಗೆ ದಯಧರ್ಮದ ಮೊನೆ ಉಂಟೆ**
**ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ**
**ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ**
**ಎನಗೆ ನಿಮ್ಮೊಳಗಿನ್ನೇತರ ಮಾತು**
**ವೇಷಧಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು**



**ಚಿಕ್ಕಯ್ಯಪ್ರಿಯ ಸಿದ್ದಲಿಂಗ ಇಲ್ಲ ಇಲ್ಲ ಎಂದೆ.**

ಕೊಲ್ಲುವ ಆಯುಧಗಳಿಗೆ ದಯೆ ಧರ್ಮದ ಮೊನೆ ಇರುವುದೇ ಅಂತೆಯೇ ಉಗ್ರಸರ್ಪದ ಹಲ್ಲಿನೊಳಗೆ ಅಮೃತದ ರುಚಿ ಇರುತ್ತದೆಯೇ ಹೊಟ್ಟೆ ಪಾಡಿಗೋಸ್ಕರ ಜಂಗಮರ ವೇಷ ಧರಿಸಿದವರೆಲ್ಲ ಶಿವನನ್ನು ಹೇಗೆ ಅರಿಯುವರು ಎಂದು ಪ್ರಶ್ನಿಸುತ್ತಾನೆ. ಇಂತಹ ವೇಷಧಾರಿಗಳು ಶಿವಶರಣರ ಗುಂಪಿನಿಂದ ಬೇರೆ. ಅಂತಹವರಿಗೆ ಶಿವ ದೊರೆಯುವುದಾದರೂ ಹೇಗೆ ಎಂದು ಹೇಳುತ್ತಾರೆ.

**ತಪವೆಂಬುದು ಬಂಧನ**
**ನೇಮವೆಂಬುದು ತಗಹು**
**ಶೀಲವೆಂಬುದು ಸೂತಕ**
**ಕಟ್ಟಿನ ವ್ರತದ ಭಾಷೆಯೆಂಬುದು ನಗೆಗೆಡೆಯಾಯಿತ್ತು ನೋಡಾ!**
**ನಗೆ ಹೊಗೆವಣ್ಣಿದಲ್ಲಿ ಹೊಗೆ ಜಗವಾದಡೆ**
**ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು| ಮಾಣು**

ತನ್ನ ದೇಹದ ಮೇಲಿನ ಮೋಹವನ್ನು ಬಿಡಬೇಕೆಂದು ಗುರುವನ್ನು ತೋರಿಸಲಾಗಿದೆ, ಮನಸ್ಸನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂದ ು ಲಿಂಗವನ್ನು ತೋರಿ, ಧನದ ಮೇಲಿನ ಆಸೆಯನ್ನು ತೊರೆಯಬೇಕೆಂದು (ಹಣವನ್ನು ದಾನಮಾಡಲಿ ಎಂದು) ಜಂಗಮವನ್ನು ತೋರಿಸಿದರು, ಒಳ್ಳೆಯದನ್ನೆಲ್ಲ ಮರೆತು ಹೊಡೆದಾಡುವ ಭಾಷೆ ಹೀನರು (ಮಾತಿಗೆ ತಪ್ಪಿದವರನ್ನು ಕಂಡು ನಾಚಿಕೆಯಾಯಿತು. ಗುರು, ಲಿಂಗ, ಜಂಗಮವನ್ನು ಮರೆತು ಸುಖ ಭೋಗಗಳಿಗೆ ಹೊಡೆದಾಡುವ ಜನರನ್ನು ಕಂಡು ನಾಚುವ ಘಟ್ಟಿವಾಳಯ್ಯನು ಡಾಂಬಿಕ ಭಕ್ತರ ನಡವಳಿಕೆಗಳನ್ನು ಖಂಡಿಸುತ್ತಾನೆ. ಇಂತಹವರು ಶಿವಭಕ್ತರಾಗಲು, ಶಿವನನ್ನು ಕಾಣಲು ಸಾಧ್ಯವಿಲ್ಲ ಎಂಬುದು ಈತನ ಅಭಿಮತ.

**ತನುವ ಮರೆಯಬೇಕೆಂದು ಗುರುವ ತೋರಿ,**
**ಮನವ ಮರೆಯಬೇಕೆಂದು ಲಿಂಗವ ತೋರಿ,**
**ಧನವ ಮರೆಯಬೇಕೆಂದು ಜಂಗಮವ ತೋರಿ,**
**ಲೇಸ ಮರೆತು ಕಷ್ಟಕ್ಕೆ ಕಡಿದಾಡುವ**
**ಭಾಷೆಹೀನರ ಕಂಡು ನಾಚಿಕೆಯಾಯಿತ್ತು**
**ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.**





ತನ್ನ ದೇಹದ ಮೇಲಿನ ಮೋಹವನ್ನು ಬಿಡಬೇಕೆಂದು ಗುರುವನ್ನು ತೋರಿಸಲಾಗಿದೆ, ಮನಸ್ಸನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂದ ು ಲಿಂಗವನ್ನು ತೋರಿ, ಧನದ ಮೇಲಿನ ಆಸೆಯನ್ನು ತೊರೆಯಬೇಕೆಂದು (ಹಣವನ್ನು ದಾನಮಾಡಲಿ ಎಂದು) ಜಂಗಮವನ್ನು ತೋರಿಸಿದರು, ಒಳ್ಳೆಯದನ್ನೆಲ್ಲ ಮರೆತು ಹೊಡೆದಾಡುವ ಭಾಷೆ ಹೀನರು (ಮಾತಿಗೆ ತಪ್ಪಿದವರನ್ನು ಕಂಡು ನಾಚಿಕೆಯಾಯಿತು. ಗುರು, ಲಿಂಗ, ಜಂಗಮವನ್ನು ಮರೆತು ಸುಖ ಭೋಗಗಳಿಗೆ ಹೊಡೆದಾಡುವ ಜನರನ್ನು ಕಂಡು ನಾಚುವ ಘಟ್ಟಿವಾಳಯ್ಯನು ಡಾಂಬಿಕ ಭಕ್ತರ ನಡವಳಿಕೆಗಳನ್ನು ಖಂಡಿಸುತ್ತಾನೆ. ಇಂತಹವರು ಶಿವಭಕ್ತರಾಗಲು, ಶಿವನನ್ನು ಕಾಣಲು ಸಾಧ್ಯವಿಲ್ಲ ಎಂಬುದು ಈತನ ಅಭಿಮತ.

ಶೀಲವೆಂಬುದು ಸೂತಕ ಎಂದುನಡತೆಯ ಕುರಿತು ಹೇಳುವ ಆತ ಧ್ಯಾನ,ತಪಸ್ಸು, ಉಪವಾಸ, ವ್ರತ ಎಂಬವುಗಳನ್ನು ಮನಸ್ಸಿಲ್ಲದೆಯೇ ಆಚರಿಸುವ ಜನರಿಗೆ ತಪಸ್ಸೆಂಬುದೇ ಬಂಧನವಾಗಿಯೂ ನಿಯಮವೆಂಬುದು ಕಟ್ಟುಪಾಡಾಗಿಯೂ ನಡತೆಯೆಂಬುದು ಮೈಲಿಗೆಯಾಗಿಯೂ ಕಾಡುವುದು. ಇಂತಹ ನಿರ್ಬಂಧಗಳೆಲ್ಲ ನಗೆಗೆ ಕಾರಣವಾಗಿ, ಆ ನಗೆಯಿಂದ ಕೋಪ ದ್ವೇಷಗಳು ಉಂಟಾಗಿ ಶಿವ ಅಲ್ಲಿ ಇಲ್ಲದವನಾಗುತ್ತಾನೆ ಎಂಬುದು ಘಟ್ಟಿವಾಳಯ್ಯನ ಅಭಿಮತ.ತನು-ಮನ-ಧನವನ್ನು ಮರೆಯಲೆಂದು ಗುರು, ಲಿಂಗ, ಜಂಗಮರನ್ನು ತೋರಿದ್ದರೂ ಒಳ್ಳೆಯದನ್ನು ಮರೆತು ಹೊಟ್ಟೆಯಪಾಡಿಗಾಗಿ ಮಾತಿಗೆ ತಪ್ಪಿ ಓಡಾಡುವ ಜನರನ್ನು ಕಂಡು ನಾಚಿಕೆಯಾಯಿತು ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾನೆ.

ಇರಿವ ಆಯುಧಕ್ಕೆ ದಯೆ ಧರ್ಮದ ಮೊನೆ ಇರುವುದಿಲ್ಲ ಎಂದೂ ತಪವನ್ನು ಬಂಧನವೆಂದು ಘಟ್ಟಿವಾಳಯ್ಯ ಕರೆಯುತ್ತಾನೆ.

ಘಟ್ಟಿವಾಳಯ್ಯನ ಪ್ರಕಾರ ನೇಮವೆಂಬುದು ತಗಹು. ಶೀಲ ಅಥವಾ ಒಳ್ಳೆಯ ನಡತೆ ಎನ್ನುವುದು ಕೂಡಾ ಸೂತಕವಾಗಿದೆ.

ತನುವನ್ನು ಮರೆಯಲು ಗುರುವನ್ನು, ಮನವನ್ನು ಮರೆಯಲು ಲಿಂಗವನ್ನು ಹಾಗೂ ಧನವನ್ನು ಮರೆಯಲು ಜಂಗಮವನ್ನು ತೋರುತ್ತಾರೆ.

ಕೊಲ್ಲುವ ಆಯುಧಗಳಿಗೆ ದಯೆ ಧರ್ಮದ ಮೊನೆ ಇರುವುದಿಲ್ಲ. ಉಗ್ರಸರ್ಪದ ಹಲ್ಲಿನೊಳಗೆ ವಿಷವಿರುವುದೇ ಹೊರತು ಅಮೃತವಿರಲು ಸಾಧ್ಯವಿಲ್ಲ. ಅಂತೆಯೇ ವೇಷಧಾರಿ ಭಕ್ತರು ಹೊಟ್ಟೆಪಾಡಿಗೋಸ್ಕರ ಜಂಗಮರ ವೇಷಧರಿಸಿದವರೆಲ್ಲ ಶಿವನನ್ನು ಹೇಗೆ ಅರಿಯಲು ಸಾಧ್ಯ ಎಂಬುದು ಈತನ ಪ್ರಶ್ನೆ. ಇಂತಹ ವೇಷಧಾರಿಗಳು ಶಿವಶರಣರ ಗುಂಪಿನಿಂದ ಬೇರೆ ಅಂತಹವರಿಗೆ ಶಿವ ದೊರೆಯುವುದಾದರೂ ಹೇಗೆ ಎಂದು ಹೇಳುತ್ತಾ ಇವರಿಗೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಒಲಿಯುವುದಿಲ್ಲ ಎನ್ನುತ್ತಾನೆ.

ಧ್ಯಾನ, ತಪಸ್ಸು, ಉಪವಾಸ, ವ್ರತ ಎಂಬುವುಗಳನ್ನು ಮನಸ್ಸಿಲ್ಲದೆಯೇ ಆಚರಿಸುವ ಜನರಿಗೆ ತಪಸ್ಸೆಂಬುದೇ ಬಂಧನವಾಗಿಯೂ ನಿಯಮವೆಂಬುದು ಕಟ್ಟುಪಾಡಾಗಿಯೂ ನಡತೆಯೆಂಬುದು ಮೈಲಿಗೆಯಾಗಿಯೂ ಕಾಡುವುದು. ಇಂತಹ ಕಟ್ಟುಪಾಡುಗಳೆಲ್ಲ ನಗೆಗೆ ಕಾರಣವಾಗಿ, ಆ ನಗೆಯಿಂದ ಕೋಪ ದ್ವೇಷಗಳು ಉಂಟಾಗಿ ಶಿವ ಅಲ್ಲೇ ಇಲ್ಲದವನಾಗುತ್ತಾನೆ. ಧ್ಯಾನ-ತಪಸ್ಸುಗಳೆಲ್ಲ ಮನಸ್ಸಿಟ್ಟು ಆಚರಿಸಬೇಕೇ ಹೊರತು ಬಲವಂತದಿಂದಲ್ಲ ಎಂದು ಹೇಳುತ್ತಾನೆ. ಈತ ಇಷ್ಟಲಿಂಗಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟವನು.

ಗುರು-ಲಿಂಗ-ಜಂಗಮಗಳನ್ನು ಮರೆವ ಭಾಷಾಹೀನರನ್ನು ಕಂಡು ನಾಚುತ್ತೇನೆ ಎಂದು ಘಟ್ಟಿವಾಳಯ್ಯ ಹೇಳುತ್ತಾನೆ.

ಡಾಂಭಿಕತೆಯನ್ನು ಖಂಡಿಸಿ, ಸತ್ಯನಿಷ್ಠುರತೆ ಮತ್ತು ಸದಾಚಾರಕ್ಕೆ ಒತ್ತು ನೀಡಿದ ಇವರನ್ನು ಅಲ್ಲಮಪ್ರಭು, ಚೆನ್ನಬಸವಣ್ಣ ಮುಂತಾದವರು ಗುಣಗಾನ ಮಾಡಿದ್ದಾರೆ.

ಮುದ್ದಣ ಎಂಬ ಪೂರ್ವಾಶ್ರಮದ ನಾಮವನ್ನು ಹೊಂದಿದ ಘಟ್ಟಿವಾಳಯ್ಯನವರು ಮೂಲತಹ ಬನವಾಸಿಯವರು. ಮದ್ದಳೆ ಬಾರಿಸುತ್ತಾ ಶಿವಾನುಭವವನ್ನು ನರ್ತನದ ಮೂಲಕ ತೋರುವ ಕಾಯಕವನ್ನು ಹೊಂದಿದ್ದರು. ಇವರ ತಂದೆ ತಾಯಿಗಳ ಕುರಿತು ಅಷ್ಟಾಗಿ ಗೊತ್ತಿಲ್ಲದೆ ಹೋದರೂ ಶಿವಾನುಭವದ ಸಾರವನ್ನು ಹೇಳುತ್ತ ಶಿವಭಕ್ತರೇ ಆಗಿ ಹೋಗಿದ್ದರು.

ಹೆಂಡತಿ ಅನ್ಯಪುರುಷನಿಗಾಗಿ ತನ್ನನ್ನು ತೊರೆದ ನಂತರ ವೈರಾಗ್ಯ ಹೊಂದಿ ತಮ್ಮ ಕಾಯಕವನ್ನು ಮಾಡುತ್ತಾ ಕಲ್ಯಾಣದ ಕಡೆಗೆ ನಡೆದರು. 770 ಅಮರ ಗಣಗಳಲ್ಲಿ ಒಬ್ಬರಾಗಿ ಶರಣರ ಸಾಲಿಗೆ ಸೇರಿದರು. ಅವರ ವಚನಗಳ ಅಂಕಿತನಾಮ 'ಚಿಕ್ಕಯ್ಯಪ್ರಿಯ ಸಿದ್ದಲಿಂಗ '.

ಅವರು ತಮ್ಮ ವಚನಗಳಲ್ಲಿ ಸತ್ಯನಿಷ್ಠುರತೆಯನ್ನು, ಡಾಂಭಿಕ ಭಕ್ತಿಯ ಕುರಿತಾದ ವಿರೋಧವನ್ನು ಹಾಗೂ ಶರಣರ ಸದಾಚಾರದ ಕುರಿತು ನಿಷ್ಠೆಯನ್ನು ವ್ಯಕ್ತಪಡಿಸಿದ್ದಾರೆ.

ಘಟ್ಟಿವಾಳಯ್ಯನು ವೇಷಧಾರಿಗಳ ಭಕ್ತಿಯನ್ನು ಟೀಕಿಸುತ್ತಿದ್ದರು ಆಂತರಿಕ ಶುದ್ಧತೆಗೆ ಹೆಚ್ಚು ಒತ್ತು ನೀಡಿದ ದೃಢ ಶರಣರಲ್ಲಿ ಅವರು ಒಬ್ಬರಾಗಿದ್ದರು.

ಮೂಲತಃ ಬನವಾಸಿಯವರಾದ ಘಟ್ಟಿವಾಳಯ್ಯ ಕನ್ನಡದಲ್ಲಿ 147 ವಚನಗಳನ್ನು ರಚಿಸಿದ್ದಾನೆ.

ವೇಷಧಾರಿಗಳು ಭಕ್ತರಾಗುವುದಿಲ್ಲ ಅಷ್ಟೇ ಅಲ್ಲದೆ, ಶರಣರ ಗುಂಪಿನಲ್ಲಿ ಡಾಂಭಿಕ ಭಕ್ತಿಯ ವೇಷಧಾರಿಗಳು ಸೇರಲು ಅನರ್ಹರೆಂಬುದನ್ನು ತನ್ನ ವಚನದ ಮೂಲಕ ಸಾರಿದ್ದಾರೆ.

ಗುರು, ಲಿಂಗ, ಜಂಗಮ ಕಲ್ಪನೆಗೆ ಹೊಸ ಆಯಾಮವನ್ನು ನೀಡುವ ಮತ್ತು ಹೊಸ ವ್ಯಾಖ್ಯಾನ ನೀಡುವ ಇವರ ಧೈರ್ಯ ಮೆಚ್ಚತಕ್ಕದ್ದು .

ಮದ್ದಳೆ ಬಾರಿಸುತ್ತಾ ನೃತ್ಯಗೈಯುತ್ತಾ ತಮ್ಮ ಬದುಕಿನ ಕೊನೆಯ ಉಸಿರನ್ನು ಎಳೆದ ಘಟ್ಟಿವಾಳಯ್ಯನವರು ಶರಣರನ್ನು ಮರಣದಲ್ಲಿ ಕಾಣು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ.

ಶೂನ್ಯ ಸಂಪಾದನೆಯ ಒಂದು ಇಡೀ ಅಧ್ಯಾಯ ಘಟ್ಟಿವಾಳಯ್ಯನವರ ಕುರಿತು ಹೊಂದಿದೆ ಎಂದರೆ ಅವರ ಮಹಿಮೆಯನ್ನು ನಾವು ಅರಿಯಬಹುದು.

ಇಂತಹ ಘನ ಮಹಿಮ ಘಟ್ಟಿವಾಳಯ್ಯನವರಿಗೆ ಶರಣು ಶರಣಾರ್ಥಿ

---

# ಅಪಾಯದ ಹದಿಹರೆಯ



| ರೂಪ ಮಂಜುನಾಥ ಹೊಳೆನರಸೀಪುರ

12 ರ ಪ್ರಾಖಿ, 14 ರ ಪ್ರಾಚಿ ಮತ್ತು 16ರ ವಿಶಿಕಾ ಮೂವರು ಸಹೋದರಿಯರು ಯಾವುದೋ ಒಂದು ಮೊಬೈಲ್ ಗೇಮ್ ನ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ವಿಚಾರ ಮಾಧ್ಯಮಗಳಲ್ಲಿ ಓದಿದಾಗ ಜೀವ ಝಲ್ಲೆಂದಿತು. ಟಾಸ್ಕ್ ಆಧರಿತ ಕೊರಿಯನ್ ದೇಶದ ಆ ಯಪ್ ಈಗ ಈ ಮೂವರು ಹುಡುಗಿಯರ ಆತ್ಮಹತ್ಯೆಗೆ ಕಾರಣವಾಗಿದೆ. ಕೊರಿಯನ್ ಆ ಯಪ್‌ಗೆ ಹುಡುಗಿಯರು ವ್ಯಸನಿಗಳಾಗಿದ್ದಾರೆಂದು ತಿಳಿದು, ಅಬ್ಬಾ ಇದೆಂಥಾ ಮಾರಣಾಂತಿಕ ಆಟ ಇದನ್ನು ಇಷ್ಟ ಪಟ್ಟು ಆಡುವುದಾದರೂ ಯಾಕೆ ಎಂದೆನಿಸಿತು. ಹುಡುಗಿಯ ತಂದೆ ಜೀವನದಲ್ಲಿ ಎರಡು ಭಾರಿ ವಿವಾಹವಾಗಿದ್ದರು. ಮೊದಲ ಹೆಂಡತಿಯಿಂದ ಇಬ್ಬರು ಮಕ್ಕಳು ಮತ್ತು ಎರಡನೇ ಹೆಂಡತಿಯಿಂದ ಒಬ್ಬ ಮಗಳನ್ನು ಹೊಂದಿದ್ದಾರೆ. ಕೊರಿಯಾ ದೇಶದ ಆ ಯಪ್ ನಿನ್ನೆ ಹುಡುಗಿಯರಿಗೆ ಗೇಮ್ ನಲ್ಲಿ ಕೊನೆಯ ಟಾಸ್ಕ್ ನೀಡಿತ್ತಂತೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.


ಸಂತ್ರಸ್ತರ ಕೋಣೆಯಲ್ಲಿ ಒಂದು ಟಿಪ್ಪಣಿ ಕಂಡುಬಂದಿದೆ, ಅದರ ಮೇಲೆ "ನಿಜವಾದ ಜೀವನ ಕಥೆ. ಈಸ್ ಡೈರಿ ಮೇನ್ ಜೋ ಕುಚ್ ಭಿ ಲಿಖಾ ಹೈನ್, ವೋ ಸಬ್ ಪಢ್ ಲೋ, ಕ್ಯುಂಕಿ ಯೇ ಸಬ್ ಸಚ್ ಹೈನ್" ಎಂದು ಬರೆದಿರುವ ಎಮೋಜಿ ಇದೆ. (ಈ ಡೈರಿಯಲ್ಲಿ ನೀವು ಏನೇ ನೋಡುತ್ತಿದ್ದರೂ ಎಲ್ಲವನ್ನೂ ಓದಿ, ಏಕೆಂದರೆ ಎಲ್ಲವೂ ನಿಜ) ಈಗಲೇ ಓದಿ! "ಕ್ಷಮಿಸಿ, ಕ್ಷಮಿಸಿ ಅಪ್ಪಾ," ಆತ್ಮಹತ್ಯೆ ಪತ್ರದಲ್ಲಿ ಅಳುವ ಎಮೋಜಿ ಇದೆ ಎಂದು ಉಲ್ಲೇಖಿಸಲಾಗಿದೆ.

ಪ್ರಾಥಮಿಕ ವಿಚಾರಣೆಗಳು ಸಹೋದರಿಯರು ಮೊಬೈಲ್ ಫೋನ್‌ಗಳಲ್ಲಿ ಸಾಕಷ್ಟು ಸಮಯ ಕಳೆಯುತ್ತಿದ್ದರು . ಕೊರಿಯನ್ ಗೇಮಿಂಗ್ ಅಪ್ಲಿಕೇಶನ್‌ಗೆ ವ್ಯಸನಿಯಾಗಿದ್ದರು ಎಂದು ಸೂಚಿಸುತ್ತವೆ.

ತನ್ನ ಹೆಣ್ಣುಮಕ್ಕಳು ಟಾಸ್ಕ್ ಆಧಾರಿತ ಆಟವನ್ನು ಆಡುತ್ತಿದ್ದಾರೆಂದು ತನಗೆ ತಿಳಿದಿರಲಿಲ್ಲ ಎಂದು ಸಂತ್ರಸ್ತರ ತಂದೆ ಹೇಳಿದರು. ತನಿಖೆಯ ಸಮಯದಲ್ಲಿ ವಿಧಿವಿಜ್ಞಾನ ತಜ್ಞರು ಅದರ ಬಗ್ಗೆ ಅವರಿಗೆ ತಿಳಿಸಿದ್ದಾರೆ. ಆಟದಲ್ಲಿ 50 ಟಾಸ್ಕ್‌ಗಳಿವೆ ಮತ್ತು ಕೊನೆಯದನ್ನು ಸೋಮವಾರ ಪೂರ್ಣಗೊಳಿಸಲಾಗಿದೆ ಎಂದು ಅವರು ಹೇಳಿದರು.

ಕುಟುಂಬದ ಫ್ಲಾಟ್‌ನಲ್ಲಿ ಹುಡುಕಾಟ ನಡೆಸಿದಾಗ, ಪೊಲೀಸರು ಹುಡುಗಿಯರ ಪೋಷಕರಿಗೆ ಉದ್ದೇಶಿಸಲಾದ ಒಂದು ಪುಟದ ಆತ್ಮಹತ್ಯೆ ಪತ್ರವನ್ನು ವಶಪಡಿಸಿಕೊಂಡರು. ಪೊಲೀಸರು ತನಿಖೆಯ ಭಾಗವಾಗಿ ಟಿಪ್ಪಣಿಯನ್ನು ವಶಕ್ಕೆ ಪಡೆದರು. ಘಟನೆಯ ನಂತರ ಸಂತ್ರಸ್ತರ ಕೋಣೆಯ ನೆಲದ ಮೇಲೆ ಹರಡಿರುವ ಕುಟುಂಬ ಸದಸ್ಯರ ಫೋಟೋಗಳನ್ನು ಪೊಲೀಸರು ನೋಡಿದ್ದಾರೆ. ನಿವಾಸಿಗಳು ದೊಡ್ಡ ಶಬ್ದ ಕೇಳಿದೆ ಎಂದು ವರದಿ ಮಾಡಿದರು ಮತ್ತು ಎಚ್ಚರಿಕೆ ನೀಡಿದರು, ನಂತರ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಒಂದು ತಂಡ ಸ್ಥಳಕ್ಕೆ ತಲುಪಿ, ಪ್ರದೇಶವನ್ನು ಸುರಕ್ಷಿತಗೊಳಿಸಿ, ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿತು.

ಗಾಜಿಯಾಬಾದ್‌ನಲ್ಲಿ ನಡೆದ ಈ ಘಟನೆ ಅತ್ಯಂತ ಕರುಣಾಜನಕ ಮತ್ತು ಮನಕಲಕುವಂತದ್ದು. ಹದಿಹರೆಯದ ಹೆಣ್ಣುಮಕ್ಕಳು ಇಂತಹ ಡಿಜಿಟಲ್ ಜಾಲಕ್ಕೆ ಬಲಿಯಾಗುತ್ತಿರುವುದು ಇಡೀ ಸಮಾಜಕ್ಕೆ ಒಂದು ದೊಡ್ಡ ಎಚ್ಚರಿಕೆಯ ಗಂಟೆ.



ಕ್ಷಮಿಸಿ ಅಪ್ಪಾ. ನನಗೆ ತುಂಬಾ ಒಂಟಿತನ ಅನಿಸುತ್ತಿದೆ – ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿರುವ ತಮ್ಮ ವಸತಿ ಕಟ್ಟಡದ ಒಂಬತ್ತನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ ಮೂವರು ಮುದ್ದು



ಸಹೋದರಿಯರ ಕೊನೆಯ ಮಾತುಗಳು ಇವು. ಬುಧವಾರ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಈ ಡಿಜಿಟಲ್ ಬಲೆ: ಎಂಥ ಕಲ್ಲು ಹೃದಯವನ್ನೂ ಕರಗಿಸುವ ಒಂದು ಕರುಣಾಜನಕ ಕಥೆಯಾಗಿ ಓದುಗರಿಗೆ ಸಂಕಟವಾಗುವುದರಲ್ಲಿ ಎರಡು ಮಾತಿಲ್ಲ.

ಚೇತನ್ ಅವರ ಮನೆಯಲ್ಲಿ ಹಿಂದೆಲ್ಲಾ ನಗು ಮತ್ತು ಗಲಾಟೆ ತುಂಬಿರುತ್ತಿತ್ತು. ಆದರೆ ಕಳೆದ ಕೆಲವು ತಿಂಗಳುಗಳಿಂದ ಅವರ ಮೂವರು ಹೆಣ್ಣುಮಕ್ಕಳ ವರ್ತನೆಯಲ್ಲಿ ನಿಗೂಢ ಬದಲಾವಣೆ ಕಂಡುಬಂದಿತ್ತು. ಈ ಕಥೆಯು ಆಧುನಿಕ ಜಗತ್ತಿನ ಕರಾಳ ಮುಖವನ್ನು ತೆರೆದಿಡುತ್ತದೆ.

**ಬದಲಾದ ದಿನಚರಿ:** ಮಕ್ಕಳು ಶಾಲೆಯನ್ನು ತಪ್ಪಿಸಲು ಶುರು ಮಾಡಿದರು. ಸದಾ ಗೆಳೆಯರೊಂದಿಗೆ ಆಡುತ್ತಿದ್ದ ಅಪಾರ್ಟ್‌ಮೆಂಟ್ ಗಾರ್ಡನ್ ಈಗ ಅವರಿಗೆ ಬೇಡವಾಗಿತ್ತು. ಬದಲಿಗೆ, ಅವರು ಒಂದು ಸಣ್ಣ ಕೋಣೆಯಲ್ಲಿ ಕುಳಿತು ಗಂಟೆಗಟ್ಟಲೆ ಫೋನ್‌ಗಳಲ್ಲಿ ಮುಳುಗಿರುತ್ತಿದ್ದರು. ಅವರು ಆಡುತ್ತಿದ್ದದ್ದು ಸಂತೋಷ ನೀಡುವ ಆಟವಾಗಿರಲಿಲ್ಲ; ಅದು "ಆಜ್ಞಾಪಾಲನೆ" (Compliance) ಕುರಿತಾದ ಅಪಾಯಕಾರಿ ಆಟವಾಗಿತ್ತು. ಆಟವು ಅವರನ್ನು ಮಾನಸಿಕವಾಗಿ ಎಷ್ಟು ಕಟ್ಟಿಹಾಕಿತ್ತೆಂದರೆ, ಒಂದು ವೇಳೆ ಆಟ ನಿಲ್ಲಿಸಿದರೆ ತಮ್ಮ ವರ್ಚುವಲ್ (Virtual) ಜಗತ್ತಿಗೆ ದ್ರೋಹ ಬಗೆದಂತೆ ಎಂದು ಅವರು ನಂಬಿದ್ದರು. ಇದು ಕುಖ್ಯಾತ 'ಬ್ಲೂ ವೇಲ್' ಚಾಲೆಂಜ್‌ನಂತೆಯೇ ಇತ್ತು.

ಫೆಬ್ರವರಿ 3ರ ಸಂಜೆ, ಮಕ್ಕಳ ಕುಸಿಯುತ್ತಿರುವ ಅಂಕಗಳು ಮತ್ತು ಅವರ ವಿಚಿತ್ರ ನಡವಳಿಕೆಯನ್ನು ನೋಡಿ ಸಹನೆ ಕಳೆದುಕೊಂಡ ತಂದೆ ಚೇತನ್, ಇವರುಗಳ ಮೊಬೈಲ್‌ಗಳನ್ನು ಕಿತ್ತುಕೊಂಡರು. ಆದರೆ ಅವರಿಗೆ ಆ "50 ಕಾರ್ಯಗಳ" ಬಗ್ಗೆ ಅರಿವಿರಲಿಲ್ಲ. ಆಟವು ಆಗಲೇ ಮಕ್ಕಳ ಮನಸ್ಸಿನಲ್ಲಿ "ಈ ಪ್ರಪಂಚ ಒಂದು ಸೆರೆಮನೆ, ಮುಂದಿನ ಹಂತಕ್ಕೆ ಹೋಗಲು ಕೊನೆಯ ತ್ಯಾಗದ ಅಗತ್ಯವಿದೆ" ಎಂದು ವಿಷ ತುಂಬಿತ್ತು.

**ಆ ಕರಾಳ ರಾತ್ರಿ**

ಫೆಬ್ರವರಿ 4, 2026. ಇಡೀ ಅಪಾರ್ಟ್‌ಮೆಂಟ್ ಮೌನವಾಗಿತ್ತು. ಮುಂಜಾನೆ 3 ಗಂಟೆಯ ಸಮಯದಲ್ಲಿ, ಸಹೋದರಿಯರು ನಿಧಾನವಾಗಿ ಮನೆಯ ಸಣ್ಣ ದೇವರ ಕೋಣೆಯನ್ನು ಪ್ರವೇಶಿಸಿದರು. ಅವರ ಕಣ್ಣುಗಳಲ್ಲಿ ಭಯವಿರಲಿಲ್ಲ, ಬದಲಿಗೆ ಆಟವು ತುಂಬಿದ್ದ ಭ್ರಮೆಯಿತ್ತು.

ಮರುದಿನ ಬೆಳಿಗ್ಗೆ ಚೇತನ್ ಅವರಿಗೆ ಸಿಕ್ಕಿದ್ದು ಒಂದು ಡೈರಿ. ಅದರಲ್ಲಿ ವಿಚಿತ್ರವಾದ ಚಿತ್ರಗಳು ಮತ್ತು ಕಣ್ಣೀರು ತರಿಸುವಂತಹ ಒಂದು ಸಾಲು ಇತ್ತು:"ನಮ್ಮನ್ನು ಕ್ಷಮಿಸಿ ಅಪ್ಪ, ನಾವು ಸ್ವತಂತ್ರರಾಗಲು ಹೊರಟಿದ್ದೇವೆ. ಈ ಜಗತ್ತು ನಮಗಾಗಿ ಅಲ್ಲ."

**ಗಮನಿಸಿ:** ಈ ಕಥೆಯು ಇಂದಿನ ತಂತ್ರಜ್ಞಾನದ ಅತಿಯಾದ ಬಳಕೆಯ ಬಗ್ಗೆ ನಮಗೆ ಎಚ್ಚರಿಕೆ ನೀಡುತ್ತದೆ. ಮಕ್ಕಳ ಮಾನಸಿಕ ಆರೋಗ್ಯ ಮತ್ತು ಅವರ ಡಿಜಿಟಲ್ ಚಟುವಟಿಕೆಗಳ ಮೇಲೆ ನಿಗಾ ಇಡುವುದು ಎಷ್ಟು ಮುಖ್ಯ ಎಂಬುದನ್ನು ಇದು ನೆನಪಿಸುತ್ತದೆ.

ಚೇತನ್ ಆ ಡೈರಿಯನ್ನು ಹಿಡಿದು ಸ್ತಬ್ದರಾಗಿ ನಿಂತಿದ್ದರು. ಮನೆಯ ದೇವರ ಕೋಣೆಯಲ್ಲಿ ಅವರ ಹೆಣ್ಣುಮಕ್ಕಳು ಸಣ್ಣ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಅವರ ಕೈಗಳ ಮೇಲೆ ವಿಚಿತ್ರವಾದ ಸಂಕೇತಗಳನ್ನು ಬಿಡಿಸಲಾಗಿತ್ತು.

1. **ರಹಸ್ಯ ಬಯಲು:** ಚೇತನ್ ತಕ್ಷಣ ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಿ, ಅವರ ಫೋನ್‌ಗಳನ್ನು ಒಬ್ಬ ಸೈಬರ್ ತಜ್ಞ ಸ್ನೇಹಿತನಿಗೆ ನೀಡಿದರು. ಅಲ್ಲಿ ಬಯಲಾದ ಸತ್ಯ ಕೇಳಿ ಅವರ ಎದೆ ಝಲ್ಲೆಂದಿತು. ಮಕ್ಕಳು ಆಡುತ್ತಿದ್ದದ್ದು "ದಿ ಗ್ಲಾಸ್ ಕಿಂಗ್‌ಡಮ್" (The Glass Kingdom) ಎಂಬ ಅನಾಮಧೇಯ ಕೊರಿಯನ್ ಸರ್ವರ್‌ನ ಆಟ. ಈ ಆಟದಲ್ಲಿ 'ಅಡ್ಮಿನ್' ಮಕ್ಕಳನ್ನು "ದೇವದೂತರು" ಎಂದು ಕರೆಯುತ್ತಿದ್ದ ಮತ್ತು ಅವರಿಗೆ ನೀಡಲಾಗಿದ್ದ 50ನೇ ಕಾರ್ಯ: "ಈ ಭೌತಿಕ ದೇಹವನ್ನು ತ್ಯಜಿಸಿ ವರ್ಚುವಲ್ ಸ್ವರ್ಗವನ್ನು ಸೇರುವುದು."
2. **ತಂದೆಯ ತಲ್ಲಣ**
   ಚೇತನ್ ತಮ್ಮ ಮಕ್ಕಳನ್ನು ಪ್ರೀತಿಸುತ್ತಿದ್ದರು ನಿಜ, ಆದರೆ ಅವರ ಡಿಜಿಟಲ್ ಪ್ರಪಂಚದೊಳಗೆ ಇಣುಕಿ ನೋಡಿರಲಿಲ್ಲ. ಮಕ್ಕಳು ರೂಮಿನಲ್ಲಿ ಸೌಮ್ಯವಾಗಿದ್ದಾರೆ ಎಂದರೆ ಸುರಕ್ಷಿತವಾಗಿದ್ದಾರೆ ಎಂದು ಭಾವಿಸಿದ್ದರು. ಆದರೆ ಆ ಸೌಮ್ಯತೆಯ ಹಿಂದೆ ಭೀಕರವಾದ ಮಾನಸಿಕ ಯುದ್ಧ ನಡೆಯುತ್ತಿತ್ತು.
   ಇಂಥ ರೋಚಕ ಘಟನೆಗಳು ಇತರ ಪೋಷಕರಿಗೆ ಎಚ್ಚರಿಕೆಯ ಕರೆಗಂಟೆಗಳಾಗಬೇಕು.ಮಕ್ಕಳಿಗಾಗಿ ದುಡಿದೂ ದುಡಿದು ಆಸ್ತಿ ಮಾಡಿಡುವುದಕಿಂತಲೂ, ಅವರ ನಡೆಯ ಬಗ್ಗೆ, ಅವರ ಚರ್ಯೆಯ ಮೇಲೆ ಅಗತ್ಯ ನಿಗಾ ಇಡಲು ಸಾಕಷ್ಟು ಸಮಯ ಕೊಡುವುದು ಅತ್ಯಂತ ಅವಶ್ಯವಾಗಿದೆ.

- ಮಕ್ಕಳು ಇದ್ದಕ್ಕಿದ್ದಂತೆ ಒಂಟಿತನ ಬಯಸುತ್ತಿದ್ದರೆ ಗಮನಿಸಿ.
- ಅವರ ಸ್ಲೀಪ್ ಸೈಕಲ್ (ನಿದ್ರೆಯ ಸಮಯ) ಬದಲಾಗಿದ್ದರೆ ಅಥವಾ ಮಧ್ಯರಾತ್ರಿ ಎದ್ದು ಫೋನ್ ಬಳಸುತ್ತಿದ್ದರೆ ಎಚ್ಚರವಿರಲಿ.
- ಫೋನ್‌ನಲ್ಲಿ ವಿಚಿತ್ರವಾದ ಸಂಕೇತಗಳು, ಕೋಡ್ ವರ್ಡ್‌ಗಳು ಅಥವಾ ಅಪರಿಚಿತ ಆ ಯಪ್‌ಗಳಿವೆಯೇ ಎಂದು ಪರಿಶೀಲಿಸಿ.


ಇಂಥ ಅನೇಕ ಕಥೆಗಳು ದುರಂತದಲ್ಲಿ ಕೊನೆಗೊಳ್ಳುತ್ತಿವೆ. ತಂತ್ರಜ್ಞಾನಕ್ಕಿಂತ ಹೆಚ್ಚಾಗಿ ಮಕ್ಕಳಿಗೆ ನಮ್ಮ 'ಸಮಯ' ಮತ್ತು 'ಗಮನ'ದ ಅಗತ್ಯವಿದೆ. ತಂತ್ರಜ್ಞಾನದ ಈ ಯುಗದಲ್ಲಿ ಪೋಷಕರ ಜವಾಬ್ದಾರಿ ಕೇವಲ ಅನ್ನ, ಬಟ್ಟೆ, ಶಿಕ್ಷಣ ನೀಡುವುದಕ್ಕೆ ಸೀಮಿತವಾಗಿಲ್ಲ; ಮಕ್ಕಳ 'ಡಿಜಿಟಲ್ ಬದುಕು' ಹೇಗಿದೆ ಎಂಬುದನ್ನು ಗಮನಿಸುವುದು ಕೂಡ ಅವರ ಅನಿವಾರ್ಯ ಕರ್ತವ್ಯವಾಗಿದೆ. ಈ ವಿಚಾರದಲ್ಲಿ ಹೆತ್ತವರು ವಹಿಸಬೇಕಾದ ಮುನ್ನೆಚ್ಚರಿಕೆಗಳು ಮತ್ತು ಜವಾಬ್ದಾರಿಗಳು ಇಲ್ಲಿವೆ:

**ಪೋಷಕರು ವಹಿಸಬೇಕಾದ ಮುನ್ನೆಚ್ಚರಿಕೆಗಳು**

1. ವರ್ತನೆಯಲ್ಲಿನ ಬದಲಾವಣೆಗಳನ್ನು ಗಮನಿಸಿ
   ಮಕ್ಕಳು ಇದ್ದಕ್ಕಿದ್ದಂತೆ ಒಂಟಿತನ ಇಷ್ಟಪಡುತ್ತಿದ್ದರೆ, ಸರಿಯಾಗಿ ನಿದ್ರೆ ಮಾಡದಿದ್ದರೆ ಅಥವಾ ಊಟ ಸೇರುತ್ತಿಲ್ಲ ಎಂದರೆ ಅದನ್ನು ಕೇವಲ 'ಹದಿಹರೆಯದ ಸಮಸ್ಯೆ' ಎಂದು ನಿರ್ಲಕ್ಷಿಸಬೇಡಿ. ಫೋನ್ ಕಿತ್ತುಕೊಂಡಾಗ ಅವರು ಅತಿಯಾದ ಕೋಪ ಅಥವಾ ಹತಾಶೆ ತೋರುತ್ತಿದ್ದರೆ, ಅದು ವ್ಯಸನದ ಸಂಕೇತವಾಗಿರಬಹುದು.
2. **ಡಿಜಿಟಲ್ ಪೋಷಣೆ (Digital Parenting)**
   * **ಪೇರೆಂಟಲ್ ಕಂಟ್ರೋಲ್ ಆ ಯಪ್ಸ್:** 'Google Family Link' ನಂತಹ ಆ ಯಪ್‌ಗಳನ್ನು ಬಳಸಿ ಮಕ್ಕಳು ಎಷ್ಟು ಸಮಯ ಫೋನ್ ಬಳಸುತ್ತಿದ್ದಾರೆ ಮತ್ತು ಯಾವ ಆ ಯಪ್‌ಗಳನ್ನು ಇನ್‌ಸ್ಟಾಲ್ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ.
   * ವಯಸ್ಸಿನ ಮಿತಿ: ಆಟಗಳ ಮೇಲಿರುವ ವಯಸ್ಸಿನ ಮಿತಿಯನ್ನು (PEGI/ ESRB rating) ಗಮನಿಸದೆ ಯಾವುದೇ ಆ ಯಪ್ ನೀಡಬೇಡಿ.
3. **ಬೆಡ್‌ರೂಮ್‌ನಲ್ಲಿ ಫೋನ್ ಬಳಕೆಗೆ ನಿರ್ಬಂಧ**
   ರಾತ್ರಿ 9 ಅಥವಾ 10 ಗಂಟೆಯ ನಂತರ ಮಕ್ಕಳು ತಮ್ಮ ಕೊಠಡಿಯೊಳಗೆ ಫೋನ್ ಕೊಂಡೊಯ್ಯಲು ಬಿಡಬೇಡಿ. ಈ ಘಟನೆಯಲ್ಲಿ ಮಕ್ಕಳು ಮುಂಜಾನೆ 2-3 ಗಂಟೆಯ ಸಮಯದಲ್ಲಿ ಕೃತ್ಯ ಎಸಗಿದ್ದಾರೆ. ಇಂತಹ ಆಟಗಳ ಅಡ್ಮಿನ್‌ಗಳು ಮಕ್ಕಳನ್ನು ಸಂಪರ್ಕಿಸಲು ಮಧ್ಯರಾತ್ರಿಯನ್ನೇ ಆರಿಸಿಕೊಳ್ಳುತ್ತಾರೆ ಏಕೆಂದರೆ ಆಗ ಪೋಷಕರು ನಿದ್ರಿಸುತ್ತಿರುತ್ತಾರೆ.
   ಪೋಷಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

1. **ವಿಶ್ವಾಸದ ಸೇತುವೆ ನಿರ್ಮಿಸಿ:** ಮಕ್ಕಳಿಗೆ ಏನಾದರೂ ಸಮಸ್ಯೆಯಾದಾಗ ಅಥವಾ ಯಾರಾದರೂ ಬೆದರಿಕೆ ಹಾಕಿದಾಗ, ಅವರು ಮೊದಲು ಓಡಿ ಬಂದು ಅಪ್ಪ-ಅಮ್ಮನಿಗೆ ಹೇಳುವಷ್ಟು ನಂಬಿಕೆ ಅವರಲ್ಲಿರಬೇಕು. "ಫೋನ್‌ನಲ್ಲಿ ತಪ್ಪು ಮಾಡಿದರೆ ಅಪ್ಪ ಬೈಯುತ್ತಾರೆ ಅಥವಾ ಫೋನ್ ಕಿತ್ತುಕೊಳ್ಳುತ್ತಾರೆ" ಎಂಬ ಭಯವೇ ಅವರನ್ನು ಇಂತಹ ಕರಾಳ ಆಟಗಳ ಅಡ್ಮಿನ್‌ಗಳಿಗೆ ಹತ್ತಿರವಾಗಿಸುತ್ತದೆ.
2. **ಡಿಜಿಟಲ್ ಶಿಕ್ಷಣ ನೀಡಿ (Cyber Hygiene)**
   ಇಂಟರ್ನೆಟ್‌ನಲ್ಲಿ ಯಾರನ್ನೂ ನಂಬಬಾರದು, ಅಪರಿಚಿತ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು ಮತ್ತು ಕ್ಯಾಮೆರಾ ಮುಂದೆ ಖಾಸಗಿ ವಿಷಯಗಳನ್ನು ಹಂಚಿಕೊಳ್ಳಬಾರದು ಎಂದು ಮಕ್ಕಳಿಗೆ ತಿಳಿಹೇಳಿ. "ಬ್ಲೂ ವೇಲ್" ಅಥವಾ ಇತರ ಟಾಸ್ಕ್ ಆಧಾರಿತ ಆಟಗಳು ಹೇಗೆ ಮನಸ್ಸನ್ನು ನಿಯಂತ್ರಿಸುತ್ತವೆ ಎಂಬ ಅರಿವು ಮೂಡಿಸಿ.
3. **ಗುಣಮಟ್ಟದ ಸಮಯ (Quality Time)**
   ಮಕ್ಕಳೊಂದಿಗೆ ದಿನಕ್ಕೆ ಕನಿಷ್ಠ ಒಂದು ಗಂಟೆ ಇಂಟರ್ನೆಟ್ ರಹಿತ ಸಂಭಾಷಣೆ ನಡೆಸಿ. ಅವರ ಶಾಲೆಯ ಗೆಳೆಯರು ಯಾರು ಅವರಿಗೆ ಈಗ ಯಾವುದರ ಬಗ್ಗೆ ಆಸಕ್ತಿ ಇದೆ ಎಂಬುದನ್ನು ಕೇಳಿ ತಿಳಿಯಿರಿ. ಮಕ್ಕಳು ಡಿಜಿಟಲ್ ಜಗತ್ತಿನಲ್ಲಿ 'ವ್ಯಸನಿ'ಗಳಾಗಲು ಮುಖ್ಯ ಕಾರಣ ನಿಜ ಜೀವನದ ಒಂಟಿತನ.
4. **ವೃತ್ತಿಪರ ಸಹಾಯ ಪಡೆಯಲು ಹಿಂಜರಿಯಬೇಡಿ**
   ನಿಮ್ಮ ಮಗು ಡಿಜಿಟಲ್ ಆಟಗಳಿಗೆ ಬಲಿಯಾಗಿದೆ ಎಂದು ಅನಿಸಿದರೆ, ಕೂಡಲೇ ಸೈಕಾಲಜಿಸ್ಟ್ ಅಥವಾ ಸೈಬರ್ ಕ್ರೈಮ್ ತಜ್ಞರ ಸಹಾಯ ಪಡೆಯಿರಿ. ಇದು ಮುಜುಗರ ಪಡುವ ವಿಷಯವಲ್ಲ, ಪ್ರಾಣ ಉಳಿಸುವ ವಿಷಯ.

ಕೊನೆಯ ಮಾತು: ಆ ತಂದೆ ಎರಡನೇ ಮದುವೆಯಾಗಿದ್ದು ಅಥವಾ ಕುಟುಂಬದ ಹಿನ್ನೆಲೆ ಏನೇ ಇರಲಿ, ಮಕ್ಕಳು "ನಮಗೆ ಒಂಟಿತನವಾಗುತ್ತಿದೆ" ಎಂದು ಹೇಳಿರುವುದು ಸಮಾಜದ ದೊಡ್ಡ ಸೋಲು. ಪೋಷಕರೇ, ನಿಮ್ಮ ಮಕ್ಕಳಿಗೆ ಮೊಬೈಲ್ ನೀಡುವ ಮುನ್ನ ಅವರಿಗೆ ನಿಮ್ಮ 'ಸಮಯ'ವನ್ನು ನೀಡಿ. ಹದಿಹರೆಯ ಬಹಳ ಅಪಾಯಕಾರಿ ತಿರುವುಗಳಿಗೆ ದಾರಿ ಮಾಡಿಕೊಡುತ್ತದೆ. ಹಾಗಾಗಿ ಅತಿ ಜಾಗ್ರತೆಯಿಂದ ಅವರ ಬಗ್ಗೆ ಗಮನವನ್ನಿಡಿ. ಮಕ್ಕಳ ಕೈಗೆ ಫೋನ್ ಕೊಡುವ ಮೊದಲು, ಅವರಿಗೆ ಜೀವನದ ಮೌಲ್ಯಗಳನ್ನು ಮತ್ತು ಡಿಜಿಟಲ್ ಪ್ರಪಂಚದ ಮೋಸಗಳನ್ನು ಕಲಿಸುವುದು ಪೋಷಕರ ಮೊದಲ ಕರ್ತವ್ಯ.ಮಕ್ಕಳ ನಡವಳಿಕೆಯಲ್ಲಿ ವ್ಯತ್ಯಾಸ ಕಂಡರೆ ತಕ್ಷಣ ತಜ್ಞರ ಸಹಾಯ ಪಡೆಯಿರಿ. ಮೊಬೈಲ್ ಈ ದಿನಗಳಲ್ಲಿ ಎಲ್ಲರ ಅವಶ್ಯಕತೆ ಹಾಗೂ ಅವಿಭಾಜ್ಯ ಅಂಗವಾಗಿದೆ. ಅದನ್ನು ಅವರಿಂದ ಕಿತ್ತುಕೊಳ್ಳುವುದು ಪರಿಹಾರವಲ್ಲಬದಲಿಗೆ, ಅನುಮಾನ ಬಂದಲ್ಲಿ, ಅವರೊಂದಿಗೆ ಕುಳಿತು ಮಾತನಾಡುವುದು, ಅವರ ಬಗ್ಗೆ ನಿಗಾ ವಹಿಸುವುದು ಹೆತ್ತವರು ಮಾಡಬೇಕಾದ ಮೊದಲ ಪ್ರಯತ್ನ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,